ಆಗಸ್ಟ್ 5, 1990 ರೂ. 1.50

ಐಕ್ಯರಂಗ



ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಕರ್ನಾಟಕ ರಾಜ್ಯ ಸಮಿತಿಯ ವಾರಪತ್ರಿಕೆ

ಬಿ.ಜೆ.ಪಿ.ಯ ಒಳ ಹಂಬಲ ಬಹಿರಂಗ

"ಕೇಂದ್ರ ಸರಕಾರ ಮತ್ತೆ ಮತ್ತೆ ಎದುರಿಸುತ್ತಿರುವ ಬಿಕ್ಕಟ್ಟುಗಳನ್ನು ಗಮನಕ್ಕೆ ತಗೊಂಡು ಒಂದು ಸಂಭವನೀಯ ಮಧ್ಯಾವಧಿ ಚುನಾವಣೆಗೆ ಒಂದು ಆಕಸ್ಮಿಕ ಯೋಜನೆ ತಯಾರಿಸಬೇಕು" ಇದು ಜುಲೈ 21 ರಿಂದ 23 ರವರೆಗೆ ಮದ್ರಾಸಿನಲ್ಲಿ ನಡೆದ ಬಿ.ಜೆ.ಪಿ.ಯ ರಾಷ್ಟ್ರೀಯ ಕಾರ್ಯಕಾರಿಣಿಯ ಸಭೆ ನೀಡಿದ ಕರೆ. ರಾಷ್ಟ್ರೀಯ ರಂಗ ಸರ್ಕಾರಕ್ಕೆ ಪಕ್ಷದ ಬೆಂಬಲ ಹಿಂತೆಗೆದುಕೊಳ್ಳುವ ಪ್ರಶ್ನೆಯೇ ಇಲ್ಲ ಎಂದು ನಂತರ ಜುಲೈ 23 ರಂದು ಪತ್ರಿಕಾ ಸಮ್ಮೇಳನವೊಂದರಲ್ಲಿ ಬಿ.ಜೆ.ಪಿ. ಅಧ್ಯಕ್ಷ ಅದ್ವಾಣಿ ಸ್ಪಷ್ಟಪಡಿಸಿದರು. ಬಿ.ಜೆ.ಪಿ. ತನ್ನ ಬೆಂಬಲ ಮುಂದುವರಿಸುತ್ತದೆ, ಆದರೆ ಜನತಾದಳದೊಳಗಿನ ಚಟುವಟಿಕೆಗಳನ್ನು ಗಂಭೀರವಾಗಿ ಪರಿಗಣಿಸುತ್ತದೆ. ಇದರಿಂದ ದೇಶ ಒಂದು ದಿನ ಮಧ್ಯಾವಧಿ ಚುನಾವಣೆ ಎದುರಿಸಬೇಕಾದ ಸಂಭವ ಬರಬಹುದು. ಇಂತಹದೊಂದು ಸಂಭವ ಎದುರಿಸಲಿಕ್ಕಾಗಿಯೇ "ಆಕಸ್ಮಿಕ ಯೋಜನೆ".

ಈ ಹಿಂದೆ ಬಿ.ಜೆ.ಪಿ. ಮುಂದೆ 1994 ರಲ್ಲಿ ನಡೆಯಬೇಕಾದ ಚುನಾವಣೆಗಳಿಗೆ ಪಕ್ಷವನ್ನು ಸಿದ್ಧಗೊಳಿಸಲು ಎಸ್.ಎಸ್. ಭಂಡಾರಿ ನೇತೃತ್ವದ ಸಮಿತಿಯೊಂದನ್ನು ರಚಿಸಿತ್ತು. ಈಗ ಅದೇ ಸಮಿತಿಗೆ ಒಂದು ಮಧ್ಯಾವಧಿ ಚುನಾವಣೆಗೆ ಸಿದ್ಧಗೊಳ್ಳುವ ಕೆಲಸ ವಹಿಸಲಾಗಿದೆ.

ಹೇಗಿದೆ ಈ "ಆಕಸ್ಮಿಕ ಯೋಜನೆ"ಯ ಸ್ವರೂಪ? ಮದ್ರಾಸಿನ ಮೂರು ದಿನಗಳ ಸಭೆಯಲ್ಲಿ ಮಾಡಿದ ಭಾಷಣಗಳಿಂದ, ಅಂಗೀಕರಿಸಿದ ನಿರ್ಣಯಗಳಿಂದ ಅದನ್ನು ಅರ್ಥ ಮಾಡಿಕೊಳ್ಳಬಹುದು. ಇವೆಲ್ಲದರ ಸಾರಾಂಶ ಇಷ್ಟೆ. ಹಿಂದೂ ಕೋಮನ್ನು ಅತ್ಯಂತ ವ್ಯಾಪಕ ರೀತಿಯಲ್ಲಿ ಅಣಿನೆರೆಸುವುದು. ಯಾರ ವಿರುದ್ಧ? ಅಲ್ಪಸಂಖ್ಯಾತರ ವಿರುದ್ಧ! ಈ ಆಕಸ್ಮಿಕ ಯೋಜನೆಯ ಅಪಾಯವಿರುವುದು ಇಲ್ಲಿಯೇ.

ತನ್ನ ಪಕ್ಷ "ಜಾತ್ಯತೀತತೆಗೆ ಮತ್ತು ಕೋಮುಸೌಹಾರ್ದತೆಗೆ ಬದ್ಧವಾಗಿದೆ" ಎಂದು ಜುಲೈ 21ರಂದು ತನ್ನ ಉದ್ಘಾಟನಾ ಭಾಷಣದಲ್ಲಿ ಹೇಳಿಕೊಂಡಿದ್ದರು. ಆದರೆ ಅದೇ ಉಸಿರಿನಲ್ಲಿ "ಜಾತ್ಯತೀತತೆಯ ಹೆಸರಿನಲ್ಲಿ ಅಲ್ಪಸಂಖ್ಯಾತ ಕೋಮುವಾದವನ್ನು ಸುಪ್ರೀತಗೊಳಿಸುವ, ಹಿಂದೂ ಭಾವನೆಗಳನ್ನು ತುಚ್ಛೀಕರಿಸಲು ಹಿಂಜರಿಯದ ನಿಲುವನ್ನು ತಿರಸ್ಕರಿಸುತ್ತೇವೆ" ಎಂದೂ ಅವರು ಸ್ಪಷ್ಟಪಡಿಸಿದರು.

"ಅಲ್ಪಸಂಖ್ಯಾತ ಕೋಮುವಾದವನ್ನು ಸುಪ್ರೀತ ಗೊಳಿಸುವುದು" ಎಂದರೇನು? ಉದಾಹರಣೆಗೆ: ಅಲ್ಪಸಂಖ್ಯಾತ ಆಯೋಗವನ್ನು ರದ್ದುಪಡಿಸದೆ ಮುಂದುವರಿಸುವುದು! ಅಲ್ಪ ಸಂಖ್ಯಾತರ ಸಮಸ್ಯೆಯೆಂಬುದೇ ಇಲ್ಲ. ಹಾಗಿರುವಾಗ ಈ ಆಯೋಗ ಏಕೆ!--ಇದು ಬಿ.ಜೆ.ಪಿ. ಪ್ರಶ್ನೆ. ಅದೇ ಬಿ.ಜೆ.ಪಿ.ಪ್ರಕಾರ "ಹಿಂದೂ ಭಾವನೆ" ಎಂದೂ ಬಹುಸಂಖ್ಯಾತರ ಕೋಮುವಾದಕ್ಕೆ ಎಡೆಮಾಡಿಕೊಡುವುದಿಲ್ಲ!

ಇದೇ ರೀತಿ ಇನ್ನೊಂದು ಪ್ರಶ್ನೆ. ಹಿಂದೂಸ್ತಾನಿ ಭಾಷೆಯ ಎರಡು ಕವಲುಗಳಿಂದ ಹಿಂದಿ ಮತ್ತು ಉರ್ದು ನಡುವೆ ಸಮಾನ ಸ್ಥಾನಮಾನದ ಪ್ರಶ್ನೆ. ಹಿಂದೂಸ್ತಾನಿ ಮಾತನಾಡುವ ಪ್ರದೇಶಗಳಲ್ಲಿ ಮಾತ್ರವಲ್ಲ. ಬೇರೆಡೆ ಕೂಡಾ ಲಕ್ಷಾಂತರ ಜನ ಮಾತನಾಡುವ, ಬರೆಯುವ ಭಾಷೆಯನ್ನು ಶಿಕ್ಷಣ ಸಂಸ್ಥೆಗಳಲ್ಲಿ, ಸರಕಾರೀ ವ್ಯವಹಾರಗಳಲ್ಲಿ ಬಳಸಬೇಕೆಂಬ ಒತ್ತಾಯ ಬಿ.ಜೆ.ಪಿ. ಮಟ್ಟಿಗೆ "ಅಲ್ಪ ಸಂಖ್ಯಾತ ಕೋಮುವಾದವನ್ನು ಸುಪ್ರೀತಗೊಳಿಸುವ" ಕೃತ್ಯ.

ಪಾಕಿಸ್ತಾನೀ ಪ್ರೇರಿತ ಅತಿಕ್ರಮಣವನ್ನು ಧೀರತನದಿಂದ ಎದುರಿಸಿ ಹಿಮ್ಮೆಟ್ಟಿಸಿದ ಪಾಕಿಸ್ತಾನದ ಬದಲು ಭಾರತದೊಡನೆ ಸೇರ್ಪಡೆಯನ್ನು ಆರಿಸಿಕೊಂಡ ಕಾಶ್ಮೀರಿ ಜನತೆಯ ಸ್ವಂತಿಕೆಯನ್ನು ಕಾಯ್ದುಕೊಳ್ಳಬೇಕೆಂಬ ಅವರ ಮುಖಂಡರ ಒತ್ತಾಯದಲ್ಲಿ ಬಲವಿದೆ ಎಂದು ಕಂಡುಕೊಂಡ ನಮ್ಮ ಸಂವಿಧಾನದ ಕರ್ತೃಗಳು 370 ನೇ ಕಲಮನ್ನು ಸೇರಿಸುವುದು ಸೂಕ್ತ ಎಂದು ಭಾವಿಸಿದರು. ಗರಿಷ್ಟ ಸ್ವಾಯತತ್ತೆ ಬೇಕೆಂಬ ಕಾಶ್ಮೀರಿಗಳ ಆಕಾಂಕ್ಷೆಯನ್ನು ಈ ಮೂಲಕ ಅವರು ಒಪ್ಪಿಕೊಂಡರು. ಬಿ.ಜೆ.ಪಿ. ಪ್ರಕಾರ ಇಂತಹ ಆಕಾಂಕ್ಷೆ ಹಾಗೂ ಅದಕ್ಕೆ ನೀಡಿದ ಒಪ್ಪಿಗೆ ಕೂಡಾ "ಅಲ್ಪಸಂಖ್ಯಾತ ಕೋಮುವಾದವನ್ನು ಸುಪ್ರೀತಗೊಳಿಸುವ" ಕೆಲಸ!

ಭಾರತದ ಆಂತರಿಕ ವ್ಯವಹಾರಗಳಲ್ಲಿ (ಕಾಶ್ಮೀರ, ಪಂಜಾಬುಗಳಲ್ಲಿ) ಮೂಗು ತೂರಿಸುವ ಪಾಕಿಸ್ತಾನೀ ಆಳರಸರ ವಿರುದ್ಧ ತೀವ್ರ ಹೋರಾಟದಲ್ಲಿ ಭಾರತದ ಪ್ರಜಾಪ್ರಭುತ್ವವಾದೀ ಪಕ್ಷಗಳು, ಸಂಘಟನೆಗಳು, ಗುಂಪುಗಳು, ವ್ಯಕ್ತಿಗಳು ತೊಡಗಿದ್ದಾರೆ. ಅದೇ ವೇಳೆಗೆ ಪಾಕಿಸ್ತಾನದ ಜನತೆಯೊಡನೆ ಮಿತ್ರತ್ವದ ಸಹಕಾರದ ಸಂಬಂಧಗಳನ್ನು ಕಾದುಕೊಂಡು ಬಲಪಡಿಸಬೇಕೆಂದೂ ಅವರು ಬಯಸುತ್ತಾರೆ.

ಪುಟ 8 ಕ್ಕೆ

ಸಂಪುಟ 12 ಸಂಚಿಕೆ 31

ಒಳಪುಟಗಳಲ್ಲಿ



ಹಿರಿಯ ರೈತ ಮುಖಂಡ ಕಾಂ.ಪಾಪಣ್ಣ ನಿಧನ

ಕಾಂ.ಎನ್.ಕೆ. ಉಪಾಧ್ಯಾಯ

ಹಿರಿಯ ಸ್ವಾತಂತ್ರ್ಯ ಹೋರಾಟಗಾರರೂ, ರೈತ ಕಾರ್ಮಿಕರ ಚಳುವಳಿಗೆ ತನ್ನ ಇಡೀ ಜೀವನವನ್ನೇ ಮೀಸಲಿಟ್ಟಿದ್ದ ಸಿ.ಪಿ.ಐ. (ಎಂ) ಕಾರ್ಯಕರ್ತ ಜಿ.ಪಾಪಣ್ಣನವರು ತಮ್ಮ ಸ್ವಂತ ಊರಾದ ಶಿಡ್ಲಘಟ್ಟ ತಾಲೂಕಿನ ಮಳ್ಳೂರಲ್ಲಿ ಜುಲೈ 29 ರಂದು ರಾತ್ರಿ ಕೊನೆಯುಸಿರೆಳೆದರು. 1918 ರಲ್ಲಿ ಜನಿಸಿದ ಪಾಪಣ್ಣನವರು 18 ನೆ ವಯಸ್ಸಿನಲ್ಲಿಯೇ ರಾಜಕೀಯ ಪ್ರವೇಶಿಸಿ 1938 ರಿಂದಲೂ ಸ್ವಾತಂತ್ರ್ಯ ಚಳುವಳಿಯಲ್ಲಿಯೇ ಭಾಗವಹಿಸುತ್ತಾ ಬಂದಿದ್ದು ನೂರಾರು ಯುವಕರನ್ನು ಈ ಚಳುವಳಿಗೆಳೆದರು. 6 ತಿಂಗಳು ಕಾರಾಗ್ರಹದಲ್ಲಿದ್ದರು. 1942 ರಲ್ಲಿ ಗ್ರಾಮ ಪಂಚಾಯತ್ ಚೆಯರ್‌ಮನ್‌ರಾಗಿಯೂ, 1947 ರಲ್ಲಿ ಗ್ರಾಮಸೇವಾ ಸಹಕಾರಿ ಸಂಘ, 1966ರಲ್ಲಿ ಉಗ್ಗನೇಕಾರರ ಸಂಘಗಳನ್ನು ಸ್ಥಾಪಿಸಿದರು. 1958 ರಲ್ಲಿ ಮಳ್ಳೂರಿನಲ್ಲಿ ಹರಿಜನ ಗಿರಿಜನರನ್ನು ದೇವಸ್ಥಾನಗಳಿಗೆ ಒಳಹೋಗಿಸಿದರು. ಊರಲ್ಲಿ ಯಾವ ತರದ ತಂಟೆ ಉಂಟಾದರೂ ಕೂಡ ಅವುಗಳನ್ನು ಪಂಚಾಯತಿಯ ಮೂಲಕ ಬಗೆಹರಿಸುತ್ತಿದ್ದರು. ಅವರ ಸರಳ ಜೀವನ ಎಲ್ಲ ಪಕ್ಷ- ಜಾತಿಯವರನ್ನು ಆಕರ್ಷಿಸುತ್ತಿತ್ತು. ಅವರು ಸಾಯುವ ದಿನದವರೆಗೂ ಜನ ಅವರ ಸಲಹೆ ಕೇಳಲು ಬರುತ್ತಿದ್ದರು. ಇತ್ತೀಚಿಗಿನ ದಿನಗಳಲ್ಲಿ ಅವರಿಗೆ ಮಾತಾಡುವ ಶಕ್ತಿಯಿಲ್ಲದಿದ್ದರೂ ಕೂಡ ಹಲವಾರು ಜನ ಸಲಹೆ ಕೇಳಲು ಬಂದಾಗ ಕೈ ಸನ್ನೆಯಿಂದಲೇ ಪರಿಹಾರ ಒದಗಿಸುತ್ತಿದ್ದರೆಂದು ಸ್ಮಶಾನಯಾತ್ರೆ ದಿನ ಹಲವಾರು ಜನ ನನಗೆ ಹೇಳಿದರು. ಈ ಭಾಗದ ಗ್ರಾಮಗಳ "ತಾತ" ನನ್ನು ಕಳೆದುಕೊಂಡೆವೆಂದು ದುಃಖಿಸಿದರು.

ದೇವರಾಜಅರಸರಿಗೂ ಪಾಪಣ್ಣನವರಿಗೂ ನಿಕಟ ಸಂಬಂಧವಿತ್ತಂತೆ. 1973 ರಲ್ಲಿ ದೇವರಾಜ ಅರಸರವರು ಮುಖ್ಯ ಮಂತ್ರಿಯಾಗಿದ್ದಾಗ ಪಾಪಣ್ಣನವರ ಹತ್ತಿರ ಹೋಗಿ "ನಿಮ್ಮನ್ನು ಎಂ.ಎಲ್.ಸಿ. ಮಾಡುತ್ತೇನೆಂದು ಎಷ್ಟು ಒತ್ತಾಯಿಸಿದರೂ ಕೂಡ ಅದನ್ನು ನಿರಾಕರಿಸಿ ನೀವು ಪಾಪಣ್ಣನ ಜೊತೆ ಮಾತನಾಡುತ್ತಿರೆಂಬುದನ್ನು

ಪುಟ 8 ಕ್ಕೆ

ಸೊರಟೂರು ಗೋಲಿಬಾರು: ಸಿ.ಪಿ.ಐ (ಎಂ) ಖಂಡನೆ

ಗದಗ ತಾಲ್ಲೂಕಿನ ಸೊರಟೂರು ಗ್ರಾಮದಲ್ಲಿ ಹರಿಜನರ ಮೇಲೆ ನಡೆದ ದೌರ್ಜನ್ಯವನ್ನು ಪೋಲೀಸರ ಗೋಲಿಬಾರನ್ನು ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಬಲವಾಗಿ ಖಂಡಿಸುತ್ತದೆ. ಎಂದು ರಾಜ್ಯ ಸೆಕ್ರೆಟಾರಿಯೇಟ್ ಸದಸ್ಯ ಕಾಂ.ಎನ್.ಕೆ. ಉಪಾಧ್ಯಾಯರು ಹೇಳಿಕೆಯೊಂದರಲ್ಲಿ ತಿಳಿಸಿದ್ದಾರೆ. ರಾಜ್ಯ ರೈತ ಸಂಘದವರು ನೀಲಗಿರಿ ಕಡಿಯುವುದನ್ನು ತಪ್ಪಿಸಲು ಗೋಲಿಬಾರು ನಡೆಯಿತೆಂಬ ಸರಕಾರಿ ಹೇಳಿಕೆ ಸತ್ಯಕ್ಕೆ ದೂರವಾಗಿದೆ. ಹರಿಜನರ ಮೇಲೆ ದೌರ್ಜನ್ಯ ನಡೆದಿದೆ, ಮನೆ ಲೂಟಿ ಮಾಡಲಾಗಿದೆ. ಮೂರು ಜನ ಮೃತಪಟ್ಟಿದ್ದಾರೆ. ಮರ ಕಡಿಯುವ ಕಾರ್ಯಕ್ರಮ ಬಹಳ ತಿಂಗಳಿಂದ ನಡೆದಿದೆ ಎಂದು ಹೇಳುತ್ತಿರುವ ಪೋಲೀಸ್ ಅಧಿಕಾರಿಗಳು ಅದನ್ನು ತಡೆಯಲು ಸಕಾಲಿಕ ಕ್ರಮ ತೆಗೆದುಕೊಳ್ಳುವುದರಲ್ಲಿ ವಿಫಲರಾಗಿರುವುದು ಖಂಡನೀಯ. ಸಕಾಲದಲ್ಲಿ ಮುಂಜಾಗ್ರತೆವಹಿಸಿದ್ದರೆ, ಜೀವಹಾನಿ, ಆಸ್ತಿಹಾನಿಯನ್ನು ತಪ್ಪಿಸಬಹುದಾಗಿತ್ತು. ಆದರೆ ಹರಿಜನರ ಮೇಲೆ ನಡೆದ ದೌರ್ಜನ್ಯ ಹೆಚ್ಚಾಗುತ್ತಿರುವುದರ ಕುರಿತು ಸಿ.ಪಿ.ಐ. (ಎಂ) ಆತಂಕ ವ್ಯಕ್ತಪಡಿಸಿದೆ. ಅದನ್ನು ತಡೆಹಿಡಿಯಲು ಎಡ ಮತ್ತು ವಿಚಾರವಾದಿ ಶಕ್ತಿಗಳು ಮುಂದೆ ಬರಬೇಕೆಂದು ಕೇಳಿಕೊಂಡಿದೆ. ಸೊರಟೂರು ಗಲಭೆಯ ಕುರಿತು ನ್ಯಾಯಾಂಗ ವಿಚಾರಣೆ ನಡೆಸಬೇಕೆಂದು ಮೃತರಾದವರ ಕುಟುಂಬಕ್ಕೆ, ಆಸ್ತಿ ಕಳಕೊಂಡವರಿಗೂ ಯೋಗ್ಯ ಪರಿಹಾರ ಕೊಡಬೇಕೆಂದು ಸರಕಾರವನ್ನು ಸಿ.ಪಿ.ಐ.(ಎಂ) ಒತ್ತಾಯಿಸಿದೆ.

ವಿಜ್ಞಾನ - ತಂತ್ರಜ್ಞಾನ

INSAT - 1D ಯಶಸ್ವಿ ಉಡಾವಣೆ

INSAT-1D ಸಂಪರ್ಕ ಉಪಗ್ರಹವನ್ನು ಯಶಸ್ವಿಯಾಗಿ ಉಡಾಯಿಸಿ, ಅದನ್ನು ಸರಿಯಾದ ಸ್ಥಾನಕ್ಕೆ ತಂದು ಅದು ಕೆಲಸ ಮಾಡಲು ಆರಂಭಿಸಿದೆ. ಈ ಉಪಗ್ರಹಕ್ಕೆ ದೇಶದ ಸಂಪರ್ಕ ವ್ಯವಸ್ಥೆ ಮತ್ತು ಟೆಲಿವಿಷನ್ ಜಾಲವನ್ನು ವ್ಯಾಪಕಗೊಳಿಸುವಲ್ಲಿ, ಉತ್ತಮ ಪಡಿಸುವುದರಲ್ಲಿ ಪ್ರಮುಖ ಪಾತ್ರವಿದೆ. ಇದರ ಮೊದಲಿನ INSAT - 1e ವಿಫಲವಾಗಿತ್ತು. ಸಂಪರ್ಕ ವ್ಯವಸ್ಥೆ ಮತ್ತು ಟೆಲಿವಿಷನ್ ಜಾಲ ಈಗಾಗಲೇ ಜೀವಾವಧಿ ಮುಗಿಯುತ್ತಿರುವ INSAT--1B ಮೇಲೆ ಪೂರ್ಣವಾಗಿ ಅವಲಂಬಿತವಾಗಿತ್ತು.

ನರ್ಮದಾ ಯೋಜನೆ

ನರ್ಮದಾ ಯೋಜನೆ ವಿವಾದಾಸ್ಪಾದವಾಗಿದ್ದು, ಇದನ್ನು ಪರಿಸರವಾದಿಗಳು ತೀವ್ರ ಟೀಕೆಗೊಳಪಡಿಸಿದ್ದರು. ಕೇಂದ್ರದ ಪರಿಸರ ಸಚಿವಾಲಯ ನರ್ಮದಾ ಯೋಜನೆಗೆ ಅನುಮತಿ ನೀಡಿದೆ. ಕೆಲವು ಪರಿಸರವಾದಿಗಳು ಎಲ್ಲಾ ನೀರಾವರಿ, ಯೋಜನೆಗಳ ಬಗ್ಗೆ ಆಕ್ಷೇಪ, ಅತಿರಂಜಿತ ಅಪಾಯದ ಹುಯಿಲು ಎಬ್ಬಿಸುತ್ತಿರುತ್ತಾರೆ. ಈ ಯೋಜನೆ ಮಧ್ಯಪ್ರದೇಶ, ಗುಜರಾತ್ ರಾಜ್ಯಗಳ ವ್ಯಾಪ್ತಿಯಲ್ಲಿ ಬರುತ್ತದೆ. ಈ ಯೋಜನೆ ಮಧ್ಯಪ್ರದೇಶದ ಅರಣ್ಯ ಪ್ರದೇಶಗಳನ್ನು ಮುಳುಗಡೆ ಮಾಡಿ ಹಲವಾರು ಆದಿವಾಸಿಗಳ ಜೀವನ ವಿಧಾನದ ಮೇಲೆ ಪರಿಣಾಮ ಮಾಡುತ್ತದೆ. ಆದರೆ ಅದು ನೀರಾವರಿ ಪ್ರಯೋಜನ ನೀಡುವುದು ಗುಜರಾತಿನ ಶ್ರೀಮಂತ ರೈತರಿಗೆ ಎಂಬಿತ್ಯಾದಿ ಮಾತುಗಳು ಕೇಳಿ ಬಂದಿವೆ. ಎಲ್ಲಾ ದೊಡ್ಡ ಯೋಜನೆಗಳ ಪ್ರಯೋಜನ, ಪರಿಸರ ಪರಿಣಾಮದ ಖರ್ಚು ಇತ್ಯಾದಿಗಳ ವೈಜ್ಞಾನಿಕ ವಿಶ್ಲೇಷಣೆ ಅಗತ್ಯ. ಈ ವಿಶ್ಲೇಷಣೆ ಬಗ್ಗೆಸಾರ್ವಜನಿಕ ಅಭಿಪ್ರಾಯವನ್ನು ವಿಶ್ವಾಸಕ್ಕೆ ತೆಗೆದು ಕೊಳ್ಳುವುದು ಅಷ್ಟೇ ಅಗತ್ಯ. ಅಲ್ಲದೆ ಯೋಜನೆಯಿಂದ ನಿರ್ವಸಿತರಾಗುವ ಜನರಿಗೆ ಪರಿಹಾರವನ್ನು ತುರ್ತಾಗಿ ಮಾನವೀಯ ರೀತಿಯಲ್ಲಿ ಒದಗಿಸುವ ವ್ಯವಸ್ಥೆಯ ಅಭಾವ ಸಹ ಹೆಚ್ಚಾಗಿ ಇಂತಹ ಯೋಜನೆಗಳಿಗೆ ವಿರೋಧದ ರೂಪ ತೆಗೆದುಕೊಳ್ಳುತ್ತದೆ. ಈ ಅಂಶಗಳನ್ನು ಗುವನಕ್ಕೆ ತೆಗೆದುಕೊಂಡು ಅಭಿವೃದ್ಧಿ ಯೋಜನೆಗೆ ಅಂಧ ಪ್ರತಿಗಾಮಿ ವಿರೋಧ ತೋರುವ ಅತಿವಾದಿ ಪರಿಸರವಾದಿಗಳನ್ನು ಜನತೆಯಿಂದ ದೂರವಿಡುವ ಅಗತ್ಯವಿದೆ.

ತಂತ್ರಜ್ಞಾನ ಮತ್ತು ರಾಜಕೀಯ

ಭೂಮಿಯ ರಕ್ಷಾಕವಚ ಓಝೋನ್‌ನಲ್ಲಿ ತೂತು, ಅದರ ಅಪಾಯ, ಇದಕ್ಕೆ ಕಾರಣವಾಗಿರುವ ರಾಸಾಯನಿಕಗಳಿಗೆ ಬದಲಿಯನ್ನು ಆದಷ್ಟು ಬೇಗ ಉಪಯೋಗಕ್ಕೆ ತರುವ ಬಗ್ಗೆ ಹಿಂದೆ ಐಕ್ಯರಂಗದಲ್ಲಿ ಓದಿದ್ದೀರಿ (ಮೇ 1990 ರ ಸಂಚಿಕೆ 21). ಈ ಬಗ್ಗೆ ಆ ಮೇಲೆ ಅಂತರರಾಷ್ಟ್ರೀಯ ಸಭೆ ನಡೆದಿದ್ದು ಆಸಕ್ತಿಕಾರಕ ಪರಿಣಾಮ ಬೀರಿ 'ಓಝೋನ್'ಗೆ ಮಾರಕವಾದ ರಾಸಾಯನಿಕಗಳ ಬದಲಿಗೆ ಹೊಸ ರಾಸಾಯನಿಕಗಳನ್ನು ಜಗತ್ತಿನಾದ್ಯಂತ ಉಪಯೋಗ ತರುವ ಬಗೆ, ಅದಕ್ಕೆ ಬೇಕಾದ ಆರ್ಥಿಕ ಸಂಪನ್ಮೂಲ, ತಂತ್ರಜ್ಞಾನ ವನ್ನು ಎಲ್ಲಾ ದೇಶಗಳಿಗೆ ಒದಗಿಸುವ ಬಗ್ಗೆ ಈ ಸಭೆ ಒಂದು ಅಂತರಾಷ್ಟ್ರೀಯ ರೂಪಿಸಬೇಕಾಗಿತ್ತು. ಇದರಲ್ಲಿ ಅಭಿವೃದ್ಧಿ ಮತ್ತು ಅಭಿವೃದ್ಧಿ ಹೊಂದುತ್ತಿರುವ ಮೂರನೇ ಜಗತ್ತಿನ ದೇಶಗಳ ನಡುವೆ ತೀವ್ರ ವಿವಾದವುಂಟಾಗಿತ್ತು. ಕರಡು ಒಪ್ಪಂದಕ್ಕೆ ಸಹಿ ಹಾಕಲು ಹಿಂದೆ ಭಾರತ ಮತ್ತು ಚೀನಾ ನಿರಾಕರಿಸಿದ್ದವು. ಈಗಾಗಲೇ ಬಳಕೆಯಲ್ಲಿರುವ ರಾಸಾಯನಿಕಗಳನ್ನು ಉತ್ಪಾದಿಸುವ ತಂತ್ರಜ್ಞಾನ ಮೂರನೇಯ ಜಗತ್ತಿನ ದೇಶಗಳಲ್ಲಿದೆ. ಆದ್ದರಿಂದ ಈ ರಾಸಾಯನಿಕವನ್ನು ಬದಲಿಸುವುದು ಸುಲಭದ ಕೆಲಸವೇನಲ್ಲ. ಇದಕ್ಕೆ ಪ್ರತಿರೋಧ ಬರುತ್ತದೆ.

ಹೊಸ ರಾಸಾಯನಿಕ ತಂತ್ರಜ್ಞಾನಕ್ಕೆ ಪುನಃ ಈ ದೇಶಗಳು ದುಬಾರಿ ಬೆಲೆ ತೆರಬೇಕಾದರೆ, ಈ ಬದಲಾವಣೆ ಎಂದೂ ಕಾರ್ಯಗತಗೊಳ್ಳುವುದಿಲ್ಲ. ಆದ್ದರಿಂದ ಇದು ಸಾಧ್ಯವಾಗಬೇಕಾದರೆ ಹೊಸ ತಂತ್ರಜ್ಞಾನವನ್ನು ಅಭಿವೃದ್ಧಿ ದೇಶಗಳು ಹಣ ಬೇಡದೆ, ಅಥವಾ ಭಾರಿ ಕಡಿಮೆ ಬೆಲೆಯಲ್ಲಿ ವರ್ಗಾಯಿಸಬೇಕು. ಈ ರೀತಿ ಮಾಡುವುದು ಅವರ ನೈತಿಕ ಕರ್ತವ್ಯ ಕೂಡಾ. ಏಕೆಂದರೆ ಈ ಪರಿಸರ ಹಾನಿ ಮಾಡುವ ತಂತ್ರಜ್ಞಾನ ಅವರೇ ತಯಾರಿಸಿದ್ದು. ಈಗಲೂ 'ಓಝೋನ್' ರಕ್ಷಾ ಕವಚಕ್ಕೆ ಪರಿಣಾಮ ಬೀರುವ ಮಟ್ಟದಲ್ಲಿ ಈ ರಾಸಾಯನಿಕಗಳನ್ನು ಬಳಸುವುದರಲ್ಲಿ ಸಿಂಹಪಾಲು ಈ ದೇಶಗಳದ್ದೇ. ಆದ್ದರಿಂದ ಈ ಸಮಸ್ಯೆಯ ಪರಿಹಾರಕ್ಕೆ ಬೇಕಾದ ತಂತ್ರಜ್ಞಾನ, ಸಂಪನ್ಮೂಲ ಒದಗಿಸಬೇಕಾದ್ದು ಅವರ ನೈತಿಕ ಕರ್ತವ್ಯ. ಇದು ಭಾರತ, ಚೀನಾಗಳ ವಾದವಾಗಿತ್ತು.

ಇದಲ್ಲದೆ ಕರಡು ಒಪ್ಪಂದ ಅಭಿವೃದ್ಧಿ ದೇಶಗಳಿಗೆ ಮಾತ್ರ ಈ ಒಪ್ಪಂದದಿಂದ ಹಿಂತೆಗೆದು ಕೊಳ್ಳುವ ಹಕ್ಕು ನೀಡಿತ್ತು. ಈ ಸಭೆಯಲ್ಲಿ ಭಾರತ ಮತ್ತು ಚೀನಾದ ಈ ನೀತಿಗೆ ಭಾರಿ ಬೆಂಬಲ ದೊರಕಿತು. ಹೆಚ್ಚಿನ ಅಂಶಗಳಿಗೆ: ವಿರೋಧ ತೋರಿಸುತ್ತಿದ್ದ ಅಮೇರಿಕ ಮಣಿಯಬೇಕಾಯಿತು. ಪರಿಸರ-ಮಲಿನಗೊಳಿಸುವ ತಂತ್ರಜ್ಞಾನವನ್ನು ಪರಿಸರ ರಕ್ಷಣೆ ಮಾಡುವ ಬದಲಿ ತಂತ್ರ ಜ್ಞಾನಕ್ಕೆ ಬದಲಾಯಿಸುವ ಎಲ್ಲಾ ಸಂದರ್ಭಗಳಿಗೆ ಇದು ಮೇಲ್ಪಂಕ್ತಿ ಹಾಕಿ ದಂತಿದೆ. ಈ ಸಭೆಯ ನಂತರ ಇಂತಹ 'ಭಯ'ವಿದ್ದ ಅಮೇರಿಕಾ ಈ ರೀತಿ ಒಪ್ಪಂದವನ್ನು ಇಂತಹ ಎಲ್ಲಾ ತಂತ್ರ ಜ್ಞಾನಗಳಿಗೆ ಅನ್ವಯಿಸಲು ಬಿಡುವುದಿಲ್ಲ ಎಂದಿದೆ.

ಇದೀಗ ಪ್ರಕಟವಾಗಿದೆ:

ಚೀನದಲ್ಲಿ ನಡೆದದ್ದೇನು?

ಸಿ.ಪಿ.ಐ.(ಎಂ) ಕೇಂದ್ರ ಸಮಿತಿಯ ನಿರ್ಣಯ

ಮತ್ತು

ಚೀನದ ಸಂಸತ್ತಿನ ಸ್ಥಾಯಿ ಸಮಿತಿಯ ವರದಿ

ಬೆಲೆ ರೂ. 6.00

ಪ್ರತಿಗಳಿಗಾಗಿ ವ್ಯವಹರಿಸಿ:

ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ)
ಕರ್ನಾಟಕ ರಾಜ್ಯ ಸಮಿತಿ
95 ಆ(ಮಹಡಿ),2 ನೇ ಕ್ರಾಸ್,
ಮುನೇಶ್ವರ ಬ್ಲಾಕ್,
ಪ್ಯಾಲೇಸ್ ಗುಟ್ಟಹಳ್ಳಿ
ಬೆಂಗಳೂರು-560003

ಕ್ರಿಯಾ ಪ್ರಕಾಶನ (ಪ್ರೈ) ಲಿ.
ಶೋಭಾ ಲಾಡ್ಜ್ ಕಾಂಪ್ಲೆಕ್ಸ್,
ಗಾಂಧಿನಗರ
ಬೆಂಗಳೂರು.

'ತಾರಾ ಸಮರದ' ಪ್ರಯೋಗ ಟುಸ್!

ಸೋವಿಯತ್‌ನ ಶಾಂತಿಧಾಳಿ, ಇಡೀ ಜಗತ್ತಿನ ಟೀಕೆ, ಬದಲಾದ ರಾಜಕೀಯ ಸನ್ನಿವೇಶದಲ್ಲಿ ಸಹ ಅಮೇರಿಕಾದ ಆಳುವ ವರ್ಗಗಳು 'ತಾರಾ ಸಮರ'ದ ತಮ್ಮ ಹುಚ್ಚು ಯೋಜನೆಯನ್ನು ಕೈಬಿಟ್ಟಿಲ್ಲ. ಈ ಯೋಜನೆಯ ಭಾಗವಾಗಿ 10 ಲಕ್ಷ ವಾಟು ಉತ್ಪಾದಿಸುವ ವಿದ್ಯುತ್ ಜನಕವನ್ನು ಅಂತರಿಕ್ಷದಲ್ಲಿ ಸ್ಥಾಪಿಸುವ ಪ್ರಯೋಗ ವಿಫಲವಾಗಿದೆ. ಈ ವಿದ್ಯುತ್ ಜನಕವನ್ನು 200 ಕಿ. ಮೀ. ಎತ್ತರದಲ್ಲಿ 13 ಮಿನಿಟುಗಳಷ್ಟು ಕಾಲ ಸ್ಥಾಪಿಸಲು ಒಯ್ಯಬೇಕಾಗಿದ್ದ ರಾಕೆಟ್ ಹಾರಿಸಿ ಸೆಕೆಂಡುಗಳ ಬಳಿಕ ಸ್ಫೋಟಗೊಂಡಿತು. 'ತಾರಾಸಮರದ' ಇತರ ಹಲವು ಪ್ರಯೋಗಗಳಲ್ಲಿ ಹೆಚ್ಚಿನವು ವಿಫಲವಾಗಿದೆ. ಆದರೂ ಈ ಹುಚ್ಚಾಟ ಮುಂದುವರಿದಿದೆ.

ನಿರಂತರ ಶ್ರಮದಾನ - -- ಶಾಲೆಗಾಗಿ

ದ.ಕ. ಜಿಲ್ಲೆಯ ಮದ್ದುಗುಡ್ಡೆ ಡಿವೈಎಫ್‌ಐ ಘಟಕವು ತನ್ನ ಗ್ರಾಮದಲ್ಲಿ ಒಂದು ಪ್ರಾಥಮಿಕ ಶಾಲೆಯ ಆವಶ್ಯಕತೆಯನ್ನು ಮನಗಂಡು ಅದಕ್ಕಾಗಿ ಸಹಿ ಸಂಗ್ರಹ ಚಳುವಳಿವನ್ನು ನಡೆಸಿತ್ತು. ಆ ನಂತರ ಆ ಹಳ್ಳಿಯವರೇ ಆದ ದಿವಂಗತ ಶಿವರಾಮ ಶೇರಿಗಾರರ ಪತ್ನಿ ಲಕ್ಷ್ಮಿಬಾಯಿಯವರು ದಾನವಾಗಿ ನೀಡಿದ 15 ಸೆಂಟ್ಸ್ ಭೂಮಿಯಲ್ಲಿ ಒಂದು ಶಾಲಾ ಕಟ್ಟಡವನ್ನು ನಿರ್ಮಿಸಲುಡಿವೈಎಫ್‌ಐ ಕಾರ್ಯಕರ್ತರು ಮುಂದಾದರು. ಊರಿನ ನಾಗರೀಕರ ಸಂಪೂರ್ಣ ಬೆಂಬಲದೊಂದಿಗೆ ಶಾಲಾ ಕಟ್ಟಡ ಪೂರ್ಣಗೊಂಡಿತು. ಆ ನಂತರ ಶಾಲೆಗೆ ದಾರಿಯನ್ನು ಮಾಡಲು ಮುಂದಾಗುತ್ತಿರುವಂತೆ ಕೆಲವೊಂದು ಅಡೆತಡೆಗಳು ಬಂದು, ಕೆಲವು ಜನಗಳು ತಮ್ಮ ಹಿತಗಳನ್ನು ರಕ್ಷಿಸಿಕೊಳ್ಳಲು ಹವಣಿಸಿಕೊಳ್ಳ ತೊಡಗಿದಾಗ ಅಲ್ಲಿನ ಜನಗಳಿಗೆ (ಆ) ಹಿತ ಚಿಂತಕರ ಕಾಳಜಿ ಯಾವುದರ ಮೇಲೆ ಎನ್ನುವುದನ್ನು ತೋರಿಸಿ ಕೊಡುವುದರಲ್ಲಿ ಅಲ್ಲಿನ ಕಾರ್ಯಕರ್ತರು ಯಶಸ್ವಿಯಾದರು.

ಶಾಲೆ ದಾರಿಗೆ ಬೇಕಾದ ಸ್ಥಳದ ಅಡ್ಡಿಕ್ಕಿ ಶಾಲೆ ಕಂಬಗಳನ್ನು ಹೊತು ಅದಕ್ಕೆ ಮುಳ್ಳಿನ ಬೇಲಿಯನ್ನು ಎಳೆದು ನಡೆಯಲುಅನುಕೂಲವಾಗುವಂತೆ ದಾರಿಗೆ ಹೆಂಚಿನ ತುಂಡುಗಳನ್ನು ಹಾಸುವುದರ ಮೂಲಕ ದಾರಿಯ ಪಕ್ಕ ದಲ್ಲಿಯೇ ಸಿಗುವ ಕೆರೆಯ ದಂಡೆಯ ಮೇಲೆ ಮಕ್ಕಳಿಗೆ ಅಪಾಯವಾಗದಂತೆ ಸುಮಾರು 3000 ಹೆಂಚುಗಳಿಂದ ಗೋಡೆ (ಪಗಾರಿ) ಯನ್ನು ಕಟ್ಟಿ ದಾರಿ ಮಾಡಲಾಯಿತು.

ಡಿ.ವೈ.ಎಫ್.ಐ. ಕಾರ್ಯಕರ್ತರ ಶ್ರಮ, ಬೆವರು, ಹನಿಗಳು ಈ ಶಾಲೆಯ ಪ್ರತಿಯೊಂದು ಕಣಕಣಗಳಲ್ಲಿ ಅಡಕವಾಗಿದೆ. ಶಾಲಾಭಿವೃದ್ಧಿ ಸಮಿತಿಯು ತನ್ನ ಸಂಪೂರ್ಣ ಸಹಕಾರ ನೀಡಿದ್ದಾರೆ ಸಮಿತಿಯ ಅಧ್ಯಕ್ಷರಾದ ಪ್ರಶಾಂತ್ ಕೋಲಾರ್ ಹೆಂಚಿನ ತುಂಡುಗಳು ಹಾಗೂ 3000 ಹೆಂಚುಗಳನ್ನು ಒದಗಿಸಿ ಕೊಟ್ಟಿದ್ದಾರೆ.

ಶ್ರಮದಾನದ ನೇತೃತ್ವವನ್ನು ಡಿವೈಎಫ್‌ಐ ಅಧ್ಯಕ್ಷ ಎಂ. ಬಸವ, ಕಾರ್ಯದರ್ಶಿ ಕೃಷ್ಣಾ ಜಿ.ಮೆಂಡನ್, ಸಹ ಕಾರ್ಯದರ್ಶಿ ಎಂ. ಬಾಲಕೃಷ್ಣ, ಇವರು ವಹಿಸಿದ್ದು, ಗ್ರಾಮದ ನಾಗರೀಕರು, ಮಹಿಳೆಯರು, ಯುವಕರು ಕೂಡ ಈ ಶ್ರಮದಾನದಲ್ಲಿ ಭಾಗವಹಿಸಿದ್ದಾರೆ.



ಇತಿಹಾಸ ಪುಟಗಳಿಂದ

ಮಂಗಳೂರಿನ ಕಡಲು ಹಲವು ನೆನಪುಗಳ ಒಡಲು

ಒಬ್ಬ ಸಣ್ಣ ಬಾಲಕ. ರಾತ್ರಿಯಿಡೀ ಪ್ರಯಾಸದ ಪ್ರಯಾಣದ ಬಳಿಕ ಮಂಗಳೂರು ತಲುಪಿದ.

ರೈಲ್ವೇ ನಿಲ್ದಾಣದಲ್ಲಿ ಬಂದಿಳಿದದ್ದೇನೋ ಸುಲಭವಾಗಿತ್ತು.ಹೋಗುವುದೆಲ್ಲಿಗೆ? ಅಲ್ಲೇ ಇದ್ದ ಒಬ್ಬಾತನೊಂದಿಗೆ ಒಂದೆರಡು ಮಾತುಗಳನ್ನು ಉಸುರಿಸಿದ. ಆತನಿಗಿದು ಅರ್ಥವಾಗದೇ ಹಾಗೇ ಒಮ್ಮೆ ಹುಡುಗನತ್ತ ತಿರುಗಿ ನೋಡಿ ಹೋದ.

ಇನ್ನೇನು ಮಾಡುವುದು? ತನಗೆ ಕನ್ನಡ ಬರುತ್ತಿಲ್ಲ. ಮಂಗಳೂರಿನ ರಸ್ತೆಯ ಮೇಲೆ ನಿಧಾನಕ್ಕೆ ನಡೆಯತೊಡಗಿದ. ಭಾರಿ ಮಹಲುಗಳು, ಗಿಜಿಗಿಡಲಾರಂಭಿಸಿದ್ದ ರಸ್ತೆಗಳು, ಜನಗಳು. ಒಂದು ರೀತಿಯ ರೋಮಾಂಚನ. ತನ್ನ ಹಳ್ಳಿಗಿಂತಲೂ ಭಿನ್ನವಾದ ಚಿತ್ರ ಇಲ್ಲಿದೆ. ಆದರೆ ಹೊಟ್ಟೆಯಲ್ಲಿ ಹಸಿವು ತಾಳಹಾಕುತ್ತಿತ್ತು. ಆಯಾಸ ಹೆಚ್ಚಾಗಿದ್ದರಿಂದ ಎಲ್ಲಾದರೂ ಮಲಗೋಣವೇ ಎನಿಸುತ್ತಿತ್ತು. ಇದಾವೂ ಸಾಧ್ಯವಿಲ್ಲ. ಆದ್ದರಿಂದ ಸೋತ ಕಾಲುಗಳನ್ನು ಎಳೆಯುತ್ತಾ ಬಾಲಕ ಸಾಗಿದ.

ಅದೇ ರಸ್ತೆಯಲ್ಲಿ ಬರುತ್ತಿದ್ದ ಗಡ್ಡದ ವ್ಯಕ್ತಿಯೊಬ್ಬ ತನ್ನತ್ತ ಗಮನವಿಟ್ಟು ನೋಡಿದ್ದರಿಂದ 'ಮಾರ್ ಬಾಸಿಲ್ ಕಾಲೇಜ್' ಗೆ ಹೋಗುವುದು ಹೇಗೆ ಎಂದು ಕೇಳಿದ. ಆತನಿಗೆ ಭಾಷೆ ಅರ್ಥವಾಗಿತ್ತು. ದಾರಿ ತೋರಿಸಿದ. ಆ ಬಾಲಕನ ದೊಡ್ಡ ಅಣ್ಣ ಕೆಲಸಮಾಡುತ್ತಿದ್ದ ಕಾಲೇಜದು. ಹಾಸ್ಟೆಲ್‌ನಲ್ಲಿ ಆತನನ್ನು ಭೇಟಿಯಾದಾಗ 'ಮನೆ ಬಿಟ್ಟು ಓಡಿ ಬಂದದೇಕೆಂದು' ಬೈದು ಕೆಲವು ದಿನಗಳು ತಂಗಿದ್ದು ಆತ ಮತ್ತೇ ತನ್ನ ಹಳ್ಳಿಗೆ ವಾಪಾಸಾದ. ಆದರೆ ಆ ನಗರದ ಚಿತ್ರ ಅಚ್ಚಳಿಯದೇ ಮನಸ್ಸಿನಲ್ಲಿ ಮೂಡಿತ್ತು. ಆತ ಕೇಳಿದ್ದ ಕಾರ್ಮಿಕ, ಬಂಡವಾಳಗಾರ ಮತ್ತು ಭಿಕ್ಷುಕರು, ಮುಂತಾದ ಪದಗಳು ಹೆಚ್ಚು ಅರ್ಥವಾದಂತಾಗಿತ್ತು. ಇವು ಭೂಮಾಲೀಕ-ಗೇಣಿದಾರ ಶಬ್ದಗಳಿಂತಲೂ ಭಾರೀ ವ್ಯಾಪ್ತಿಯಲ್ಲಿರುವುದನ್ನು ಕಂಡುಕೊಂಡಿದ್ದ.

ಮುಂದೆ ಕಯ್ಯೂರು ರೈತ ಹೋರಾಟದಲ್ಲಿ ಬ್ರಿಟಿಷ್ ಪೋಲೀಸರಿಗೆ ಬೇಕಾದ 'ಆರೋಪಿ' ಈತ. ಹೀಗಾಗಿ ಭೂಗತನಾಗಿದ್ದರಿಂದ ಹಳ್ಳಿಯಿಂದ ಹಳ್ಳಿಗೆ ಕೆಸರು ಗದ್ದೆ, ರಸ್ತೆಗಳನ್ನು ದಾಟಿ ಪ್ರಯಾಣಿಸಬೇಕಾಗಿತ್ತು. ರಾತ್ರಿ ಪಕ್ಷದ ಕಾರ್ಯತರಗತಿ ನೀಡುವುದು. ನಂತರ ಮುಂದಿನ ಊರಿಗೆ. ಹೀಗೆ ತಲಚೇರಿಯಿಂದ ಕಾಸರಗೋಡಿಗೆ-ನೂರು ಮೈಲುಗಳ ಪ್ರಯಾಣ. ತೀವ್ರ ಖಾಯಿಲೆಯಿಂದಾಗಿ ಇನ್ನು ನಡೆಯುವುದು ಅಸಾಧ್ಯವಾಗಿತ್ತು. ಕಮ್ಯುನಿಸ್ಟ್‌ರನ್ನು ಭೇಟಿಯಾಡಲು ಪೋಲೀಸರು ಎಲ್ಲಾ ಕಡೆ ಬಲೆ ನೇಯ್ದಿದ್ದರು. ಅವರ ಪಟ್ಟಿಯಲ್ಲಿ ಈ ಯುವಕನೂ ಒಬ್ಬ ಸಿಕ್ಕಿ ಬಿದ್ದರೆ ಮರಣದಂಡನೆ ನಿಶ್ಚಿತ.

ಆರೋಗ್ಯ ತೀರಾ ಹದಗೆಟ್ಟಿದ್ದರಿಂದ ಆಸ್ಪತ್ರೆ ಸೇರಲೇಬೇಕಿತ್ತು. ಆಸ್ಪತ್ರೆ ಸೇರುವು ದೆಂದರೆ ಸಿಕ್ಕಿಬಿದ್ದಂತೆ ಸರಿ. ಆದ್ದರಿಂದ ಹೇಗೋ ಹೇಗೇ ಕಾಸರಗೋಡಿನಿಂದ ಮಂಗಳೂರಿನತ್ತ ಹೊರಟ ರೈಲು ಹತ್ತಿದ್ದಾಯ್ತು.

ಮಂಗಳೂರು ರೈಲ್ವೇ ನಿಲ್ದಾಣದಲ್ಲಿಯೂ ಪೋಲೀಸರು ಕಟ್ಟೆಚ್ಚರ ವಹಿಸಿದ್ದರು. ಅಲ್ಲಿಂದ ಕಣ್ತಪ್ಪಿಸಿ ಹೋಗಿ ಈ ಯುವಕ ಕಮ್ಯುನಿಸ್ಟ್ ಪಕ್ಷದ ಹಿತೈಷಿಯಾಗಿದ್ದ ಒಬ್ಬ ಹೋಟೇಲ್ ಕೆಲಸಗಾರನ ಮನೆ ಸೇರಿದ. ಕೇಳಿದವರಿಗೆಲ್ಲಾ ಆತ ಸಹೋದರ. ಆರೋಗ್ಯ ತೀರಾ ಹದಗೆಟ್ಟಿದ್ದರಿಂದ ಇನ್ನು ಆಸ್ಪತ್ರೆಗೆ ಸೇರುವುದು. ಆಸ್ಪತ್ರೆಯಲ್ಲಿದ್ದ ಕಂಪೌಂಡರ್ ಒಬ್ಬ ಯುವಕನ ಸ್ನೇಹಿತ. ಹೀಗಾಗಿ ಆಸ್ಪತ್ರೆ ಸೇರಿದ್ದು ಆಯ್ತು.

ಯುವಕ ಆಸ್ಪತ್ರೆ ಸೇರಿದ ಸಂಗತಿ ಪೋಲೀಸರಿಗೆ ತಿಳಿದು ಹೋಯಿತು. ಯುವಕನಿದ್ದ ಆಸ್ಪತ್ರೆಗೂ ಒಂದು ಕಂಪೌಂಡರನನ್ನೂ 'ಮಲೆಯಾಳಿಯೊಬ್ಬ ಆಸ್ಪತ್ರೆಗೆ ಬಂದು ಸೇರಿದ್ದಾನೆಯೇ' ಅಂತಾ ಪೋಲೀಸರು ಕೇಳಿದರು. ಇಲ್ಲಿ ಯಾರೂ ಸೇರಿಲ್ಲವಲ್ಲಾ ಎಂಬ ಉತ್ತರವನ್ನೂ ತುಂಬಾ ಸಹಜವೆನ್ನುವಂತೆ ಕಂಪೌಂಡರ್ ನೀಡಿದ. ಪೋಲೀಸರು ಹಿಂತಿರುಗಿದರು. ಯುವಕ ನಿಟ್ಟುಸಿರು ಬಿಟ್ಟ.

ಆದರೆ...... ಒಂದೆರಡುದಿನಗಳಲ್ಲಿಯೇ ಕಾಸರಗೋಡಿನ ಪೋಲೀಸ್ ಇನ್‌ಸ್ಪೆಕ್ಟರ್ ಸಹ ಇದೇ ಆಸ್ಪತ್ರೆ ಸೇರಿದ. ಅದೂ ಯುವಕನ ಪಕ್ಕದ ಮಂಚದಲ್ಲೇ........!

ಇನ್‌ಸ್ಪೆಕ್ಟರನನ್ನು ಕಾಣಲು ಅನೇಕ ಅಧಿಕಾರಿಗಳು, ಪೋಲೀಸರು ಬರತೊಡಗಿದರು. ಇನ್ನು ಇಲ್ಲಿರುವುದೇ ಅಪಾಯವೆಂದು ಬಗೆದ ಯುವಕ ಜಾಗ ಖಾಲಿ ಮಾಡಲು ಅಣಿಯಾದ. ಪೋಲೀಸರು ದಿನಾಲು ಈತನ ಬಗ್ಗೆ ವಿಚಾರಿಸುತ್ತಿದ್ದರು. ಈ ಬಗ್ಗೆ ಕಂಪೌಂಡರು ಗೆಳೆಯನೊಂದಿಗೆ ಚರ್ಚಿಸಿದ ಬಳಿಕ 'ಬಿಡುಗಡೆ'ಯಾಗಲು ಅಣಿಯಾದ. ವೇಷ ಬದಲಿಸಿಕೊಂಡ ಆತ ನಿಧಾನವಾಗಿ ಆಸ್ಪತ್ರೆಯ ಹಿಂಬಾಗಿಲಿನ ಮೂಲಕ ಪರಾರಿಯಾದ. ರೈಲ್ವೇ ನಿಲ್ದಾಣ ತಲುಪಿದಾಗ ಅಲ್ಲೆಲ್ಲಾ ಪೋಲೀಸರ ಕಾವಲು. ಭೂಗತ ಕಮ್ಯುನಿಸ್ಟ್, ಒಬ್ಬ ಈಗ ತಲೆಮರೆಸಿಕೊಂಡು ರೈಲ್ವೇನಿಲ್ದಾಣಕ್ಕೆ ಬರಲಿದ್ದಾನೆಂದು ಅವರು ಜಾಗೃತರಾಗಿದ್ದರು. ಕೊನೆಗೂ ಸುತ್ತಿಬಳಸಿ ರೈಲು ಹತ್ತಿ ಕಾಸರಗೋಡನ್ನೂ ತಲುಪಿದ್ದಾಯಿತು.

ಬಾಲಕನಾಗಿದ್ದಾಗ ಮಂಗಳೂರು ಪ್ರಥಮ ಭೇಟಿಯಲ್ಲಿ ಒಂದು ರೋಮಾಂಚಕಾರಿ ಅನುಭವ ನೀಡಿದ್ದರೆ, ಎರಡನೆಯ ಬಾರಿಗೆ ಅದು ತಮಗೆ ಅತೀ ಯಾತನಾಮಯವಾಗಿತ್ತೆಂದು ಕಾಂ. ಇ.ಕೆ.ನಯನಾರ್ ಸ್ಮರಿಸುತ್ತಾರೆ. ಸಿ.ಪಿ.ಐ (ಎಂ) ಕೇಂದ್ರ ಸಮಿತಿ ಸದಸ್ಯರೂ, ಕೇರಳದ ಮುಖ್ಯಮಂತ್ರಿಗೂ ಆಗಿರುವ ಕಾ ಕಾಂ.ಇ.ಕೆ. ನಯನಾರ್‌ರವರು ಹಲವಾರು ಬಾರಿ ಮಂಗಳೂರಿಗೆ ಭೇಟಿ ನೀಡಿದ್ದಾರೆ. ಜನರೊಂದಿಗೆ ಬೆರೆತಿದ್ದಾರೆ. ಭಾರೀ ಬಹಿರಂಗ ಸಭೆಗಳನ್ನುದ್ದೇಶಿಸಿ ಮಾತನಾಡಿದ್ದಾರೆ. ಆದರೆ ಆ ಎರಡು ಘಟನೆಗಳು ಎಂದೆಂದಿಗೂ ಮರೆಯಲಾಗದವುಗಳು ಎಂದು ಈಗಲೂ ಸ್ಮರಿಸುತ್ತಿದ್ದಾರೆ.

-ಎಸ್.ವೈ. ಗುರುಶಾಂತ್

ಬಳ್ಳಾರಿ ಜಿಲ್ಲಾ ಪತ್ರ

ಮಂಡಲ ಮುತ್ತಿಗೆ

ಹೊಸಪೇಟೆ ತಾಲೂಕಿನ ಡಿ.ವೈ.ಎಫ್.ಐ. ತಾಲೂಕ ಸಮಿತಿ ನೇತೃತ್ವದಲ್ಲಿ ಹೊಸಪೇಟೆ ನಗರ ಬಿ.ಟಿ.ಆರ್. ನಗರ ಪರಿಶಿಷ್ಟ ವರ್ಗದ ಬಡಾವಣೆಯ ಕಾರ್ಯಕರ್ತರು, ನಾಗರೀಕರು ನೂರಾರು ಜನ ಯುವಕರು ಮಹಿಳೆಯರು 23-7-90 ರಂದು ಡಣಾಪುರ ಮಂಡಲ ಪಂಚಾಯ್ತಿಯನ್ನು ಮುತ್ತಿಗೆ ಹಾಕಿದರು.

ಹಲವಾರು ದಿನಗಳಿಂದ ಬಗೆಹರಿಯದೇ ಇರುವ ಸಮಸ್ಯೆಗಳಿಗೆ ಈ ಕಾರ್ಯಕ್ರಮವೆಂದು ತಿಳಿದು ಬಂದಿದೆ. ಬಿ.ಟಿ.ಆರ್. ನಗರ ಪರಿಸಿಷ್ಠ ವರ್ಗದ ಬಡಾವಣೆಯ ನಗರಗಳಿಗೆ ನಾಗರೀಕ ಸೌಲಭ್ಯಗಳಿಗಾಗಿ, ಮತದಾನದ ಪಟ್ಟಿಯಲ್ಲಿ ಹೆಸರು ನೊಂದಾಯಿಸಬೇಕೆಂದು, ವಯಸ್ಕರ ಶಿಕ್ಷಣ ಕೇಂದ್ರ ಹಾಗೂ ಅಂಗನವಾಡಿ ಕೇಂದ್ರ ಕೊಡಬೇಕೆಂಬುದು ಪ್ರಮುಖ ಬೇಡಿಕೆಯಾಗಿದೆ. ಮೆರವಣಿಗೆಯ ನೇತೃತ್ವವನ್ನು ವಹಿಸಿ ಹಾಗೂ ನೆರೆದ ಬಹಿರಂಗ ಸಭೆಯನ್ನು ಉದ್ದೇಶಿಸಿ ಕಾಂ॥ ಕೆ. ಸೋಮಪ್ಪ ಮಾತನಾಡಿ ಸರ್ಕಾರದ ಜನ ವಿರೋಧಿ ನೀತಿಯನ್ನು ಖಂಡಿಸಿದರು. ಮನವಿ ಪತ್ರವನ್ನು ಪ್ರಧಾನರಿಗೆ ಅರ್ಪಿಸಲಾಯಿತೆಂದೂ ಬೇಡಿಕೆ ಈಡೇರದೇ ಹೋದಲ್ಲಿ ಉಗ್ರ ಪ್ರತಿಭಟನೆ ಮಾಡಲಾಗುವುದೆಂದು ತಿಳಿಸಲಾಗಿದೆ.

ಸಿಐಟಿಯು ಧರಣಿ

ಬಳ್ಳಾರಿ ನಗರದ ಬಳ್ಳಾರಿ Steel Alloys ಕಾರ್ಖಾನೆಯೆದುರು ಕೆಲಸದಿಂದ ವಜಾ ಮಾಡಿರುದನ್ನು, ಹಾಗೂ 3 ತಿಂಗಳು ಸಂಬಳನೀಡದೇ ಇರುವುದನ್ನು ವಿರೋಧಿಸಿ ಕಾರ್ಖಾನೆಯ 20 ಜನ ಕಾರ್ಮಿಕರು ಪ್ರತಿಭಟನಾ ಉಪವಾಸ ಸತ್ಯಾಗ್ರಹವನ್ನು ಕಾರ್ಖಾನೆಯೆದುರು 26-7-1990 ರಿಂದ ಸಿಐಟಿಯು ನೇತೃತ್ವದಲ್ಲಿ ನಡೆಸಲಾಗಿದೆಯೆಂದು ಸಿಐಟಿಯು ಜಿಲ್ಲಾ ಸಂಚಾಲಕರಾದ ಪ್ರಸನ್ನಕುಮಾರ್ ತಿಳಿಸಿದ್ದಾರೆ. ಈ ಬಗ್ಗೆ ಕಾರ್ಮಿಕಾಧಿಕಾರಿಗಳು ಮಧ್ಯ ಪ್ರವೇಶ ಮಾಡಲು ಕೋರಿರುತ್ತಾರೆ. ಬಳ್ಳಾರಿ ಜಿಲ್ಲೆಯಲ್ಲಿಯೇ ಅತ್ಯಂತ ದೊಡ್ಡ ಕಾರ್ಖಾನೆ ಇದಾಗಿದ್ದು ಸಾವಿರಕ್ಕೂ ಮೇಲ್ಪಟ್ಟ ಕಾರ್ಮಿಕರಿದ್ದಾರೆ. ಮೊಟ್ಟ ಮೊದಲ ಬಾರಿಗೆ ಸಿಐಟಿಯು ನೇತೃತ್ವದಲ್ಲಿ ಸಂಘಟಿಕರಾಗಿದ್ದಾರೆಂದು ತಿಳಿದು ಬಂದಿದೆ.

ಜಿಲ್ಲಾ ಅಧ್ಯಯನ ಶಿಬಿರ

ಬಳ್ಳಾರಿ ಜಿಲ್ಲಾ ಸಿ.ಪಿ.ಐ.(ಎಂ) ಪಕ್ಷದ ನೇತೃತ್ವದಲ್ಲಿ ಜಿಲ್ಲಾ ಮಟ್ಟದ 3 ದಿನಗಳ ಅಧ್ಯಯನ ಶಿಬಿರವನ್ನು ಹಗರಿ ಬೊಮ್ಮನ ಹಳ್ಳಿಯಲ್ಲಿ ನಡೆಸಲಾಯಿತು. ಈ ಶಿಬಿರದಲ್ಲಿ 30 ಜನ ಆಯ್ದ ವಿದ್ಯಾರ್ಥಿಗಳು ಜಿಲ್ಲೆಯ ವಿವಿಧ ತಾಲೂಕಗಳಿಂದ ಭಾಗ ವಹಿಸಿದ್ದರು. ಶಾಲೆಗೆ ಪ್ರಾಚಾರ್ಯರಾಗಿ ಸಿ.ಪಿ.ಐ.(ಎಂ) ಜಿಲ್ಲಾ ಕಾರ್ಯದರ್ಶಿಗಳಾದ ಕಾಂ॥ ಪ್ರಸನ್ನಕುಮಾರ್ ಕಾರ್ಯ ನಿರ್ವಹಿಸಿದರು. ರಾಜ್ಯದ ಸಿ.ಪಿ.ಐ (ಎಂ) ಕಾರ್ಯದರ್ಶಿ ಮಂಡಳಿ ಸದಸ್ಯ ರಾದ ಕಾಂ॥ ಜಿ.ವಿ. ಶ್ರೀರಾಮರೆಡ್ಡಿ, ಕಾಂ॥ ಪಿ. ರಾಮಚಂದ್ರರಾವ್, ಕಾಂ॥ ನಾಗರಾಜ್, ಕಾಂ॥ ಚಂದ್ರಶೇಖರ್ ಬಾಳೆ ಹಾಗೂ ಕಾಂ॥ ಎನ್.ಕೆ. ಉಪಾಧ್ಯಾಯ ಉಪನ್ಯಾಸವನ್ನು ಅನುಕ್ರಮವಾಗಿ ಪಕ್ಷದ ಕಾರ್ಯಕ್ರಮ ವಿವರಣೆ, ಮಾರ್ಕ್ಸ್‌ವಾದ ಮೂಲಭೂತ ಅಂಶಗಳು, ಬಳ್ಳಾರಿ ಜಿಲ್ಲೆಯ ಸಾಮಾಜಿಕ ಆರ್ಥಿಕ ರಾಜಕೀಯ ಪರಿಸ್ಥಿತಿ ಐತಿಹಾಸಿಕ ಹಿನ್ನೆಲೆ, ಪಕ್ಷ ಹಾಗೂ ಸಾಮೂಹಿಕ ಸಂಘಟನೆಗಳ ವಿಷಯದ ಕುರಿತು ಹೇಳಿದರು.ವಿಷಯ ಚರ್ಚಿಸಲು ಹತ್ತು ವಿದ್ಯಾರ್ಥಿಗಳಿರುವಂತೆ 3 ಗುಂಪುಗಳನ್ನಾಗಿ ವಿಂಗಡಿಸಲಾಗಿತ್ತು. ಪ್ರತಿ ಗುಂಪಿನ ನೇತೃತ್ವವನ್ನು ಜಿಲ್ಲಾ ಕಾರ್ಯದರ್ಶಿ ಮಂಡಳಿ ಸದಸ್ಯರಾದ ಪ್ರಸನ್ನ ಕುಮಾರ್, ಯು. ಬಸವರಾಜ್, ವೀರ ಸಂಗಯ್ಯ ವಹಿಸಿದ್ದರು. ಪ್ರಸಕ್ತ ಪಕ್ಷದ ಚಟುವಟಿಕೆ ಹಿನ್ನೆಲೆಯಲ್ಲಿ ಸಾಂದರ್ಭಿಕವಾಗಿ ಉತ್ತಮಸಂಗತಿಯೆಂದು ವಿದ್ಯಾರ್ಥಿಗಳಿಂದ ಪ್ರಶಂಸೆ ವ್ಯಕ್ತಪಡಿಸಲಾಯಿತು. ನಂತರ ಸೇರಿದ್ದ ಜಿಲ್ಲಾ ಕಾರ್ಯದರ್ಶಿ ಮಂಡಳಿಯು ಶಾಲೆಯನ್ನು ಯಶಸ್ವಿಯಾಗಿ ನಡೆಸಿಕೊಟ್ಟ ಹ. ಬೊ. ಹಳ್ಳಿಯ ಶಾಖೆಯನ್ನು, ಹಾಗೂ ತಂಬ್ರಹಳ್ಳಿ ಶಾಖೆಯಿಂದ ಹಾಜರಿದ್ದ ಬಸವರಾಜ್ (ಅಡಿಗೆಯವರು), ಬಾಬು ಮತ್ತು ವಿಶೇಷ ಕಾಳಜಿ ವಹಿಸಿದ ಕೃಷ್ಣಪ್ಪ ಇವರನ್ನು ಅಭಿನಂದಿಸಿದೆ, ರಾಜ್ಯದ ಪದಾಧಿಕಾರಿಗಳಿಗೆ ಧನ್ಯವಾದಗಳನ್ನು ಜಿಲ್ಲಾ ಕಾರ್ಯದರ್ಶಿ ಮಂಡಳಿಯು ಅರ್ಪಿಸಿ, ಜಿಲ್ಲೆಯಿಂದ ಹಾಜರಿದ್ದ ಕಾರ್ಯಕರ್ತರಿಗೆ ಈ ಶಾಲೆಯ ಸ್ಫೂರ್ತಿಯಿಂದ ಬಲಿಷ್ಠ ಪಾರ್ಟಿ ಕಟ್ಟಲು ಸ್ಫೂರ್ತಿಯಿಂದ ಮುನ್ನಡೆಯಬೇಕೆಂದು, ಪಕ್ಷದ ನಿಧಿಸಂಗ್ರಹಣೆಯಲ್ಲಿ ಮಹತ್ವದ ಪಾತ್ರವಹಿಸ ಬೇಕೆಂದು ಕರೆ ನೀಡಿದೆ.

ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಸಭೆ

ಹಗರಿ ಬೊಮ್ಮನ ಹಳ್ಳಿಯಲ್ಲಿ 21-7-1990 ರಂದು ಪ್ರಾಂತ ರೈತ ಸಂಘದ ಜಿಲ್ಲಾ ಸಮಿತಿ ಸಭೆ ಕಾಂ॥ಬಿ. ಸುರೇಂದ್ರ ಇವರ ಅಧ್ಯಕ್ಷತೆಯಲ್ಲಿ ನಡೆಯಿತು. ಸರ್ಕಾರದ ನಿರ್ಧಾರ ಬಹು ಸಂಖ್ಯಾತ ಬಡ ರೈತರಿಗೆ ನಿರಾಶೆಯನ್ನುಂಟು ಮಾಡಿದ ಸಂಗತಿಯೆಂದು ಖಂಡಿಸಿದೆ. 1986 ರ ಹಿಂದಿನ ಸಾಲವನ್ನು ಈಗಾಗಲೇ ಜಪ್ತಿ ಮೂಲಕ, ಕೋರ್ಟ್‌ಕೇಸ್ ಹಾಕುವ ಮೂಲಕ, ಹೊಸ ಸಾಲ ನೀಡದೇ ಇರುವ ಮೂಲಕ ಬೆದರಿಸಿ ಬಹುಸಂಖ್ಯಾತ ಸಾಲ ವಸೂಲಿಮಾಡಲಾಗಿದೆಯೆಂದು. ಇದರಿಂದ ಶೇ 10ರಷ್ಟು ಕೂಡ ಸಾಲಪಡೆದ ರೈತರಿಗೆ ಪ್ರಯೋಜನವಿಲ್ಲವೆಂದು ಟೀಕಿಸಿದೆ. ಅಣೇವಾರು ಲೆಕ್ಕಚಾರದಂತೆ 1988 ಮಾತ್ರ ಬರಗಾಲವೆಂದು ಘೋಷಿಸಲಾಗಿದ್ದು 1986-89 ರವರೆಗಿನ ಸಾಲಮನ್ನಾ "ಬುರುಡೆ" ಎಂದು ಹೇಳಿದೆ. ಹತ್ತು ಸಾವಿರಕ್ಕೂ ಮೇಲ್ಪಟ್ಟ ಗ್ರಾಮದ ರೈತರಿಗೆ ಸಾಲಮನ್ನಾ ಕಾರ್ಯಕ್ರಮ ಅನ್ವಯಿಸುವುದಿಲ್ಲವೆಂಬ ಷರತ್ತನ್ನು ಬಲವಾಗಿ ಖಂಡಿಸಿ. ಷರತ್ತು ಗಳಿಲ್ಲದೇ ಚುನಾವಣೆಯಲ್ಲಿ ಬರವಸೆ ನೀಡಿದಂತೆ ಹತ್ತು ಸಾವಿರದ ಸಾಲವನ್ನು 1989 ರವರೆಗೆ ಎಲ್ಲಾ ರೈತರಿಗೆ ಮನ್ನಾ ಮಾಡಬೇಕು ಕೂಡಲೇ ಹೊಸ ಸಾಲನೀಡಬೇಕೆಂದು ಒತ್ತಾಯಿಸಿದೆ. ರಾಜ್ಯ ಸಮಿತಿ ನಿರ್ಣಯದಂತೆ ಜಿಲ್ಲೆಯಲ್ಲಿ 22 ರಾಷ್ಟ್ರೀಕೃತ ಬ್ಯಾಂಕುಗಳ ಮುಂದೆ ಸಾವಿರಕ್ಕೂ ಹೆಚ್ಚು ರೈತರನ್ನು ಜುಲೈ 30 ರಂದು ಧರಣಿ ನಡೆಸುವಂತೆ ಕಾರ್ಯಕ್ರಮ ರೂಪಿಸಿದೆ. ಇದೇ ಸಂದರ್ಭದಲ್ಲಿ ಸದಸ್ಯತ್ವ ಹೆಚ್ಚಿಸಲು ನಿರ್ಣಯಿಸಿಯೆಂದು ಜಿಲ್ಲಾ ಕಾರ್ಯದರ್ಶಿ ಯು.ಬಸವರಾಜ್ ತಿಳಿಸಿರುತ್ತಾರೆ.

ಎಸ್.ಎಫ್.ಐ. ಜಿಲ್ಲಾ ಸಭೆ

ಹಗರಿಬೊಮ್ಮನ ಹಳ್ಳಿಯಲ್ಲಿ ಎಸ್.ಎಫ್.ಐ. ನ ಜಿಲ್ಲಾ ಸಮಿತಿ ಸಭೆಯು ಕಾಂ॥ಬಾಲಪ್ಪ ಇವರ ಅಧ್ಯಕ್ಷತೆಯಲ್ಲಿ ನಡೆದು ರಾಜ್ಯ ಸಮಿತಿಯ ಕರೆಯಂತೆ ಜುಲೈ 31 ರಂದು ಜಿಲ್ಲೆಯಾದ್ಯಂತ ಎಲ್ಲಾ ತಾಲೂಕಗಳಲ್ಲಿ ಶಾಲಾ-ಕಾಲೇಜ್‌ಗಳನ್ನು ವಿದ್ಯಾರ್ಥಿಗಳು ಬಹಿಷ್ಕರಿಸಲು ಕಾರ್ಯಕ್ರಮವನ್ನು ರೂಪಿಸಿದೆ. ಕ್ಯಾಪಿಟೇಶನ್ ಡೊನೇಷನ್ ರದ್ದಾಗಬೇಕು. ಶಿಕ್ಷಣಶುಲ್ಕ ರಿಯಾಯ್ತಿಗಾಗಿ ಆದಾಯ ಮಿತಿ 3,600 ರಿಂದ 10,000 ರೂ ಗೆ ಹೆಚ್ಚಿಸಬೇಕು. ಕೂಡಲೇ ಪಠ್ಯಪುಸ್ತಕ ವಿತರಿಸಬೇಕು. ಪಿ.ಯು.ಸಿ. ಹಾಗೂ ಡಿಗ್ರಿ ವಿದ್ಯಾರ್ಜನೆಗೆ ಪ್ರವೇಶ ಪಡೆಯಲು ಅರ್ಹತೆ ಇರುವ ಎಲ್ಲರಿಗೂ ಪ್ರವೇಶ ದೊರಕಿಸಬೇಕು. ಶಾಲಾ ಕಾಲೇಜ್ ವೇಳೆಗೆ ವಿದ್ಯಾರ್ಥಿಗಳಿಗೆ ಬಸ್ ವ್ಯವಸ್ಥೆ ಒದಗಿಸಬೇಕು. ಲೈಬ್ರರಿ ತೆರೆಯಬೇಕು. ಮುಂತಾಗಿ ಬೇಡಿಕೆಗಳಿವೆ. ಇದೇ ಸಂದರ್ಭದಲ್ಲಿ ಶಾಲಾ-ಕಾಲೇಜ್ ಸಮಿತಿಗಳನ್ನು ರಚಿಸಲು ಸದಸ್ಯತ್ವ ಹೆಚ್ಚಿಸಲು ತೀರ್ಮಾನಿಸಲಾಗಿದೆಯೆಂದು ಜಿಲ್ಲಾ ಸಹಕಾರ್ಯದರ್ಶಿಯಲ್ಲಿ ಕಾಂ॥ಬಿ.ವೀರಣ್ಣ ಪತ್ರಿಕೆಗೆ ತಿಳಿಸಿರುತ್ತಾರೆ.

?ನಿಮ್ಮ ಪ್ರಶ್ನೆ - ನಮ್ಮ ಉತ್ತರ!

ವಿಶ್ವದ ಬೇರೆ ಬೇರೆ ಕಡೆಗಳಲ್ಲಿ ಕಮ್ಯುನಿಸ್ಟರನ್ನು ಅಭ್ಯಾಸ ಮಾಡಿದರೆ, ಒಂದಕ ಗಮನಕ್ಕೆ ಬರುವಂಥಾದ್ದು. ಏನೆಂದರೆ, ಅಲ್ಲಿಯ ಸಂಗಾತಿಗಳು ಜನರನ್ನು ಮಾರ್ಕ್ಸ್‌ವಾದ-ಲೆನಿನ್‌ವಾದದ ನೆಲೆಯಲ್ಲಿ ಜನರನ್ನು ತಾತ್ವಿಕವಾಗಿ ಗಟ್ಟಿಗೊಳಿಸುತ್ತಾ ಅವರನ್ನು ಸಮಾಜವಾದಿಗಳನ್ನಾಗಿ ಮಾಡುತ್ತಾ ಜತೆಗೆ ಸಶಸ್ತ್ರ ಕ್ರಾಂತಿ ಮಾಡಿ ವಿಮೋಚನೆ ಮಾಡಿಕೊಂಡರು. ಉದಾ- ಚೀನಾ, ವಿಯೇಟ್ನಾಂ, ಉತ್ತರ ಕೋರಿಯಾ ಇತ್ಯಾದಿ. ಆದರೆ ಭಾರತದಲ್ಲಿ ಮಾತ್ರ ಕಮ್ಯುನಿಷ್ಟರು ಈ ಬಂಡವಾಳ ಶಾಹಿ ಸಂಸದೀಯ ವ್ಯವಸ್ಥೆಯಲ್ಲಿ, ಪಾರ್ಲಿ ಮೆಂಟರಿ ವ್ಯವಸ್ಥೆಯಲ್ಲಿ ಭಾಗವಹಿಸಿ. ಸಮಾಜವಾದಿ ಕ್ರಾಂತಿ ಮಾಡಬೇಕೆಂದು ಪ್ರಯತ್ನಿಸುತ್ತಿದ್ದಾರೆ. ಆದ್ದರಿಂದ ನನ್ನ ಪ್ರಶ್ನೆಯೆಂದರೆ ಭಾರತ ಮಣ್ಣಿನ ಯಾವ ವಿಚಾರ ನಮ್ಮ ಸಮತಾವಾದಿಗಳಿಗೆ ಪಾರ್ಲಿಮೆಂಟರಿ ವ್ಯವಸ್ಥೆಯಿಂದ ಕ್ರಾಂತಿ ಮಾಡ ಬೇಕೆನಿಸಿತು. ಯಾಕೆ ನಮ್ಮ ಸಮತಾವಾದಿಗಳು ಸಶಸ್ತ್ರ ಕ್ರಾಂತಿಯನ್ನು ಬಯಸ ಲಿಲ್ಲ. ವಿವರಿಸಿ.

-ಪ್ರಾಣೇಶ ನಾಗರ ಬಂಚಿ-ರಾಯಚೂರ

★ ಕ್ರಾಂತಿ–ಸಶಸ್ತ್ರವಾದದ್ದಾಗಲೀಶಸ್ತ್ರಗಳಿಲ್ಲದ್ದಾಗಲೀ-ಸಮತಾವಾದಿಗಳು 'ಬಯಸುವುದರಿಂದ' ಮಾತ್ರಆಗುವಂತಹುದಲ್ಲ. ಅದಕ್ಕೆ ವಿವಿಧ ವರ್ಗಗಳ ಬಲಾಬಲ, ದುಡಿಯುವ ವರ್ಗಗಳ ರಾಜಕೀಯ ಪ್ರಜ್ಞೆ, ಅಂತರಾಷ್ಟ್ರೀಯ ರಾಜಕೀಯ ಮಿಲಿಟರಿ ಬಲಾಬಲದ ಸ್ಥಿತಿ, ಕಮ್ಯುನಿಸ್ಟ್ ಪಕ್ಷದ ಬಲ, ಪರಿಸ್ಥಿತಿಗೆ ತಕ್ಕ ಕ್ರಾಂತಿಯ ತಂತ್ರಗಳು ಮುಖ್ಯವಾಗುತ್ತವೆ. ಕ್ರಾಂತಿ ಒಂದು ದೀರ್ಘ ಪ್ರಕ್ರಿಯೆ. ಅದಕ್ಕೆ ಹೀಗೆ ಎಂದು ವಿಧಿಸಿದ ಫಾರ್ಮುಲಾಗಳಿಲ್ಲ. ರಷ್ಯನ್, ಚೀನಿ, ವಿಯೆಟ್ನಾಂ, ಇತ್ಯಾದಿ ಕ್ರಾಂತಿಗಳಿಗೆ ಪ್ರತಿಯೊಂದಕ್ಕೂ ಅವರದೇ ಆದ ವಿಶಿಷ್ಟತೆಗಳಿವೆ. ಹಲವು ಸಾಮಾನ್ಯ ಅಂಶಗಳಿವೆ. ಅದರಲ್ಲಿ, ಇವೆಲ್ಲಾ ಸಶಸ್ತ್ರ ಕ್ರಾಂತಿ ಎಂಬುದೂ ಒಂದು ಸಾಮಾನ್ಯ ಅಂಶ.

ಭಾರತದ ಕಮ್ಯುನಿಸ್ಟರು ಸಶಸ್ತ್ರ ಕ್ರಾಂತಿಯನ್ನು 'ಬಯಸಲಿಲ್ಲ' ಎನ್ನುವುದು ನಿಜವಲ್ಲ. ತೆಲಂಗಾಣಾ ಸಶಸ್ತ್ರ ಹೋರಾಟ ಇದಕ್ಕೆ ಸ್ಪಷ್ಟ ಉದಾಹರಣೆ. ಇದು ನಿಜಾಮನ ಸರಕಾರ ಉರುಳಿಸಿತು ಎನ್ನುವಷ್ಟರ ಮಟ್ಟಿಗೆ ಸಫಲ ಸಶಸ್ತ್ರ ಕ್ರಾಂತಿ ಸಹ. ಇನ್ನೊಂದು ವಿಷಯವೆಂದರೆ ಬೂರ್ಜ್ವಾ ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಭಾಗವಹಿಸುವುದು ಕ್ರಾಂತಿವಿರೋಧಿ ಅಲ್ಲ. ಈ ಮೇಲೆ ಹೇಳಿದ ಹಲವು ದೇಶಗಳಲ್ಲಿ, ರಷ್ಯಾ ಕ್ರಾಂತಿಯ ಮೊದಲು ಅವಕಾಶವಿದ್ದಾಗೆಲ್ಲ ಕಮ್ಯುನಿಸ್ಟರು ಬೂರ್ಜ್ವಾ ಪಾರ್ಲಿಮೆಂಟರಿ ವ್ಯವಸ್ಥೆಯಲ್ಲಿ ಭಾಗವಹಿಸಿದ್ದಾರೆ. ಬೂರ್ಜ್ವಾ ಪಾರ್ಲಿಮೆಂಟರಿವ್ಯವಸ್ಥೆಯಲ್ಲಿ ಭಾಗವಹಿಸಿ ಅದರ ವರ್ಗ ಸ್ವಭಾವ, ಕೊರತೆಗಳನ್ನು ಜನತೆಗೆ ಮನದಟ್ಟು ಮಾಡುತ್ತಾ ಹೋಗುವುದು ಜನತೆಯನ್ನು 'ತಾತ್ವಿಕವಾಗಿ ಗಟ್ಟಿಗೊಳಿಸುತ್ತಾ ಹೋಗುವ' ಪ್ರಕ್ರಿಯೆಯ ಭಾಗ. 'ಜನತಾಪ್ರಜಾಪ್ರಭುತ್ವ'ದತ್ತ ಮುಖ್ಯ ಹೆಜ್ಜೆ ಗುತ್ತೇದಾರಿ ಬಂಡವಾಳಶಾಹಿ ಮತ್ತು ಭೂಮಾಲಕ ಆಧಾರಿತ ಆಳುವ ವರ್ಗಗಳ ವಿರುದ್ಧ ಎಲ್ಲಾ ವರ್ಗಗಳ ಒಕ್ಕೂಟವನ್ನು ಕಾರ್ಮಿಕವರ್ಗದ ನಾಯಕತ್ವದಲ್ಲಿ "ಜನತಾ ಪ್ರಜಾಪ್ರಭುತ್ವ ರಂಗ' ಕಟ್ಟುವುದು ಭಾರತದ ಸಮತಾವಾದಿಗಳ ಸಿ.ಪಿ.ಐ.(ಎಂ)ನ ರಣನೀತಿ.ಭಾರತದ 'ಜನತಾ ಪ್ರಜಾಪ್ರಭುತ್ವ ಕ್ರಾಂತಿ' ಪಾರ್ಲಿಮೆಂಟರಿ ವ್ಯವಸ್ಥೆಒಳಗೆ ಆಗುತ್ತದೆ ಎಂದಾಗಲಿ, ಸಶಸ್ತ್ರಕ್ರಾಂತಿ ಭಾರತದ ಮಣ್ಣಿನಲ್ಲಿ ಅಗತ್ಯವಿಲ್ಲವೆಂದಾಗಲಿ ನಮ್ಮ ತಿಳುವಳಿಕೆ ಅಲ್ಲ.

ಜನತಾ ಪ್ರಜಾಪ್ರಭುತ್ವ ರಂಗದ ಅಧಿಕಾರ ಗೆದ್ದುಕೊಳ್ಳುವ ಹೋರಾಟದ ಕೊನೆಯ ಹಂತದ ಪಾರ್ಲಿಮೆಂಟರಿ ಪದ್ಧತಿಯೊಳಗೆ ಸಾಧ್ಯವಾಗಬಹುದು ಅಥವಾ ಸಶಸ್ತ್ರ ಹೋರಾಟ ಅಗತ್ಯವಾಗಬಹುದು. ಇದರ ಬಗ್ಗೆ ಭವಿಷ್ಯ ನುಡಿಯುವುದು ಕಷ್ಟ. ಸದ್ಯಕ್ಕೆ ಆ ಕೊನೆಯ ಹಂತಕ್ಕೆ ನಾವು ಇನ್ನೂ ಹತ್ತಿರವಿಲ್ಲ ಎನ್ನಬಹುದು.

ಈ ಬಗ್ಗೆ ಕ್ರಾಂತಿಯ ಬಗ್ಗೆ ಮಾರ್ಕ್ಸ್‌ವಾದಿ-ಲೆನಿನ್‌ವಾದಿ ತಿಳುವಳಿಕೆಯ ಆಧಾರದಲ್ಲಿ ರಚಿತವಾಗಿರುವ ಪಕ್ಷದ ಕಾರ್ಯಕ್ರಮ ಸ್ಪಷ್ಟವಾಗಿ ಹೀಗೆ ಹೇಳುತ್ತದೆ.

ಭಾರತ ಕಮ್ಯುನಿಸ್ಟ ಪಕ್ಷವು ಶಾಂತಿಯುತ ವಿಧಾನದ ಮೂಲಕ ಜನತಾ ಪ್ರಜಾಪ್ರಭುತ್ವವನ್ನೂ, ಸಮಾಜವಾದಿ ಪರಿವರ್ತನೆಯನ್ನು ಸಾಧಿಸಲು ಪ್ರಯತ್ನಿಸುತ್ತದೆ. ಸಂಸದೀಯ ಹಾಗೂ ಸಂಸದೀಯಮಾರ್ಗಕ್ಕೆ ಹೊರತಾದ ಹೋರಾಟದ ಸ್ವರೂಪಗಳನ್ನು ಜೋಡಿಸಿ ಒಂದು ಶಕ್ತಿಯುತ ಸಾಮೂಹಿಕ ಚಳುವಳಿಯನ್ನು ಬೆಳೆಸುವುದರ ಮೂಲಕ ಪ್ರತಿಗಾಮಿ ಶಕ್ತಿಗಳ ಪ್ರತಿಭಟನೆಯನ್ನು ಸೋಲಿಸಲು ಶಾಂತಿಯುತ ಮಾರ್ಗದಲ್ಲಿ ಈ ಬದಲಾವಣೆಗಳನ್ನು ತರಲು ಪ್ರಯತ್ನಿಸುವುದು. ಆದರೆ ಆಳುವ ವರ್ಗಗಳು ಸ್ವಇಚ್ಛೆಯಿಂದ ಅಧಿಕಾರವನ್ನು ಎಂದೂ ಬಿಟ್ಟುಕೊಡುವುದಿಲ್ಲವೆಂಬ ವಿಚಾರವನ್ನು ಇಲ್ಲಿ ನೆನಪಿಸಬೇಕಾಗಿದೆ. ಜನತೆಯ ತೀರ್ಮಾನವನ್ನು ಕಾನೂನುಬಾಹಿರ ಕ್ರಮಗಳಿಂದಲೂ, ಹಿಂಸೆಯಿಂದಲೂ ಉಲ್ಲಂಘಿಸಲು, ಬದಲಿಸಲು ಅವರು ಪ್ರಯತ್ನಿಸುತ್ತಾರೆ. ಕ್ರಾಂತಿಕಾರಿ ಶಕ್ತಿಗಳು ಯಾವ ಪರಿಸ್ಥಿತಿಯನ್ನೆದುರಿಸಲೂ ಸಿದ್ಧವಿರುವಂತೆ ತಮ್ಮ ಕೆಲಸವನ್ನು ನಿರೂಪಿಸಿಕೊಳ್ಳುವ ಅಗತ್ಯವಿದೆ.

ಕಾಂಗ್ರೆಸ್ ಸರಕಾರದ 'ತುಘಲಕ್ ದರ್ಬಾರು'
ಸಂಜೆ ಕಾಲೇಜ್ ವಿದ್ಯಾರ್ಥಿಗಳಿಗೆ ಬಸ್ ಪಾಸ್ ಸೌಲಭ್ಯ ರದ್ದು

ಕರ್ನಾಟಕದ ಎಲ್ಲಾ ಸಂಜೆ ಕಾಲೇಜುಗಳಲ್ಲಿ ಅಧ್ಯಯನ ನಡೆಸುತ್ತಿರುವ ವಿದ್ಯಾರ್ಥಿಗಳಿಗೆ ಇದುವರೆಗೆ ನೀಡಲಾಗುತ್ತಿದ್ದ ರಿಯಾಯಿತಿ ದರದ ಬಸ್‌ಪ್ರಯಾಣ ಸೌಲಭ್ಯವನ್ನು ಹಠಾತ್ತನೆ ನಿಲ್ಲಿಸಿರುವ ಕರ್ನಾಟಕ ಸರಕಾರ ಈ ವಿಭಾಗದ ವಿದ್ಯಾರ್ಥಿಗಳಿಗೆ ಆಘಾತವನ್ನುಂಟು ಮಾಡಿದೆ. ಈ ಪಾಸ್ ಸೌಲಭ್ಯದ ರದ್ಧತಿಯಿಂದ ಸಂಜೆ ಕಾಲೇಜ್ ವಿದ್ಯಾರ್ಥಿಗಳಿಗೆ ತೀವ್ರ ಅನಾನುಕೂಲವಾಗುತ್ತದೆ.

ಸಂಜೆ ಕಾಲೇಜ್‌ಗಳಿಗೆ ಹೋಗುವವರು ಉದ್ಯೋಗದಲ್ಲಿರುವವರು ಆದ್ದರಿಂದ ಪಾಸ್ ಸೌಲಭ್ಯವನ್ನು ರದ್ದುಪಡಿಸಲಾಗಿದೆ ಎಂಬ ಸರಕಾರದ ನಿಲುವು ಅಸಮರ್ಥನೀಯ ಏಕೆಂದರೆ, ಮನೆಯ ಆರ್ಥಿಕ ದುಸ್ಥಿತಿಯಿಂದಾಗಿ ಉನ್ನತ ಶಿಕ್ಷಣ ಮುಂದುವರಿಸಲಾಗದೆ. ಶಿಕ್ಷಣಪಡೆಯಲೇಬೇಕೆಂಬ ಹಂಬಲವುಳ್ಳವರು 400-500 ರೂ. ಆದಾಯ ಬರುವ ಕೆಲಸಕ್ಕೆ ಸೇರಿ ಸಂಜೆ ಕಾಲೇಜಿನಲ್ಲಿ ಶಿಕ್ಷಣವನ್ನು ಮುಂದುವರಿಸುತ್ತಾರೆ. ಲಾಟರಿ ಟಿಕೆಟ್, ದಿನಪತ್ರಿಕೆಗಳ ಮಾರಾಟ ಮಾಡಿಯೂ ಈ ಶಿಕ್ಷಣ ಸಂಸ್ಥೆಗಳಲ್ಲಿ ಕಲಿಯುವ ಎಷ್ಟೋ ವಿದ್ಯಾರ್ಥಿಗಳೂ ಇದ್ದಾರೆ. ಪರಿಸ್ಥಿತಿ ಹೀಗಿರುವಾಗ 'ಉದ್ಯೋಗಿ'ಗಳೆಂಬ ಏಕೈಕ ಕಾರಣದಿಂದ ಪ್ರಯಾಣದ ರಿಯಾಯಿತಿ ಅವೈಜ್ಞಾನಿಕ ಹಾಗೂ ಜನವಿರೋಧಿ ನೀತಿಯಾಗುತ್ತದೆ. ಇದರಿಂದ ಎಷ್ಟೋ ವಿದ್ಯಾರ್ಥಿಗಳ ಶೈಕ್ಷಣಿಕ ಹಂಬಲವೇ ಹಾಳಾಗುವುದರಲ್ಲಿ ಸಂಶಯವಿಲ್ಲ.

ಸರಕಾರ ಈ ಸೌಲಭ್ಯ ರದ್ದುಗೊಳಿಸುವುದನ್ನು ಹಿಂತೆಗೆಯುವಂತೆ ಕೆಲವು ಸಂಜೆ ಕಾಲೇಜುಗಳ ಪ್ರಿನ್ಸಿಪಾಲರು ಕೂಡ ಸರಕಾರಕ್ಕೆ ಮನವಿ ಸಲ್ಲಿಸಿರುವುದು ಗಮನಾರ್ಹ ಅಂಶವಾಗಿದೆ.

ತಮ್ಮ ಶೈಕ್ಷಣಿಕ ಬದುಕಿಗೆ ಕೊಡಲಿಯೇಟು ಹಾಕುವ ಸರಕಾರದ ನಿಲುವಿನ ವಿರುದ್ಧ ಬೆಂಗಳೂರಿನ ಸಂಜೆ ಕಾಲೇಜ್ ವಿದ್ಯಾರ್ಥಿಗಳು ಅಲ್ಲಲ್ಲಿ ಪ್ರತಿಭಟನೆ ವ್ಯಕ್ತಪಡಿಸಿದರು. ಸರಕಾರದ ಅಸಂಗತ ನಿರ್ಧಾರವನ್ನು ಗಮನಿಸಿದ ಎಸ್.ಎಫ್.ಐ., ವಿದ್ಯಾರ್ಥಿಗಳ ಆಕ್ರೋಶಕ್ಕೆ ಸಂಘಟಿತ ರೂಪ ಕೊಡಲು ಮುಂದಾಗಿ ಚಳುವಳಿ ರೂಪಿಸಲು ಸಭೆಯೊಂದನ್ನು ಕರೆದಾಗ ಹತ್ತಾರು ಸಂಜೆ ಕಾಲೇಜ್ ವಿದ್ಯಾರ್ಥಿ ಪ್ರತಿನಿಧಿಗಳು ಆಗಮಿಸಿದರು.

ಈ ಸಭೆಯಲ್ಲಿ ಸಂಜೆ ಕಾಲೇಜ್ ವಿದ್ಯಾರ್ಥಿಗಳ ಹೋರಾಟ ಸಮಿತಿಯನ್ನು ರೂಪಿಸಲಾಯಿತು. ಅಲ್ಲಿ ತೆಗೆದುಕೊಂಡ ತೀರ್ಮಾನದ ಮೇರೆಗೆ ಬೆಂಗಳೂರಿನ ಅನೇಕ ಸಂಜೆ ಕಾಲೇಜ್ ವಿದ್ಯಾರ್ಥಿಗಳು ಜುಲೈ 27 ರಂದು ತರಗತಿಗಳನ್ನು ಬಹಿಷ್ಕರಿಸಿದರು. ಇಷ್ಟಾದರೂ ಸರಕಾರ ತನ್ನ ಅವೈಜ್ಞಾನಿಕವಾದ ನಿಲುವಿಗೇ ಅಂಟಿಕೊಂಡಂತಿದ್ದು ವಿದ್ಯಾರ್ಥಿಗಳು ಎಸ್. ಎಫ್. ಐ. ನೇತೃತ್ವದಲ್ಲಿ ಚಳುವಳಿಯನ್ನು ತೀವ್ರಗೊಳಿಸಲು ಸಜ್ಜುಗುತ್ತಿದ್ದಾರೆ.

30-7-90ರಂದು ಹೋರಾಟ ಸಮಿತಿಯ ಕರೆಯಂತೆ ಮೈಸೂರು ಬ್ಯಾಂಕ್ ವೃತ್ತದಲ್ಲಿ 2000 ಕ್ಕೂ ಅಧಿಕ ವಿದ್ಯಾರ್ಥಿಗಳು "ರಸ್ತೆ ತಡೆ" ಚಳುವಳಿ ನಡೆಸಿದರು. ಚಳುವಳಿಯಲ್ಲಿ ಭಾಗವಹಿಸಲು ಬರುತ್ತಿದ್ದ ವಿದ್ಯಾರ್ಥಿಗಳಿಗೆ ಪೋಲೀಸರು ತಡೆ ಒಡ್ಡಿ ತೊಂದರೆ ಪಡಿಸಿದರು ಸುಮಾ 2000 ಕ್ಕೂ ಅಧಿಕ ವಿದ್ಯಾರ್ಥಿಗಳು ಚಳುವಳಿಯಲ್ಲಿ ಭಾಗವಹಿಸಿದ್ದರು. ಇವರಲ್ಲಿ ಹಲವು ವಿದ್ಯಾರ್ಥಿನಿಯರೂ ಸೇರಿದ್ದರು.

ಶಾಂತಿಯುತವಾಗಿ ನಡೆಯುತ್ತಿದ್ದ ಚಳುವಳಿಯನ್ನು ಹಿಮ್ಮೆಟ್ಟಿಸಲು ಪೋಲೀಸರು ಲಾಠಿ ಪ್ರಹಾರ ಮಾಡಿದರು. ವಿದ್ಯಾರ್ಥಿನಿಯರ ಮೇಲೂ ಸಹಾ ಲಾಠಿ ಪ್ರಹಾರ ನಡೆಸಲಾಯಿತು. ಶಾಂತಿಯುತವಾಗಿ ನಡೆಯುತ್ತಿದ್ದ ಚಳುವಳಿಯನ್ನು ಅಮಾನವೀಯ ರೀತಿಯಲ್ಲಿ ಹತ್ತಿಕ್ಕಲು ಯತ್ನಿಸಿದ ದೌರ್ಜನ್ಯ ಪೂರಿತವಾದ ಸರ್ಕಾರದ ಕ್ರಮವನ್ನು ಎಸ್.ಎಫ್.ಐ. ಉಗ್ರವಾಗಿ ಪ್ರತಿಭಟಿಸಿದೆ.

ಪೋಲೀಸರ ಲಾಠಿ ಪ್ರಹಾರಕ್ಕೆ ಹೆದರದೆ 1500ಕ್ಕೂ ಹೆಚ್ಚು ವಿದ್ಯಾರ್ಥಿ-ವಿದ್ಯಾರ್ಥಿನಿಯರು ರಸ್ತೆ ತಡೆ ಚಳುವಳಿ ನಡೆಸಿ ಬಂಧನಕ್ಕೊಳಗಾದರು. ಎಸ್.ಎಫ್.ಐ. ವಿದ್ಯಾರ್ಥಿನಿ ಸಂಗಾತಿಗಳೂ ಲಾಠಿ ಪ್ರಹಾರ ಅನುಭವಿಸಿದರು. ದಿ. 31-7-90 ರಂದು ಸಾರಿಗೆ ಸಚಿವರು ಚರ್ಚೆಗೆ ಆಹ್ವಾನ ನೀಡಿದರು. ಅದರಂತೆ ಇತರ ವಿದ್ಯಾರ್ಥಿ ಸಂಘಟನೆಗಳೊಂದಿಗೆ ಅವರೊಡನೆ ಚರ್ಚೆ ನಡೆಯಿತು. ಶಿಕ್ಷಣದ ಬಗ್ಗೆ ಯಾವುದೇ ಕಾಳಜಿ ಇಲ್ಲದ ಸಚಿವರು ನಕಾರಾತ್ಮಕ ನಿಲುವನ್ನು ತಳೆದಿದ್ದರು. ಅನಂತರ ದಿ. 7-8-90 ರಂದು ಚರ್ಚೆಯನ್ನು ಮುಂದುವರೆಸಲು ಮತ್ತು ಅಲ್ಲಿಯವರೆಗೆ ಕಾಲಾವಕಾಶವನ್ನು ಅವರು ಕೇಳಿದರು.

31-7-90 ರಂದು ಸಂಜೆ, ಹೋರಾಟ ಸಮಿತಿ ಮತ್ತು ಇತರ ವಿದ್ಯಾರ್ಥಿ ಸಂಘಟನೆಗಳು ಸಭೆ ಸೇರಿ ಮುಂದಿನ ಹಂತದ ಚಳುವಳಿಯ ಬಗ್ಗೆ ಚರ್ಚಿಸಲಾಯಿತು. ಅದರಂತೆ ಪ್ರತಿದಿನ ಕಾಲೇಜುಗಳಲ್ಲಿ ಸಭೆ ನಡೆಸುವುದು, ಕಪ್ಪುಪಟ್ಟಿ ಧರಿಸಿ ತರಗತಿಗಳಿಗೆ ಹಾಜರಾಗುವುದು. ಸಾರಿಗೆ ಸಚಿವರಿಗೆ ಪ್ರತಿಯೊಬ್ಬ ವಿದ್ಯಾರ್ಥಿಯು ಕಾರ್ಡ್ ಬರೆದು ಹಾಕುವುದು ನಂತರ 6-8-90ರಂದು ಬಹಿರಂಗ ಮೆರವಣಿಗೆ ನಡೆಸಲು ನಿರ್ಧರಿಸಲಾಯಿತು.

ದೇಶದ ಹಲವೆಡೆ ಕೇಂದ್ರ ರಾಜ್ಯ ಸಂಬಂಧಗಳು, ವಿವಿಧ ರಾಜ್ಯಗಳ ನಡುವಣ ಸಂಬಂಧಗಳು ಭಯೋತ್ಪಾದಕರನ್ನು ವಿದ್ರೋಹಿಗಳನ್ನು ಹುಟ್ಟು ಹಾಕಿರುವ ಸಂದರ್ಭದಲ್ಲಿ ಬೆಂಗಳೂರಿನಲ್ಲಿ ದೇಶದ ಪ್ರಪ್ರಥಮ ಅಂತರ ರಾಜ್ಯ ಮಂಡಳಿ ಜೊತೆಗೆ ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಸಮಾವೇಶಗೊಳ್ಳಲಿದೆ. ಹರ್‍ಯಾಣ - ಪಂಜಾಬ್‌ಗಳ ನಡುವಿನ ರಾಜಧಾನಿಯ ಪ್ರಶ್ನೆ, ನದಿ ನೀರಿನ ಪ್ರಶ್ನೆ ಅಬೋಹರ್, ಫಜಿಲ್ಕಾಗಳ ಪ್ರಶ್ನೆ ಕಾವೇರಿಯ ಪ್ರಶ್ನೆಗಳನ್ನು, ಕೇಂದ್ರ ಹೇರುವ ತೆರಿಗೆಗಳ ಏರಿಸುವ ಬೆಲೆಗಳ ಬಗ್ಗೆ, ಕೇಂದ್ರ ರಾಜ್ಯ ಸಂಬಂಧಗಳ ಬಗ್ಗೆ ವಿವಿಧ ರಾಜ್ಯಗಳು ಪರಸ್ಪರ ಸಮಾನ ಭಾವನೆಯಿಂದ, ಕೇಂದ್ರ ರಾಜ್ಯಗಳೂ ಪರಸ್ಪರ ಸಮಾನ ಭಾವನೆಯಿಂದ ಕುಳಿತು ಚರ್ಚಿಸಬಹುದಾದ ವೇದಿಕೆ ಇದು. ಭಾರತದ ಪ್ರಪ್ರಥಮ ವಿರೋಧ ಪಕ್ಷವಾದ, ಪ್ರಪ್ರಥಮ ಕಾಂಗ್ರೆಸ್ಸೇತರ ರಾಜ್ಯ ಸರ್ಕಾರವನ್ನು ರಚಿಸಿದ ಪಕ್ಷವಾದ ಕಮ್ಯುನಿಸ್ಟ್ ಪಕ್ಷ, ಮುಂದೆ ಮೂರು ರಾಜ್ಯಗಳಲ್ಲಿ ಅಧಿಕಾರಕ್ಕೆ ನಾಯಕತ್ವ ನೀಡಿರುವ ಪಕ್ಷ ಸಿ.ಪಿ.ಐ(ಎಂ) ನಿರಂತರವಾಗಿ ಪ್ರತಿಪಾದಿಸುತ್ತಾ ಬಂದಿರುವ ಬೇಡಿಕೆಗೆ ದೊರೆತ ಜಯವಿದು. ಈ ಸಂಸ್ಥೆಯ ಸ್ವರೂಪವೇನು? ಇದರಿಂದ ಭಾರತದ ಪ್ರಜಾಪ್ರಭುತ್ವದ ಬೆಳವಣಿಗೆಗೆ ಒದಗಬಹುದಾದ ಸಹಾಯವೇನು? ಈ ಲೇಖನವನ್ನು ಓದಿ.

ಮೊತ್ತ ಮೊದಲ ಅಂತರ - ರಾ…

ಕೇಂದ್ರ ರಾಜ್ಯ ಸಂಬ…

ಮೊದ…

ಐದು ವರ್ಷಗಳ ಹಿಂದೆ. ಪಂಜಾಬಿನ ಸಮಸ್ಯೆ ತಿಳಿಯಾಗುತ್ತಿದೆ ಎಂಬ ಆಸೆ ಮೂಡಿತ್ತು. ದೇಶಪ್ರೇಮಿ ಶಕ್ತಿಗಳಲ್ಲಿ. ರಾಜೀವ್ ಲೋಂಗೋವಾಲ್ ಒಪ್ಪಂದ ದೀರ್ಘಕಾಲದ ಸಮಯಸಾಧಕ ರಾಜಕಾರಣದ ನಂತರ ಹೊಸ ವಾತಾವರಣ ಮೂಡಿಸಿತ್ತು. ಆದರೆ ದೇಶಪ್ರೇಮಿ ಶಕ್ತಿಗಳ ಆಸೆ ಬೇಗನೇ ಕಮರಿ ಹೋಯಿತು. ಸಂತ ಲೋಂಗೋವಾಲ್‌ರು ಹುತಾತ್ಮರಾದರೂ ಈ ಪ್ರಶ್ನೆ ಇನ್ನೂ ಬಗೆ ಹರಿಯಲಿಲ್ಲ. ಅಬೋಹರ್, ಫಾಜಿಲ್ಕಾದ ವರ್ಗಾವಣೆಯ ಪ್ರಶ್ನೆ, ಹರ್‍ಯಾಣಾ, ಪಂಜಾಬ್ ನಡುವೆ ನದಿ ನೀರಿನ ಹಂಚಿಕೆಯ ಪ್ರಶ್ನೆ ರಾಜೀವ್ ಲೋಂಗೋವಾಲ್ ಒಪ್ಪಂದದ ಪ್ರಕಾರ ಪರಿಹಾರವಾಗಲಿಲ್ಲ. ಕೇಂದ್ರದ ಕಾಂಗ್ರೆಸ್ ಸರಕಾರ ಮತ್ತೆ ತನ್ನ ಸಮಯ ಸಾಧಕ ರಾಜಕಾರಣದಿಂದಾಗಿ ಪರಿಹಾರವಾಗದಂತೆ ಮಾಡಿತು ಎನ್ನುವುದೇ ಹೆಚ್ಚು ಸೂಕ್ತ. ಪರಿಣಾಮ ಪರಿಸ್ಥಿತಿ ಹದಗೆಡುತ್ತಾ ಹೋಯಿತು. ಅಲ್ಲದೆ ಇನ್ನೂ ಹಲವಾರು ಜೀವಗಳ ಬಲಿ ಪಡೆಯುತ್ತಲೇ ದೇಶದ ಐಕ್ಯತೆಗೆ ದೊಡ್ಡಸವಾಲಾಗಿ ಇನ್ನೂಉಳಿದಿದೆ.

ಹಾಗೆಯೇ ಅಸ್ಸಾಂನಲ್ಲಿ ಪ್ರತಿಪಾದಿಸಲಾರಂಭಿಸಿದ "ವಿದೇಶಿಯರ" ಸಮಸ್ಯೆ, ಕರ್ನಾಟಕ ತಮಿಳುನಾಡುಗಳ ನಡುವಿನ ಜಲವಿವಾದ, ಅಸಂಖ್ಯವಾಗಿರುವ ಗಡಿ ವಿವಾದಗಳು ಒಂದು ರಾಜ್ಯದ ಒಂದು ಭಾಷೆಯ ಜನರನ್ನು ಮತ್ತೊಂದು ಭಾಷೆಯ, ರಾಜ್ಯದ ಜನರ ವಿರುದ್ಧ ತಿರುಗಿಸುತ್ತಿರುವ ಸಮಸ್ಯೆಗಳು.

ಜೊತೆಗೆ ಕೇಂದ್ರ ಸರ್ಕಾರ ಇದ್ದಕ್ಕಿದ್ದಂತೆ ರಿಸರ್ವ್ ಬ್ಯಾಂಕ್‌ನ ಫರ್ಮಾನ್ ನೀಡಿ ರಾಜ್ಯಸರ್ಕಾರಕ್ಕೆ ಹಣಪಾವತಿ ಮಾಡುವುದನ್ನು ನಿಲ್ಲಿಸಿ ಅಲ್ಲಿಯ ಸರ್ಕಾರಗಳನ್ನು ದುರಂತಕ್ಕೆ ಸಿಕ್ಕಿರುವ ಕ್ರಮಗಳಿಂದ ಹಿಡಿದು ಅನೇಕ ತೆರಿಗೆಗಳ ಹೇರಿಕೆ, ತೆರಿಗೆಗಳ ಪಾಲು, ಕೇಂದ್ರದ ಹಿಡಿತದಲ್ಲಿರುವ ಕೈಗಾರಿಕೆಗಳು ತಯಾರಿ ಸುವ ವಸ್ತುಗಳ ಬೆಲೆ ಇತ್ಯಾದಿ ಅಸಂಖ್ಯ ಕೇಂದ್ರ ರಾಜ್ಯಗಳ ನಡುವಿನ ಸಮಸ್ಯೆಗಳು ಪ್ರತ್ಯೇಕತಾವಾದಕ್ಕೆ ಫಲವತ್ತಾದ ಮಣ್ಣನ್ನು ಒದಗಿಸಿವೆ. ಈ ಸಮಸ್ಯೆಗಳನ್ನು ವಿವಿಧ ರಾಜ್ಯಗಳು ಸಮಾನ ಹಕ್ಕಿನಿಂದ ಕುಳಿತು ಚರ್ಚಿಸಲು ಒಂದು ವೇದಿಕೆ, ಸಂಸ್ಥೆ ಯನ್ನು ಸ್ಥಾಪಿಸಲು ಕಾಂಗ್ರೆ ಪಕ್ಷ ನಿರಾಕರಿಸಿತು.

ಅಸ್ಸಾಂನಲ್ಲಿ ಕಂಡ ನರಮೇಧ, ಈಗ ಉಲ್ಫಾ (ULFA) ದ ಚಟುವಟಿಕೆಗಳು, ಕಾಶ್ಮೀರದಲ್ಲಿ ಭಯೋತ್ಪಾದಕತೆ ದೇಶದ ಸಮಗ್ರತೆಗೆ ಇಷ್ಟೊಂದು ದೊಡ್ಡ ಸವಾಲಾಗಿ ಬೆಳೆಯುವುದನ್ನು ಕೂಡಾ ತಪ್ಪಿಸಬಹುದಾಗಿತ್ತು. ಏಕೆಂದರೆ ಈ ಎಲ್ಲಾ ಸಮಸ್ಯೆಗಳ ಮೂಲದಲ್ಲಿರುವುದು ಬಂಡವಾಳಶಾಹಿ ಮಾರ್ಗಹಿಡಿದು ದಿವಾಳಿಯೆದ್ದ ಅರ್ಥಿಕತೆಯನ್ನು ಅಸಮಾನ ಬೆಳವಣಿಗೆ ಇನ್ನಷ್ಟು ಉಲ್ಬಣಗೊಳಿಸಿದ್ದರಪರಿಣಾಮ.

ನಮ್ಮ ಸಂವಿಧಾನ ಫೆಡರಲ್ ತತ್ವ ಹೇಳಿದರೂ ಅಂದರೆ ನಮ್ಮ ದೇಶ ಸಮಾನತೆಯ ಆಧಾರದ ಮೇಲೆ ನಿಂತ ವಿವಿಧ ಭಾಷಾ - ಜನಾಂಗಗಳ ಒಕ್ಕೂಟ ಎಂದು ಹೇಳಿದರೂ ಅದು ವಿವಿಧ ಭಾಷಾ ಜನಾಂಗಗಳಿಗೆ ವಾಸ್ತವಿಕ ಸಮಾನತೆ ಕೊಡಲು ಹಿಂಜರಿದ ಏಕಘಟಕ, ಕೇಂದ್ರೀಕೃತ ದೇಶವನ್ನಾಗಿ ಮಾಡಲು ಸಕಲ ಅವಕಾಶ ಒದಗಿಸಿದ ಸಂವಿಧಾನ. ಅದರಲ್ಲಿ ಫೆಡರಲ್ ತತ್ವದ ಸೂಚನೆಯಿರುವುದು ಎಲ್ಲೋ ಕೆಲವಡೆ ಮಾತ್ರ. ಅದರಲ್ಲಿ 263 ನೇ ಕಲಮು ಒಂದು.

ಏನಿದು 263 ನೇ ಕಲಮು? ಇದೇ ಅಂತರ ರಾಜ್ಯ ಮಂಡಳಿ ರಚನೆಗೆ ಅವಕಾಶ ಒದಗಿಸಿರುವ ಕಲಮು. ಇದರ ಪ್ರಕಾರ ರಾಷ್ಟ್ರಪತಿಗಳು ಒಂದು ಅಂತರ ರಾಜ್ಯ ಮಂಡಳಿ ರಚಿಸಬೇಕು. ಇದು ರಾಜ್ಯಗಳ ನಡುವೆ ಮತ್ತು ರಾಜ್ಯ ಮತ್ತು ಕೇಂದ್ರ ನಡುವೆ ಏಳುವ ಯಾವುದೇ ವಿವಾದದ ಬಗ್ಗೆ ಚರ್ಚಿಸಿ ನಿರ್ಣಯ ಕೈಗೊಳ್ಳಲು ನೆರವಾಗಲು ಸಂವಿಧಾನ ನೀಡಿದ ಅವಕಾಶ. ರಾಜ್ಯಗಳ ನಡುವಿನ ವಿವಾದಗಳು, ಕೇಂದ್ರ ಮತ್ತು ರಾಜ್ಯದ ನಡುವಿನ ವಿವಾದಗಳಿಂದ ಅವುಗಳ ನಡುವೆ ಸಂಬಂಧಗಳು ಹದಗೆಡದಂತೆ ಆ ಮೂಲಕ ದೇಶದ ಐಕ್ಯತೆಗೆ ಸವಾಲಾಗಿ ಪರಿಣಾಮಿಸದಂತೆ ನೋಡಿಕೊಳ್ಳಲೆಂದು ರಚಿಸಿದ ವ್ಯವಸ್ಥೆ. ಆದರೆ ಕೇಂದ್ರದಲ್ಲಿದ್ದ ಕಾಂಗ್ರೆಸ್ ಸರಕಾರಗಳು ಸತತವಾಗಿ ತಮ್ಮ ಪ್ರಜಾಪ್ರಭುತ್ವ ವಿರೋಧಿ ನಿಲುವಿನಿಂದಾಗಿ, ಸ್ವಾರ್ಥ ಪರತೆಯಿಂದಾಗಿ ಇದನ್ನು ವಿರೋಧಿಸುತ್ತಾ ಬಂದವು. ಜತೆಗೆ ವರ್ಷ ಕಳೆದಂತೆ ರಾಜ್ಯಗಳಿಗೆ ಇದ್ದ ಅಲ್ಪ ಅಧಿಕಾರಗಳನ್ನೂ ಕ್ರಮೇಣ ಕಬಳಿಸುತ್ತಾ ಬಂದವು. ಆರ್ಥಿಕವಾಗಿ ಅವು ಕೇಂದ್ರದ ಮೇಲೆಯೇ ಅವಲಂಬಿಸಬೇಕಾದ ಸ್ಥಿತಿ ನಿರ್ಮಿಸಿತು. ಅನಗತ್ಯ ಸೆಳೆತಗಳನ್ನು ತಪ್ಪಿಸಬಹುದಾಗಿದ್ದ ಒಂದು ವೇದಿಕೆ

ಬಾಯಲ್ಲಿ ಫೆಡರಲ್ ತತ್ವ, ಬಗಲಲ್ಲಿ ಕೇಂದ್ರೀಕೃತ ಪ್ರಭುತ್ವ - ಏಕೆ?

ನಮ್ಮ ಸಂವಿಧಾನದ ಫೆಡರಲ್ ರಚನೆ ಪೂರ್ಣವಾಗಿ ಅವಾಸ್ತವಿಕವಾದ ಒಂದು ವಾದದ ಮೇಲೆ ನಿಂತಿದೆ. ಅದೆಂದರೆ "ದೇಶದ ಐಕ್ಯತೆ ಕಾಪಾಡಲು ಒಂದು ಬಲವಾದ ಶಕ್ತಿಶಾಲಿ ಕೇಂದ್ರ ಬೇಕು" ಆದ್ದರಿಂದಲೇ ಸಂವಿಧಾನದಲ್ಲಿ ಅಧಿಕಾರಗಳ ವಿಂಗಡಣೆ ಯಾವ ರೀತಿ ನಡೆದಿದೆಯೆಂದರೆ ಪ್ರಭುತ್ವದ ಎಲ್ಲಾ ಅಧಿಕಾರಗಳು ಕೇಂದ್ರದಲ್ಲಿವೆ. ರಾಜ್ಯಗಳಿಗೆ ನೀಡಿರುವುದು ಅಧಿಕಾರದ ಬಾಹ್ಯ ತೋರಿಕೆಗಳಷ್ಟೇ. ಇದು ಕೂಡಾ ಸತತವಾಗಿ ಆಕ್ರಮಣಕ್ಕೆ ಒಳಗಾಗಿವೆ. ಸದಾ ಹೆಚ್ಚುತ್ತಿರುವ ಕೇಂದ್ರದ ಈ ಅಧಿಕಾರಗಳಿಂದಾಗಿ ರಾಜ್ಯಗಳು ಹೆಚ್ಚಿನ ಅಧಿಕಾರಕ್ಕಾಗಿ ಹೋರಾಡಬೇಕಾದ ಅಗತ್ಯ ಬಂದಿದೆ. ರಾಜ್ಯಗಳ ಆಕಾಂಕ್ಷೆಗಳು ಮತ್ತು ಕೇಂದ್ರದಲ್ಲಿ ಅಧಿಕಾರ ಕೇಂದ್ರೀಕೃತವಾಗಿರುವ ವಾಸ್ತವಿಕತೆಯ ನಡುವಿನ ಈ ತಿಕ್ಕಾಟ ಈಗ ಬಡವರು ಮತ್ತು ಶ್ರೀಮಂತರ ನಡುವಿನ ತಿಕ್ಕಾಟದಷ್ಟೇ ದೊಡ್ಡ ಸಂಘರ್ಷವಾಗಿ ಮೂಡಿಬರುತ್ತಿದೆ.

ಈ ವಿದ್ಯಮಾನವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ ನಮ್ಮ ದೇಶದಲ್ಲಿ ಫೆಡರಲ್ (ಒಕ್ಕೂಟ) ವಿಚಾರ ಹೇಗೆ ವಿಕಾಸಗೊಂಡಿತು ಎಂಬುದನ್ನು ತಿಳಿಯಬೇಕು. ಸಂವಿಧಾನ ಸಭೆ ಸಂವಿಧಾನ ರಚನೆಯ ಕೆಲಸ ಆರಂಭಿಸುವ ಸುಮಾರು 50 ವರ್ಷಗಳ ಹಿಂದೆಯೇ ಒಕ್ಕೂಟ ವಿಚಾರ ಹುಟ್ಟಿಕೊಂಡಿತ್ತು. ಭಾಷಾವಾರು ಪ್ರಾಂತ್ಯಗಳ ರಚನೆಯ ಆಂದೋಲನದ ಹಿನ್ನೆಲೆಯಲ್ಲಿ ಈ ವಿಚಾರ ಜನ್ಮ ತಾಳಿತು. ಸಾಮ್ರಾಜ್ಯಶಾಹಿ ವಿರೋಧಿ ಸ್ವಾತಂತ್ರ್ಯ ಹೋರಾಟ ಮಹಾತ್ಮಾ ಗಾಂಧಿಯವರ ನೇತೃತ್ವದಡಿ ಬಂದ ಕೂಡಲೇ, ಅದು ಗ್ರಾಮೀಣ ಜನ ಸಮುದಾಯಗಳ ನಡುವೆ ಹರಡಿದ ಕೂಡಲೇ ಭಾಷಾವಾರು ಪ್ರಾಂತಗಳ ರಚನೆ ಒಂದು ಮುಖ್ಯ ಬೇಡಿಕೆಯಾಯಿತು. ಸ್ವಾತಂತ್ರ್ಯ ಹೋರಾಟ ಯಾವ "ಭಾರತದ ಐಕ್ಯತೆ"ಗಾಗಿ ಹೋರಾಡುತ್ತಿತ್ತೋ ಅದನ್ನು ದೇಶದಲ್ಲಿ ವಾಸಿಸುತ್ತಿರುವ "ವಿವಿಧ ಭಾಷಾ ಸಾಂಸ್ಕೃತಿಕ ಗುಂಪುಗಳ ಭಿನ್ನತೆ"ಯೊಂದಿಗೆ ಬೆಸೆಯುವುದು ಅಗತ್ಯ ಎಂಬುದರ ಸ್ಪಷ್ಟ ಸೂಚನೆ ಇದಾಗಿತ್ತು. ಪ್ರಾಚೀನ ಭಾರತದ ಸಾಮ್ರಾಟರುಗಳ ಸೈನಿಕ ಶಕ್ತಿಯಾಗಲಿ, 'ಭಾರತವನ್ನು ಒಂದು ಗೂಡಿಸಿತು.' ಎನ್ನುವ ಬ್ರಿಟಿಷರ ವಸಾಹತುಶಾಹಿ ಯಂತ್ರವಾಗಲಿ ಒಂದು ಸ್ವತಂತ್ರ, ಪ್ರಜಾಪ್ರಭುತ್ವವಾದೀ ಭಾರತದಲ್ಲಿ ಉಪಯೋಗಕ್ಕೆ ಬರುವುದಿಲ್ಲ ಎಂಬ ಸಂಗತಿ ಸ್ಪಷ್ಟವಾಗಿತ್ತು. ಸಂಯುಕ್ತ ಭಾರತದ ಮುಖಂಡರು ಪ್ರತಿಯೊಂದು ಭಾಷಾ-ಸಾಂಸ್ಕೃತಿಕ ಗುಂಪಿನ ಬೆಳವಣಿಗೆಗೆ ಪೂರ್ಣ ಸ್ವಾತಂತ್ರ್ಯ ಕೊಟ್ಟು, ಸಮಸ್ತ ಜನತೆಯ ಹಿತಾಸಕ್ತಿಗಳಿಗೆ ಅಗತ್ಯವಾದ ಕನಿಷ್ಠ ಅಧಿಕಾರಗಳನ್ನು ತಮಗಿಟ್ಟುಕೊಂಡರೆ ಮಾತ್ರವೇ ದೇಶದ ಐಕ್ಯತೆ ಕಾಪಾಡಲು ಸಾಧ್ಯವಿತ್ತು. ಇದು ಒಕ್ಕೂಟ ವಿಚಾರದ ಸಾರಾಂಶ.

> ರಾಜ್ಯಗಳ ಆಕಾಂಕ್ಷೆಗಳು ಮತ್ತು ಕೇಂದ್ರದಲ್ಲಿ ಅಧಿಕಾರ ಕೇಂದ್ರೀಕೃತವಾಗಿರುವ ವಾಸ್ತವಿಕತೆಯ ನಡುವಿನ ಈ ತಿಕ್ಕಾಟ ಈಗ ಬಡವರು ಮತ್ತು ಶ್ರೀಮಂತರ ನಡುವಿನ ತಿಕ್ಕಾಟದಷ್ಟೇ ದೊಡ್ಡಸಂಘರ್ಷವಾಗಿ ಮೂಡಿ ಬರುತ್ತಿದೆ. ಈ ವಿದ್ಯಮಾನವನ್ನು ಸರಿಯಾಗಿ ಅರ್ಥ ಮಾಡಿಕೊಳ್ಳಬೇಕಾದರೆ ನಮ್ಮ ದೇಶದಲ್ಲಿ ಫೆಡರಲ್ (ಒಕ್ಕೂಟ) ವಿಚಾರ ಹೇಗೆ ವಿಕಾಸಗೊಂಡಿತು ಎಂಬುದನ್ನು ತಿಳಿಯಬೇಕು.

ಆದರೆ ಈ ಬಗ್ಗೆ ಚರ್ಚೆ ಸ್ವಾತಂತ್ರ್ಯ ಪೂರ್ವ ಕಾಲದಲ್ಲಿ ವಿರೂಪಗೊಂಡಿತು. ಏಕೆಂದರೆ ಅದು ಹಿಂದೂ ಮುಸ್ಲಿಂ ಸಂಬಂಧಗಳೊಡನೆ ಕಲಸುಮೇಲೋಗರಗೊಂಡಿತು. ಹಿಂದೂಗಳು ಏಕ ಘಟಕ (ಕೇಂದ್ರೀಕೃತ) ಪ್ರಭುತ್ವವನ್ನು ಮತ್ತು ಮುಸ್ಲಿಮರು ಫೆಡರಲ್ ಪ್ರಭುತ್ವವನ್ನು ಪ್ರತಿಪಾದಿಸ ಲಾರಂಭಿಸಿದರು. ಈ ಎರಡು ಕೋಮುಗಳ ನಡುವೆ ಒಪ್ಪಂದದ ಪ್ರಯತ್ನದಲ್ಲೇ ಭಾರತ ರಾಷ್ಟ್ರೀಯ ಕಾಂಗ್ರೆಸ್‌ನ ಮುಖಂಡರು ಫೆಡರಲ್ ತತ್ವವನ್ನು ಸ್ವೀಕರಿಸಿದ್ದು. ಅವರಿಗೆ ಈ ಬಗ್ಗೆ ಬಹಳಷ್ಟು ಭಿನ್ನಾಭಿಪ್ರಾಯಗಳಿದ್ದವು. ಅವರ ಮಟ್ಟಿಗೆ ಒಕ್ಕೂಟ ವಿಚಾರದ ಸ್ವೀಕಾರ ಕೇವಲ ಒಂದು ರಾಜೀ ಸೂತ್ರವಲ್ಲದೆ ಬೇರೇನೂ ಆಗಿರಲಿಲ್ಲ. ಆದ್ದರಿಂದ ದೇಶದ ವಿಭಜನೆಯಾಗಿ ಫೆಡರಲ್ ವಿಚಾರ ಪ್ರತಿಪಾದಿಸುತ್ತಿದ್ದ ಮುಸ್ಲಿಂಲೀಗ್ ರಂಗದಿಂದ ನಿರ್ಗಮಿಸಿದ ತಕ್ಷಣ ಸಿಕ್ಕಿದ ಸಂದರ್ಭವನ್ನು ಕಾಂಗ್ರೆಸ್ ಬಳಸಿಕೊಂಡಿತು ಎಷ್ಟು ಸಾಧ್ಯವೋ ಅಷ್ಟು ಪ್ರಮಾಣದಲ್ಲಿ ಕೇಂದ್ರೀಕರಣದ ವಿಚಾರಗಳನ್ನು ಜ್ಯಾರಿಗೆ ತರಲುಯತ್ನಿಸಿತು. ಸಂವಿಧಾನ ಫೆಡರಲ್ ನೀತಿ ಬಗ್ಗೆ ಹೇಳಿದರೂ ಒಕ್ಕೂಟದ ಕೇಂದ್ರವನ್ನು ಅತ್ಯಂತ ಬಲಶಾಲಿಗೊಳಿಸಿ, ವಾಸ್ತವವಾಗಿ ದೇಶದ ಹೊಸ ಪ್ರಭುತ್ವವನ್ನು ಸುಮಾರಾಗಿ ಏಕ ಘಟಕ ವನ್ನಾಗಿಯೇ ಮಾಡಿರುವುದರ ಹಿನ್ನೆಲೆ ಇದು.

ಇ.ಎಂ.ಎಸ್. ನಂಬೂದಿರಿಪಾಡ್‌ರ "ಸಮಾಜವಾದಕ್ಕಾಗಿ ಹೋರಾಟದಲ್ಲಿ ಗಣತಂತ್ರದ ಸಂವಿಧಾನ" ಎಂಬ 1968 ರಲ್ಲಿ ರಚಿಸಿದ ಪ್ರಬಂಧದಿಂದ.

ಸಂವಿಧಾನದತ್ತವೂ ಅಲ್ಲ -…

ಸಂವಿಧಾನ ಅಂತರ-ರಾಜ್ಯ ಮಂಡಳಿಯ ಬಗ್ಗೆ ಹೇಳಿದ್ದರೂ ದೇಶದ ಯೋಜನಾ ಬದ್ಧ ಬೆಳವಣಿಗೆಯಬಗ್ಗೆ ಒಟ್ಟಭಿಪ್ರಾಯ ರೂಪಿಸುವ ಬಗ್ಗೆ ಏನೂ ಹೇಳಿರ ಲಿಲ್ಲ. ಈಗಿರುವ ಯೋಜನಾ ಆಯೋಗ ವಾಗಲಿ, ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಾಗಲೀ ಸಂವಿಧಾನದತ್ತ ವೇದಿಕೆಗಳಲ್ಲ. ಅಥವಾ ಶಾಸನಬದ್ಧ ಸಂಸ್ಥೆಗಳೂ ಅಲ್ಲ. ಆದರೂ ದೇಶದ ಆರ್ಥಿಕ ಬೆಳವಣಿಗೆಯ ಮುಖ್ಯ ಕೆಲಸ ಇವುಗಳ ಮೇಲೆ ಹಾಕಲಾಗಿದೆ!

1950ರಲ್ಲಿ ಕೇಂದ್ರ ಮಂತ್ರಿಮಂಡಲದ ಒಂದು ನಿರ್ಣಯದಮೇರೆಗೆ ಯೋಜನಾ ಆಯೋಗ ರಚನೆಗೊಂಡಿತು. ಹಣಕಾಸು ಆಯೋಗದ ಶಿಫಾರಸಿನ ಮೇಲೆ ರಾಜ್ಯಗಳಿಗೆ ಹಣಕಾಸು ಸಂಪನ್ಮೂಲಗಳನ್ನು ವರ್ಗಾಯಿಸಬೇಕೆಂದು ಸಂವಿಧಾನ ವಿಧಿಸಿದ್ದರೂ ಅದು ವಾಸ್ತವವಾಗಿ ಕೇವಲ ಕಂದಾಯ ವರ್ಗಾವಣೆ ಅಷ್ಟೇ ಮಾಡುತ್ತಿದ್ದು ಯೋಜಿತ ಅಭಿವೃದ್ಧಿಗೆ ಬೇಕಾದ ಬಂಡವಾಳ ಸಂಪನ್ಮೂಲಗಳನ್ನು ಸಂವಿಧಾನ ಬದ್ಧವಲ್ಲದ ಯೋಜನಾ ಆಯೋಗ ಮಾಡುತ್ತಾ ಬಂದಿದೆ ಎಂಬುದನ್ನು ಸರ್ಕಾರಿಯಾ ಆಯೋಗವೂ ಟೀಕಿಸಿದೆ.

ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಕೂಡಾ ಕೇಂದ್ರ ಮಂತ್ರಿಮಂಡಲದ ಇನ್ನೊಂದು ನಿರ್ಣಯದ ಪ್ರಕಾರ 1952 ರಲ್ಲಿ ರಚನೆಗೊಂಡಿತು. ಯೋಜನಾ ರಂಗದಲ್ಲಿ ಇದು ಅತ್ಯುನ್ನತ ಚರ್ಚಾ ಸಲಹಾ ವೇದಿಕೆಯೆಂದು ಇದನ್ನು ಸ್ಥಾಪಿಸಲಾಗಿತ್ತು. ರಾಷ್ಟ್ರೀಯ ಅಭಿವೃದ್ಧಿಯ ಸಾಮಾಜಿಕ ಆರ್ಥಿಕ ಧೋರಣೆಗಳ ಪ್ರಮುಖ ಪ್ರಶ್ನೆಗಳನ್ನು ಪರಿಶೀಲಿಸಿ, ಸಮಯ ಸಮಯಕ್ಕೆ ಯೋಜನೆಯ ನಿರ್ವಹಣೆಯ ಉಸ್ತುವಾರಿ ಇದರ ಕೆಲಸವೆಂದು ಹೇಳಲಾಗಿತ್ತು.

ಆದರೆ ಸಂವಿಧಾನ ಬದ್ಧ ಸಂಸ್ಥೆಗಳಾಗದೆ ಕೇಂದ್ರ ಸರ್ಕಾರ ತನ್ನಿಚ್ಛೆಯಂತೆ ರೂಪಿಸಿದ ಸಂಸ್ಥೆಗಳು ಎಂಬ ಕಾರಣಕ್ಕಾಗಿಯೇ ಇವೆರಡೂ ಸಹಜವಾಗಿ… ಕೇಂದ್ರದಲ್ಲಿರುವ ಸರಕಾರದ ಬಾಲಂಗೋ… ಗಳಾಗಿ ಬಿಟ್ಟಿವೆ. ಯೋಜನಾ ಆಯೋ… ದಲ್ಲಿ ಯಾರ್‍ಯಾರು ಸದಸ್ಯರಾಗಿರಬೇಕೆಂ… ನಿರ್ಧರಿಸುವುದು. ಅದರ ಖರ್ಚು ವೆ… ಎಲ್ಲಾ ಕೇಂದ್ರ ಸರ್ಕಾರದ್ದು. ಒ… ಕೇಂದ್ರ ಮಂತ್ರಿ ಯೋಜನಾ ಆಯೋಗ… ಕಾರ್ಯನಿರ್ವಾಹಕ ಮುಖ್ಯಸ್ಥನಾಗಿರು… ಸಂಪ್ರದಾಯವನ್ನೇ ಬೆಳೆಸಲಾಗಿ… ಆದ್ದರಿಂದ ಯೋಜನಾ ಆಯೋಗ ಸ್ವ… ತಲೆಯಿಲ್ಲದ ಸಂಸ್ಥೆಯಾಗಿ ಬಿಟ್ಟಿ… ರಾಜ್ಯಗಳ ಅವಶ್ಯಕತೆಗಳೇನು ಎಂ… ವಸ್ತುನಿಷ್ಟವಾಗಿ ಅದು ನಿರ್ಧರಿಸಲಾರದ… ಸಂಯೋಜನೆಯ ಹೆಸರಿನಲ್ಲಿ ಅ… ನಿರ್ದೇಶನಗಳನ್ನು ನೀಡುತ್ತದೆ. ಕೇವ… ಕೇಂದ್ರ ಸರ್ಕಾರದ ಸಂಕುಚಿತ, ಅ… ಕಾಲೀನ ಹಿತಾಸಕ್ತಿಗಳನ್ನಷ್ಟೇ ಅ… ಈಡೇರಿಸುತ್ತದೆ ಎಂದು ಶ್ರೀನ… ಸಮ್ಮೇಳನದಲ್ಲಿ ಪಶ್ಚಿಮ ಬಂಗಾಳ… ಮುಖ್ಯಮಂತ್ರಿ ಜ್ಯೋತಿ ಬಸು ಮಂ… ಸಿದ ಟಿಪ್ಪಣಿ ಸ್ಪಷ್ಟವಾಗಿ ಹೇಳಿತ್ತು.

ರಾಷ್ಟ್ರೀಯ ಅಭಿವೃದ್ಧಿ ಮಂಡಳಿ

ರಾಷ್ಟ್ರೀಯ ಅಭಿವೃದ್ಧಿ ಮಂಡ… ಯಂತೂ ಕೆಲಸವನ್ನೇ ಮಾಡದ ಒಂ… ಸಂಸ್ಥೆ. ಯಾವಾಗಲೋ ಒಮ್ಮೆ ಅದು ಸ… ಸೇರುತ್ತದೆ. ಯೋಜನಾಆಯೋಗ ಬಯ… ದಾಗಲಷ್ಟೆ ಅದು ಸಭೆ ಸೇರುತ್ತದೆ. ಅ… ಅಜೆಂಡಾವನ್ನೂ ಯೋಜನಾ ಆಯೋಗ… ನಿರ್ಧರಿಸುತ್ತದೆ. ತಾನು ಯಾಂತ್ರಿಕವಾ… ಅನುಮತಿ ಕೊಡುವ ಯೋಜನೆಗಳ ಜ… ಹೇಗಾಗುತ್ತಿದೆ ಎಂದು ಅದು ಪರಿಶೀ… ಸುವುದೇ ಇಲ್ಲ. 32 ವರ್ಷಗಳಲ್ಲಿ ಅ… ಸಭೆ ಸೇರಿದ್ದು ಕೇವಲ 39 ಬಾರಿ. 37 … ಸಭೆನಡೆದದ್ದು ಎರಡು ವರ್ಷ, ನಾ… ತಿಂಗಳ ನಂತರ ಎಂದು ಸರ್ಕಾರಿಯಾ… ಆಯೋಗವೇ ಟಿಪ್ಪಣಿ ಮಾಡಿ… ಯೋಜನೆಯ ಕುರಿತಾದ ವಿವಿಧ ಚ…

ಮಂಡಳಿ ಸಭೆ ಬೆಂಗಳೂರಿನಲ್ಲಿ

...ಗಳ ಪುನರ್ರಚನೆಯತ್ತ ಹೆಜ್ಜೆ

ಯನ್ನು ಬುಡಮೇಲು ಮಾಡಿತು. ಪರಿಣಾಮವಾಗಿ ಕೇಂದ್ರ ಮತ್ತು ವಿವಿಧ ರಾಜ್ಯಗಳ ಜನತೆಯ ನಡುವೆ ಕಂದರ, ಪರಕೀಯ ಭಾವನೆ ನಿರ್ಮಾಣವಾಗುತ್ತಾ ಹೋಯಿತು. ಈ ರೀತಿ ಕೇಂದ್ರದಲ್ಲಿ ಆಳುವ ಸರ್ಕಾರದ ಸರ್ವಾಧಿಕಾರಿ ಪ್ರವೃತ್ತಿ ರಾಜ್ಯಗಳ ಅಧಿಕಾರಗಳ ಮೇಲಿನ ಆಕ್ರಮಣ ಪ್ರತ್ಯೇಕತಾವಾದಿ ಮತ್ತು ಸಂಕುಚಿತವಾದಿ ಶಕ್ತಿಗಳು ತಲೆಯೆತ್ತಲು ನೆಲ ಹದಗೊಳಿಸಿತು. ಇದರ ದುಷ್ಪರಿಣಾಮಗಳು ಈಗ ನಮ್ಮೆದುರಿಗಿವೆ.

ಇದನ್ನು ಮೊದಲೇ ಮನಗಂಡ ದೇಶದ ಕಮ್ಯುನಿಸ್ಟ್ ಆಂದೋಲನ ಸಂವಿಧಾನದ 263 ನೇ ಕಲಮಿನ ಪ್ರಕಾರ ಅಂತರ ರಾಜ್ಯ ಮಂಡಳಿ ನಿರ್ಮಿಸಬೇಕೆಂದು, 1952 ರಲ್ಲಿ ಯೋಜನಾ ರಂಗದ ಅತ್ಯುನ್ನತ ಚರ್ಚಾ ವೇದಿಕೆಯೆಂದು ರಚಿಸಿದ ರಾಷ್ಟ್ರೀಯಅಭಿವೃದ್ಧಿ ಮಂಡಳಿಯನ್ನು ಕೇಂದ್ರದ ಬಾಲಂಗೋಚಿಯಾಗಿಸದೆ ಒಂದು ಪ್ರಾತಿನಿಧಿಕ ಸಂಸ್ಥೆಯಾಗಿಸಬೇಕೆಂದು ಆರಂಭದಿಂದಲೇ ಒತ್ತಾಯಿಸುತ್ತಾ ಬಂದಿದೆ.

ಅಂತರ ಸರ್ಕಾರಿ ಮಂಡಳಿಯೋ - ಅಂತರ ರಾಜ್ಯ ಮಂಡಳಿಯೋ?

ಸರ್ಕಾರಿಯಾ ಆಯೋಗ ಸಂವಿಧಾನ ಹೇಳಿದ್ದ ಅಂತರ - ರಾಜ್ಯ ಮಂಡಳಿಯ ಬದಲು ಅಂತರ-ಸರ್ಕಾರ ಮಂಡಳಿ ರಚಿಸಲು ಸಲಹೆ ಮಾಡಿತ್ತು. ಈ ಬಗ್ಗೆ ಕಾಂ. ಬಿ.ಟಿ.ಆರ್. ಹೀಗೆ ಟಿಪ್ಪಣಿ ಮಾಡಿದ್ದರು. "ಆಯೋಗ ಇಂತಹುದೊಂದು ವೇದಿಕೆಯನ್ನು ಸ್ಥಾಪಿಸಬೇಕೆಂದು ಶಿಫಾರಸು ಮಾಡಿದ್ದು ಒಳ್ಳೆಯದೇ. ಇದು ಹಲವಾರು ರಾಜ್ಯಗಳ ಬೇಡಿಕೆಯಾಗಿತ್ತು. ಸಂವಿಧಾನ ಅಂಗೀಕಾರವಾದ ಕೂಡಲೇ ಇದನ್ನು ಸ್ಥಾಪಿಸಿದ್ದರೆ ಇದರ ಉಪಯೋಗ ಇನ್ನೂ ಹೆಚ್ಚಿರುತ್ತಿತ್ತು. ಏಕೆಂದರೆ ಆಗಿನ್ನೂ ಕೇಂದ್ರ-ರಾಜ್ಯ ಸಂಬಂಧಗಳು ಈಗಿನಷ್ಟು ತೀವ್ರವಾಗಿ ಹದಗೆಟ್ಟಿರಲಿಲ್ಲ. ಸರ್ವಸಾಮಾನ್ಯ ತಿಳುವಳಿಕೆಯ, ರಾಷ್ಟ್ರೀಯ ಭಾವನೆಯ, ಎಲ್ಲರ ಒಳಿತಿಗಾಗಿ ಕೊಡುಕೊಳ್ಳುವ ಭಾವನೆಯ ವಾತಾವರಣವಿತ್ತು. ಈಗಲೂ ಕೂಡಾ ಸರ್ಕಾರಿಯಾ ಆಯೋಗ ಇದೊಂದು ಸಲಹಾ ಮಂಡಳಿ ಮಾತ್ರವಾಗಿರಬೇಕೆಂದು ಶಿಫಾರಸು ಮಾಡಿದ್ದರೂ ಅದರ ಸ್ಥಾಪನೆ ಕೇಂದ್ರದ ಹುಕುಂಶಾಹಿ ಬುದ್ಧಿಯನ್ನು ತಡೆಯಲು, ಕಮ್ಮಿ ಮಾಡಲು ಉಪಯೋಗಕಾರಿ".

ಕೇರಳದಲ್ಲಿ, ಪಶ್ಚಿಮ ಬಂಗಾಳದಲ್ಲಿ ನಮ್ಮ ಪಕ್ಷದ ನೇತೃತ್ವದ ಸರಕಾರಗಳು ಬಂದಾಗ ಈ ಎರಡು ಸಂಸ್ಥೆಗಳ ಬಗ್ಗೆ ಕೇಂದ್ರದ, ದೇಶದ ಪ್ರಜಾಪ್ರಭುತ್ವ ಶಕ್ತಿಗಳ ಗಮನ ಸೆಳೆಯಲು ಸತತವಾಗಿ ಪ್ರಯತ್ನಿಸುತ್ತಾ ಬಂದಿದೆ.

1967 ರಲ್ಲಿ ಕೇಂದ್ರ ಸರ್ಕಾರಿ ನೌಕರರು ಒಂದು ದಿನದ ಮುಷ್ಕರದ ನೋಟೀಸು ನೀಡಿದಾಗ ಆಗಿನ ಕೇಂದ್ರ ಸರ್ಕಾರ 'ಗಡುಸು ನೀತಿ' ಅನುಸರಿಸಲು ನಿರ್ಧರಿಸಿ ಮುಷ್ಕರಕ್ಕೆ "ಕುಮ್ಮಕ್ಕು" ನೀಡುವವರನ್ನು ವಿಚಾರಣೆಯಿಲ್ಲದೆ ಬಂಧನದಲ್ಲಿಡಬೇಕೆಂದು ಆದೇಶ ನೀಡಿತು. ಇ.ಎಂ.ಎಸ್. ನೇತೃತ್ವದ ಕೇರಳ ರಾಜ್ಯ ಸರಕಾರಕ್ಕೆ ಇದು ಸರಿ ಕಾಣಲಿಲ್ಲ. ಅಲ್ಲದೆ ಮುಷ್ಕರದ ಸಮಯದಲ್ಲಿ ಕಾನೂನು ವ್ಯವಸ್ಥೆ ಪಾಲಿಸುವ ವಿಶ್ವಾಸ ಇ.ಎಂ.ಎಸ್. ಸರಕಾರಕ್ಕಿತ್ತು. ಆದ್ದರಿಂದ ಅದು ಕೇಂದ್ರ ಸರಕಾರ ನೀಡಿದ ಕೇಂದ್ರ ಮೀಸಲು ಪಡೆಯನ್ನು ಮುಷ್ಕರದ ವಿರುದ್ಧ ಬಳಸಲು ನಿರಾಕರಿಸಿತು. ಕುಪಿತರಾದ ಕೇಂದ್ರ ಗೃಹ ಮಂತ್ರಿ ವೈ. ಬಿ. ಚವ್ಹಾಣ್ ಇದನ್ನು ಕೇಂದ್ರದ ನಿರ್ದೇಶನದ ಉಲ್ಲಂಘನೆಯೆಂದು ಬಗೆದು ತೀವ್ರ ಸಂವೈಧಾನಿಕ ಕ್ರಮ ಕೈಗೊಳ್ಳುವುದಾಗಿ ಹೇಳಿದರು. ಇ.ಎಂ.ಎಸ್. ಸರಕಾರ ಜಗ್ಗಲಿಲ್ಲ. ಕೇರಳ ರಾಜ್ಯ ಸರಕಾರ ಮತ್ತು ಕೇಂದ್ರ ಸರಕಾರದ ನಡುವೆ ಉಂಟಾಗಿರುವ ಈ ವಿವಾದದ ಪರಿಹಾರಕ್ಕಾಗಿ ಸಂವಿಧಾನ ವಿಧಿಸಿರುವ ಅಂತರ ರಾಜ್ಯ ಮಂಡಳಿ ರಚಿಸಿ ಎಂದು ಇ.ಎಂ.ಎಸ್. ಒತ್ತಾಯಿಸಿದರು. ಕೇಂದ್ರ ಸರ್ಕಾರ ಮೌನವಾಯಿತು. ಅತ್ತ ತನ್ನ ನಿರ್ದೇಶನದ ಉಲ್ಲಂಘನೆಗೆ ಶಿಕ್ಷೆನೀಡುವ ಬಗ್ಗೆಯೂ ನಂತರ ಮಾತನಾಡಲಿಲ್ಲ.

ಪರ್ಯಾಯ ಯೋಜನಾ ಮಾರ್ಗದ ಬಗ್ಗೆಯೂ ಕೇರಳ, ಪಶ್ಚಿಮ ಬಂಗಾಳದ ಸಿ.ಪಿ.ಐ(ಎಂ) ನೇತೃತ್ವದ ಸರಕಾರಗಳು ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯಲ್ಲಿ ಚರ್ಚೆ ಎತ್ತುತ್ತಾ ಬಂದವು.

ಸಿ.ಪಿ.ಐ.(ಎಂ) ನ ಅವ್ಯಾಹತ ಹೋರಾಟದ ಪರಿಣಾಮವಾಗಿ ಕ್ರಮೇಣ ಇದು ಇಡೀ ದೇಶದ ಪ್ರಜಾಪ್ರಭುತ್ವ ಶಕ್ತಿಗಳ ಬೇಡಿಕೆಯಾಗಿ ರೂಪಗೊಂಡಿತು. 1983 ರ ಅಕ್ಟೋಬರ್ 3 ರಿಂದ 5 ರವರೆಗೆ ಶ್ರೀನಗರದಲ್ಲಿ ನಡೆದ ವಿರೋಧ ಪಕ್ಷಗಳ ಸಭೆ ಕೇಂದ್ರ-ರಾಜ್ಯ ಸಂಬಂಧಗಳನ್ನು ವಿವರವಾಗಿ ಪರಿಶೀಲಿಸಿ ಒಂದು ಸರ್ವಸಮ್ಮತ ಹೇಳಿಕೆಯನ್ನು ಅಂಗೀಕರಿಸಿತು.

ಈ ಹೇಳಿಕೆಯ 10(e) ಪರಿಚ್ಛೇದ ಹೀಗೆ ತನ್ನ ಅಭಿಪ್ರಾಯ ವ್ಯಕ್ತಪಡಿಸಿತು "263ನೇಕಲಮಿನ ಪ್ರಕಾರ ರಾಷ್ಟ್ರಪತಿಗಳು ಒಂದು ಅಂತರ ರಾಜ್ಯಮಂಡಳಿ ಸ್ಥಾಪಿಸಬಹುದು. ಪ್ರಧಾನ ಮಂತ್ರಿ ಮತ್ತು ರಾಜ್ಯದ ಮುಖ್ಯ ಮಂತ್ರಿಗಳುಳ್ಳ ಅಂತರ ರಾಜ್ಯ ಮಂಡಳಿಯ ರಚನೆ ಕಡ್ಡಾಯವಾಗಬೇಕು. ಈ ಮಂಡಳಿ ರಾಜ್ಯಗಳ ಕೇಂದ್ರದ ನಡುವಿನ ವಿವಾದಗಳ ಬಗ್ಗೆ, ಮತ್ತು ಬೇರಾವುದೇ ರಾಷ್ಟ್ರೀಯಮಹತ್ವದ ಪ್ರಶ್ನೆಯ ಬಗ್ಗೆ ಚರ್ಚಿಸುವುದು".

ರಾಜೀವ್ ಸರ್ಕಾರದ ಜನ-ವಿರೋಧಿ, ಪ್ರಜಾಪ್ರಭುತ್ವ-ವಿರೋಧಿ ಮತ್ತು ಸರ್ವಾಧಿಕಾರಿ ಪ್ರವೃತ್ತಿಯ ನೀತಿಗಳ ವಿರುದ್ಧ ಸಾಮೂಹಿಕ ಆಂದೋಲನದ ಫಲವಾಗಿ ರಚನೆ ಗೊಂಡ ರಾಷ್ಟ್ರೀಯ ರಂಗ ಸರ್ಕಾರ ಸರ್ವಾಧಿಕಾರಿ ಆಡಳಿತದ ಹಂದರವನ್ನು ಕಳಚುವ ಅಂಗವಾಗಿ 59 ನೇ ತಿದ್ದುಪಡಿಯನ್ನು ರದ್ದುಪಡಿಸುವುದರ ಜೊತೆಗೇ ಅಂತರ ರಾಜ್ಯ ಮಂಡಳಿ ರಚಿಸಲು, ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯನ್ನು ಪುನರ್ರಚಿಸಲು ನಿರ್ಧರಿಸಿತು. ಇದು ಅತ್ಯಂತ ಸ್ವಾಗತಾರ್ಹ ಆರಂಭ. ಈ ಮಂಡಳಿಯ ಮೊದಲ ಸಭೆ ಬೆಂಗಳೂರಿನಲ್ಲಿ, ಅಂದರೆ ಕೇಂದ್ರದಲ್ಲಿ ಆಳುವ ಪಕ್ಷವನ್ನು ವಿರೋಧಿಸುವ ಪಕ್ಷ ಆಡಳಿತ ನಡೆಸುವ ಒಂದು ರಾಜ್ಯದಲ್ಲಿ, ನಡೆಯುತ್ತಿರುವುದು ಇನ್ನೂ ಗಮನಾರ್ಹ. ಆದರೆ ಮೊದಲೇ ಹೇಳಿದಂತೆ ಇದು ಕೇವಲ ಆರಂಭವಷ್ಟೆ. ಕೇಂದ್ರ ರಾಜ್ಯ ಸಂಬಂಧಗಳ ಕುರಿತು ವಿವರವಾದ ಚರ್ಚೆ ನಡೆಸಿ ಕಾಂಗ್ರೆಯೇತರ ಪ್ರಜಾಪ್ರಭುತ್ವ ಶಕ್ತಿಗಳ ರಾಷ್ಟ್ರೀಯ ಅಭಿಪ್ರಾಯವನ್ನು (ಬಿ.ಜೆ.ಪಿ. ಈ ರಾಷ್ಟ್ರೀಯ ಅಭಿಪ್ರಾಯದಲ್ಲಿ ಪಾಲುದಾರವಾಗಲಿಲ್ಲ ಎಂಬುದನ್ನು ಗಮನಿಸಬೇಕು) ರೂಪಿಸಿದ ಶ್ರೀನಗರ ಹೇಳಿಕೆ ಸಂವಿಧಾನವನ್ನು ನಿಜವಾದ ಅರ್ಥದಲ್ಲಿ ಫೆಡರಲ್ ಆಗಿಸುವ ಒತ್ತಾಯಗಳನ್ನು ದೇಶದ ಮುಂದಿಟ್ಟಿತ್ತು. ಕೇಂದ್ರ ರಾಜ್ಯಗಳ ಸಂಬಂಧಗಳ ಪುನರ್ರಚನೆಯಾಗಬೇಕಾದರೆ ಅವುಗಳತ್ತವೂ ರಾಷ್ಟ್ರೀಯ ರಂಗ ಸರ್ಕಾರ ಗಮನ ಹರಿಸಬೇಕು.

ಇನ್ನೊಂದು ಗಮನಿಸಬೇಕಾದ ವಿಷಯ. ಕೇಂದ್ರ ರಾಜ್ಯಗಳ ಸಂಬಂಧದ ಈ ಪ್ರಶ್ನೆ ಪರಿಹಾರವಾದರೆ ಭಾರತೀಯ ಜನತೆಯ ಸಮಸ್ಯೆಗಳೆಲ್ಲಾ ಪರಿಹಾರ ಕಾಣುತ್ತವೆ ಎಂದು ಭಾವಿಸುವುದು ತಪ್ಪು. ಏಕೆಂದರೆ ಭಾರತೀಯ ಜನತೆಯ ಸಮಸ್ಯೆಗಳು ನಮ್ಮ ಸಮಾಜದ ಮೂಲಭೂತ ರಚನೆಯ ಬದಲಾವಣೆಯೊಂದಿಗೆ ಬೆಸೆದು ಕೊಂಡಿರುವ ಪ್ರಶ್ನೆಗಳು. ಆದರೆ ರಾಜ್ಯಗಳನ್ನು ಸ್ವಾಯತ್ತ ಅಧಿಕಾರಗಳಿಂದ ಸಜ್ಜುಗೊಳಿಸಿದರೆ ಕೇಂದ್ರದ ಮತ್ತು ಕೇಂದ್ರದ ಆಳುವ ಪಕ್ಷದ ಸರ್ವಾಧಿಕಾರಿ ಹಿಡಿತವನ್ನು ಸಡಿಲಗೊಳಿಸಿದರೆ ರಾಜ್ಯ ಮತ್ತು ಕೇಂದ್ರ ಸರಕಾರಗಳ ಮೇಲೆ ಪಟ್ಟಭದ್ರ ಹಿತಾಸಕ್ತಿಗಳ ಹಿಡಿತದ ವಿರುದ್ಧ ಹೋರಾಡಲು ಜನತೆಗೆ ನೆರವಾಗದಂತಾಗುತ್ತದೆ. ಈ ದೃಷ್ಟಿಯಲ್ಲಿ ಮಹತ್ವದ ಪ್ರಜಾಸತ್ತಾತ್ಮಕ ಹೆಜ್ಜೆ ಇದು.

...ಸನ ಬದ್ಧವೂ ಅಲ್ಲ......

...ಶೀಲನೆಗೆ ಅದು ಕೈಗೊಂಡ ಕ್ರಮ ...ಂತ ಅಸಮರ್ಪಕ, ಯೋಜನಾ ದೃಷ್ಟಿ...ಣದ ವಿವಿಧ ಅಂಶಗಳನ್ನು, ...ರ್ಯಾಯ ಸಲಹೆಗಳನ್ನು ...ಡಳಿಯ ಮುಂದೆ ಇಡಲಾಗುತ್ತಿಲ್ಲ, ...ಳನ ನಡೆಸುವ ರೀತಿಯೂ ಅತ್ಯಂತ ...ರ್ಪಕ. ಸಮ್ಮೇಳನದ ಅವಧಿ ಅತ್ಯಂತ ...ಮೆ, ಅಜೆಂಡಾ ತಿಳಿಸುವಲ್ಲಿ ವಿಳಂಬ, ...ಜನಾ ನೀತಿಗಳ, ಧೋರಣೆಗಳ ...ಯಾಗುವ ಬದಲು ವೈಯಕ್ತಿಕ ...ದರೆಗಳ ಅಹವಾಲು ನೀಡುವ ...ಕೆಗಳಾಗಿ ಬಿಟ್ಟಿದೆ ಅದರ ಸಭೆಗಳು- - ...ದು 1967ರಲ್ಲೇ ಒಂದು ಅಧ್ಯಯನ ...ತ ಗಮನಿಸಿದ ಅಂಶಗಳು ...ರಿಯಾ ಆಯೋಗವೂ ಈ ಅಂಶ ...ನ್ನು ಸ್ವೀಕರಿಸಿರುವುದು ಈ ಮಂಡಳಿ ... ನಿಷ್ಕ್ರಿಯತೆಯ ಜೊತೆಗೆ ಕಾಂಗ್ರೆ...ಸ್ಸ್ ಮಂತ್ರಿಗಳ ಮಟ್ಟದ ಬಗ್ಗೆ ...ಗೆ ಪಕ್ಷದಲ್ಲಿದ್ದ ಪ್ರಜಾಪ್ರಭುತ್ವ(?)ದ ... ಕೀರ್ತೀ ಸರಿ. ಇದು ಮಹತ್ವದ ...ಜನಾ ರಂಗದಲ್ಲಿ ಅತ್ಯುನ್ನತ ವೇದಿಕೆ...ಸಿಕೊಂಡಿರುವ ಒಂದು ಸಂಸ್ಥೆಯ ... ಇದು ಬದಲಾಗಲೇಬೇಕು ಎಂದು ...ಐ.(ಎಂ) ಒತ್ತಾಯಿಸುತ್ತಾ ಬಂದಿದೆ.

...ಯೋಜನಾ ರಂಗದ ಈ ಮಹತ್ವದ ...ಗಳ ಇಂತಹ ಸ್ಥಿತಿಯಿಂದಾಗಿಯೇ ...ದ ಯೋಜನೆಗಳ ಮೇಲೆ, ಆರ್ಥಿಕ ...ತೆಗೆಯ ಮೇಲೆ ಹಿರಿ ಬಂಡವಾಳ...ಗಳ ದುಷ್ಪ್ರಭಾವ ಬೀರುವುದು ...ಭವಾಗಿ ಬಿಟ್ಟಿದೆ.ಶ್ರೀನಗರ ಸಮ್ಮೇಳನ ... ಆರ್ಥಿಕ, ಹಣಕಾಸು ವಿಷಯಗಳ ... ಮುಖ್ಯಮಂತ್ರಿ ಜ್ಯೋತಿ ಬಸು ...ಡಿಸಿದ ಟಿಪ್ಪಣಿ ಸಿ.ಪಿ.ಐ.(ಎಂ) ...ಯನ್ನು ಹೀಗೆ ಮಂಡಿಸಿತ್ತು.

"ಯೋಜನಾ ಆಯೋಗವನ್ನು ...ಯ ಅಭಿವೃದ್ಧಿ ಮಂಡಳಿಯ ... ಕಾಲದ ಸೆಕ್ರೆಟೇರಿಯಟ್ ಆಗಿ ...ಬೇಕು. ಇದರ ಖರ್ಚ ವೆಚ್ಚ

> ಯೋಜನಾ ಆಯೋಗ ಮತ್ತು ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಕೇಂದ್ರ ಸರ್ಕಾರದ ಬಾಲಂಗೋಚಿ ಗಳೇ ಆಗಿ ಬಿಟ್ಟಿವೆ. ಇದುವರೆಗೆ ಯೋಜನಾ ಆಯೋಗ ಸ್ವಂತ ತಲೆಯೇ ಇಲ್ಲದ ಸಂಸ್ಥೆ. ರಾಷ್ಟ್ರೀಯ ಅಭಿವೃದ್ಧಿ ಮಂಡಳಿ ಕೆಲಸವೇ ಮಾಡದ ವೇದಿಕೆ.

ವನ್ನೂ ಕೇಂದ್ರ ಮತ್ತು ರಾಜ್ಯ ಸರಕಾರಗಳು ಒಟ್ಟಾಗಿ ಭರಿಸಬೇಕು. ಅದರ ಸದಸ್ಯರುಗಳು ಯಾರಿರಬೇಕೆಂಬುದನ್ನೂ ರಾಜ್ಯ ಸರಕಾರಗಳೊಂದಿಗೆ ಸಮಾಲೋಚಿಸಿ ನಿರ್ಧರಿಸಬೇಕು. ಇದನ್ನು ಕೇಂದ್ರ ಸರ್ಕಾರದಿಂದ ಪ್ರತ್ಯೇಕಿಸಬೇಕು. ತಾನೇ ಸಾಮಾಜಿಕ, ಆರ್ಥಿಕ ಅಭಿವೃದ್ಧಿಯ ಪ್ರಶ್ನೆಗಳ ಬಗ್ಗೆ ಚರ್ಚಿಸಿ, ವಿಶ್ಲೇಷಿಸುವ ಅಭಿವೃದ್ಧಿ ಮಂಡಳಿಗೆ ಶಿಫಾರಸು ನೀಡುವ ಅಧಿಕಾರವನ್ನು ಅದಕ್ಕೆ ನೀಡಬೇಕು. ರಾಜ್ಯಗಳಿಗೆ ಕೇಂದ್ರದ ಯೋಜನಾ ನೆರವಿನ ನೀತಿಗಳನ್ನು ನಿರ್ಣಯಿಸುವಾಗ ದೇಶದ ಆರ್ಥಿಕ ಬೆಳವಣಿಗೆಯ ಸದ್ಯದ ಅಸಮತೋಲನವನ್ನು, ವಿವಿಧ ರಾಜ್ಯಗಳಲ್ಲಿ ಬಡತನದ ಮಟ್ಟವನ್ನು ನಿರುದ್ಯೋಗದ ಸ್ಥಿತಿಯನ್ನು, ರಾಜ್ಯದ ಜನಸಂಖ್ಯೆಯಲ್ಲಿ ಹರಿಜನ--ಗಿರಿಜನರ ಪ್ರಮಾಣವನ್ನು ನೀರಾವರಿ, ವಿದ್ಯುತ್ ಉತ್ಪಾದನೆ ಕೈಗಾರೀಕರಣ ಮತ್ತಿತರ ಅಂಶಗಳನ್ನು ಗಮನದಲ್ಲಿರಿಸಿಕೊಳ್ಳಬೇಕು. ಆಗಾಗ ಕೇಂದ್ರ ಸರ್ಕಾರ ಮತ್ತು ಸಾರ್ವಜನಿಕ ಹಣಕಾಸು ಸಂಸ್ಥೆಗಳ ಬಂಡವಾಳ ವಿನಿಯೋಗದ ಅಂತರ್-ರಾಜ್ಯ, ಅಂತರ್ ಪ್ರದೇಶ ವಿಧಾನಗಳನ್ನು ವಿಮರ್ಶಿಸುತ್ತಿರಬೇಕು. ವಿವಿಧ ಪ್ರದೇಶಗಳ ನಡುವಿನ ಸಮತೋಲನ ಕೆಟ್ಟಿದ್ದರೆ ಅದನ್ನು ಸರಿಪಡಿಸಲು ನಿರ್ದೇಶನಗಳನ್ನು ರೂಪಿಸಬೇಕು. ಹಿಂದುಳಿದ ರಾಜ್ಯಗಳ ಹಿತಾಸಕ್ತಿಗಳಿಗೆ, ಜಮ್ಮು-ಕಾಶ್ಮೀರ, ಮೇಘಾಲಯದಂತಹ ರಾಜ್ಯಗಳ ವಿಶೇಷ ಸಮಸ್ಯೆಗಳಿಗೆ ವಿಶೇಷ ಗಮನ ನೀಡಬೇಕು."

ದೆಹಲಿಯಿಂದ ಕೇವಲ ನೂರು ಮೈಲಿಗಳ ದೂರದಲ್ಲಿ ಒಂದು ನೀಚ ಕೃತ್ಯ

ಉತ್ತರಪ್ರದೇಶದ ಮೇರಠ್ ಜಿಲ್ಲೆಯ ಗಜರೌಲಾದಲ್ಲಿ, ಸೈಂಟ್ ಮೇರೀಸ್ ಕಾನ್ವೆಂಟ್‌ನ ಇಬ್ಬರು ಸನ್ಯಾಸಿನಿಯರ ಮೇಲೆ ಅತ್ಯಾಚಾರ ನಡೆದ ಹೀನ ಕೃತ್ಯವನ್ನು ಅಖಿಲ ಭಾರತ ಪ್ರಜಾಸತ್ತಾತ್ಮಕ ಮಹಿಳಾ ಸಂಘ (ಎ.ಐ.ಡಿ.ಡಬ್ಲ್ಯು.ಎ.) ಜುಲೈ 23 ರಂದು ನೀಡಿದ ಒಂದು ಹೇಳಿಕೆಯಲ್ಲಿ ಬಲವಾಗಿ ಖಂಡಿಸಿದೆ. ಹತ್ತು ದಿನಗಳವರೆಗೂ ಪೋಲೀಸರು ಅಪರಾಧಿಗಳನ್ನು ಹಿಡಿಯುವಲ್ಲಿ ವಿಫಲರಾಗಿರುವುದು, ಉತ್ತರ ಪ್ರದೇಶ ಸರ್ಕಾರ ಒಬ್ಬ ಮಂತ್ರಿಯನ್ನು ಅಥವಾ ಕನಿಷ್ಠ ಒಬ್ಬ ಹಿರಿಯ ಅಧಿಕಾರಿಯನ್ನು ಅಲ್ಲಿಗೆ ಕಳುಹಿಸದಿರುವುದು ಅತ್ಯಂತ ದುರದೃಷ್ಟದ ಸಂಗತಿ ಎಂದು ಖಂಡಿಸಿದೆ. ದೂರದ ಕೇರಳದಿಂದ ಬಂದ ಈ ಸನ್ಯಾಸಿನಿಯರಿಗೆ ಸ್ಥಳೀಯ ಜನರ ಬೆಂಬಲವಿದ್ದರೂ, ಅವರು ಕೆಲವು ಸೌಹಾರ್ದತಾ ಕಾರ್ಯಚರಣೆ ನಡೆಸಿದ್ದರೂ ಇನ್ನೂ ಭಯದ ಸ್ಥಿತಿಯಲ್ಲಿರುವುದರಿಂದ ಇದರ ಆಘಾತ ಇನ್ನೂ ಹೆಚ್ಚಾಗಿತ್ತು ಎಂದು ಎ.ಐ.ಡಿ.ಡಬ್ಲ್ಯು.ಎ. ಹೇಳಿದೆ.

ಜುಲೈ 22 ರಂದು ಎ.ಐ.ಡಿ.ಡಬ್ಲ್ಯು.ಎ.ಯ ನಿಯೋಗವೊಂದು ಗಜರೌಲಾದ ಈ ಕಾನ್ವೆಂಟಿಗೆ ಭೇಟಿ ನೀಡಿ ಅಲ್ಲಿಯ ಮುಖ್ಯಸ್ಥರು ಹಾಗೂ ಸನ್ಯಾಸಿನಿಯರೊಂದಿಗೆ ಮಾತನಾಡಿದರು. 9 ವರ್ಷಗಳ ಹಿಂದೆ ಆರಂಭವಾದ ಈ ಕಾನ್ವೆಂಟಿನಲ್ಲಿ 600 ಮಕ್ಕಳು ಕಲಿಯುತ್ತಿದ್ದಾರೆ. ರಾತ್ರಿಯ ವೇಳೆಗೆ 9ಸನ್ಯಾಸಿನಿಯರು ಮತ್ತೊಬ್ಬ ಕೆಲಸದಾಕೆ ಅಲ್ಲಿ ಇರುತ್ತಿದ್ದರು.

ಜುಲೈ 12-13 ರ ರಾತ್ರಿ ಶಾಲೆಯ ಹಿಂದಿನ ಕಿಟಕಿಗಳನ್ನು ಮುರಿದು ಮೂವರು ಸಮಾಜ ಘಾತುಕ ವ್ಯಕ್ತಿಗಳು ಒಳನುಗ್ಗಿ ಪ್ರತಿಯೊಬ್ಬ ಸನ್ಯಾಸಿನಿಯನ್ನು ಎಳೆದೊಯ್ದು ಅವರವರ ಕಪಾಟುಗಳನ್ನು ತೆರೆಸಿದರು. ಇಬ್ಬರ ಮೇಲೆ ಅತ್ಯಾಚಾರ ನಡೆಸಿದರು. ಒಂದು ಲಕ್ಷಕ್ಕೂ ಹೆಚ್ಚು ಹಣ ಮತ್ತು ಇತರ ಬೆಲೆ ಬಾಳುವ ವಸ್ತುಗಳೊಂದಿಗೆ ಪರಾರಿಯಾದರು. ಈ ಅನಿರೀಕ್ಷಿತ ಆಘಾತ ಹೆಚ್ಚಿಸಿದ ಭಯದಿಂದಾಗಿ ಅದೇ ರಾತ್ರಿ ಅವರು ಪೋಲೀಸರಿಗೆ ದೂರು ನೀಡಲಾಗಲಿಲ್ಲ.

ಎ.ಐ.ಡಿ.ಡಬ್ಲ್ಯು.ಎ. ಜಂಟಿ ಕಾರ್ಯದರ್ಶಿ ಬೃಂದಾ ಕಾರಟ್ ಮತ್ತು ಸಿ.ಪಿ.ಐ.(ಎಂ) ಎಂ.ಪಿ.ಗಳಾದ ಎಂ.ಎ. ಬೇಬಿ ಮತ್ತು ವಿಜಯ ರಾಘವನ್ ಇದ್ದ ಈ ನಿಯೋಗ ನಂತರ ಪೋಲೀಸ್ ಅಧಿಕಾರಿಗಳನ್ನು ಭೇಟಿ ಮಾಡಿತು. ಘಟನೆ ನಡೆದು ಹತ್ತು ದಿನಗಳಾದರೂ ಪೋಲೀಸರು ವೈದ್ಯಕೀಯ ವರದಿ ಪಡೆಯುವ ಗೋಜಿಗೇ ಹೋಗಿರಲಿಲ್ಲ. ಕೇಳಿದಾಗ ತಾನು ಬಹಳ ವ್ಯಸ್ತನಾಗಿದ್ದೆ ಎಂದ ಪೋಲೀಸ್ ಅಧಿಕಾರಿ ಸುಭಾಷ್ ಕಜಾಲಾ. ಪೋಲೀಸ್ ರಕ್ಷಣೆ ಕೊಡಲಾಗಿದೆಯೆಂದರೂ ಪೋಲೀಸರು ಯಾರೂ ಕಾನ್ವೆಂಟ್‌ನ ಸುತ್ತ ಕಂಡು ಬರಲಿಲ್ಲ.

ಜುಲೈ 24 ರಂದು ಈ ಕಾನ್ವೆಂಟಿನ ನಾಲ್ವರು ಸನ್ಯಾಸಿನಿಯರ ನಿಯೋಗವೊಂದು ಕೇಂದ್ರ ಗೃಹಮಂತ್ರಿಗಳನ್ನು ಭೇಟಿ ಮಾಡಿತು. ಅವರ ಜತೆಗೆ ಸುಶೀಲಾ ಗೋಪಾಲನ್, ಬೃಂದಾ ಕಾರಟ್ ಹಾಗೂ ಎಂ.ಪಿ.ಗಳಾದ ಬೇಬಿ ಹಾಗೂ ವಿಜಯ ರಾಘವನ್ ಕೂಡಾ ಇದ್ದರು. ಗೃಹ ಮಂತ್ರಿಗಳು ಉತ್ತರ ಪ್ರದೇಶದ ಮುಖ್ಯ ಮಂತ್ರಿಗಳನ್ನುಸಂಪರ್ಕಿಸುವುದಾಗಿ ಹಾಗೂ ಈ ನೀಚ ಕೃತ್ಯ ನಡೆಸಿದವರನ್ನು ಬಂಧಿಸುವ ಆಶ್ವಾಸನೆ ನೀಡಿದರು. ಉತ್ತರಪ್ರದೇಶ ಮುಖ್ಯ ಮಂತ್ರಿಗಳಿಗೂ ಕಳುಹಿಸಿದ ಮನವಿಯೊಂದರಲ್ಲಿ ಎ.ಐ.ಡಿ.ಡಬ್ಲ್ಯು.ಎ. "ಗಜರೌಲಾ ಪೋಲೀಸರು ಇಬ್ಬರನ್ನು ಬಂಧಿಸಿದ್ದೇವೆಂದು ಹೇಳಿದ್ದರೂ ಇನ್ನೂ ಅವರನ್ನು ಗುರುತಿಸಲು ಇಬ್ಬರು ಸಿಸ್ಟರ್‌ಗಳನ್ನು ಕೇಳಿಲ್ಲ" ಎಂಬ ಸಂಗತಿಯತ್ತ ಗಮನ ಸೆಳೆಯುತ್ತಾ ಅಪರಾಧಿಗಳನ್ನು ರಕ್ಷಿಸಲು ಪ್ರಯತ್ನಿಸದೆ ಅವರನ್ನು ಶಿಕ್ಷಿಸಬೇಕೆಂದು ಒತ್ತಾಯಿಸಿದೆ.

ಗಜರೌಲಾಕ್ಕೆ ಇನ್ನೊಮ್ಮೆ ಭೇಟಿ ನೀಡಿದ ಎ.ಐ.ಡಿ.ಡಬ್ಲ್ಯು.ಎ. ನಿಯೋಗ ವೈದ್ಯಕೀಯ ವರದಿ ನೀಡುವಲ್ಲಿ ಕನಿಷ್ಠ ಆಗತ್ಯಗಳನ್ನೂ ಪೂರೈಸಲಾಗಿಲ್ಲ ಎಂದು ಆಪಾದಿಸಿ ಇಬ್ಬರು ಸಿಸ್ಟರುಗಳ ಪರೀಕ್ಷೆ ನಡೆಸಿದ ಮಹಿಳಾ ವೈದ್ಯೆಯನ್ನು ಕೂಡಲೇ ಅಮಾನತುಗೊಳಿಸಬೇಕಾಗಿ ಒತ್ತಾಯಿಸಿದೆ.

ಎ.ಐ.ಡಿ.ಡಬ್ಲ್ಯು.ಎ. ನ ಪ್ರಯತ್ನಗಳಿಂದಾಗಿ ಪ್ರಧಾನ ಮಂತ್ರಿಗಳು ಇದರಲ್ಲಿ ಮಧ್ಯಪ್ರವೇಶಿಸಿ ಉತ್ತರ ಪ್ರದೇಶ ಸರ್ಕಾರಕ್ಕೆ ಆದೇಶ ನೀಡಿದ್ದಾರೆ.

ಪಶ್ಚಿಮ ಬಂಗಾಳ : ಹೊಸ ಉದ್ಯೋಗಾವಕಾಶ ನಿರ್ಮಾಣಕ್ಕೆ ಗಂಭೀರ ಯತ್ನ

ಸಾಮಾನ್ಯ ಆರ್ಥಿಕ ಚಟುವಟಿಕೆಗಳೊಂದಿಗೇ ಹೆಚ್ಚಿನ ಉದ್ಯೋಗಾವಕಾಶ ನಿರ್ಮಾಣ ಈಗ ಕೇವಲ ಕಲ್ಪನೆಯಲ್ಲ- ಪಶ್ಚಿಮ ಬಂಗಾಳದಲ್ಲಿ ಅದೀಗ ಒಂದು ಸತ್ಯ ಸಂಗತಿ. ಇಡೀ ದೇಶಕ್ಕೆ ಉದಾಹರಣೆಯಾಗಬಲ್ಲ ವಾಸ್ತವಿಕತೆ.

ಪಶ್ಚಿಮಬಂಗಾಳದ ಎಡರಂಗ ಸರಕಾರ ತನ್ನ ಮೊದಲ ದಿನದಿಂದಲೇ ಈ ದಿಕ್ಕಿನತ್ತ ಪ್ರಯತ್ನ ಆರಂಭಿಸಿತ್ತು. ಈಗ ರಾಷ್ಟ್ರೀಯ ಮಟ್ಟದಲ್ಲೂ ಎಂಟನೇ ಯೋಜನೆಯ ದೃಷ್ಟಿಕೋನ ಪತ್ರ ಹಾಗೂ ರಾಷ್ಟ್ರೀಯರಂಗ ಸರಕಾರ ಕೂಡಾ ಈಬಗ್ಗೆ ಗಂಭೀರ ಯೋಚನೆಮಾಡುತ್ತಿರುವುದರಿಂದ ಎಡರಂಗದ ಉದ್ಯೋಗಾವಕಾಶ ಹೆಚ್ಚಿಸುವ ಯೋಜನೆ ಬಹಳ ಫಲಪ್ರದವಾಗಲಿದೆಯೆಂದು ಪಶ್ಚಿಮ ಬಂಗಾಳದ ಸರಕಾರದ ನಿರೀಕ್ಷೆ.

ಕಲ್ಕತ್ತೆಯಲ್ಲಿ ಒಂದು ಪತ್ರಿಕಾ ಸಮ್ಮೇಳನದಲ್ಲಿ ಮಾತನಾಡುತ್ತಾ ರಾಜ್ಯದ ಹಣಕಾಸು ಮಂತ್ರಿ ಡಾ. ಅಶೀಮ್ ದಾಸ್ ಗುಪ್ತಾ 1989-90 ರಲ್ಲಿ 3 ಲಕ್ಷ 80 ಸಾವಿರ ಉದ್ಯೋಗಾವಕಾಶ ನಿರ್ಮಿಸುವುದು ಸಾಧ್ಯವಾಯಿತು ಎಂದರು. ಈ ವರ್ಷ ಅಕ್ಟೋಬರ್‌ನೊಳಗೆ ಸುಮಾರು 5 ಲಕ್ಷ ಹೊಸ ಉದ್ಯೋಗಾವಕಾಶ ನಿರ್ಮಿಸುವ ಯೋಜನೆ ರೂಪಿಸಲಾಗಿದೆ ಎಂದೂ ಅವರು ಹೇಳಿದರು.

ವಿಭಿನ್ನ ಸ್ವಯಂ ಉದ್ಯೋಗ ಕಾರ್ಯಕ್ರಮಗಳ ಮೂಲಕ ದೊಡ್ಡ ಪ್ರಮಾಣದಲ್ಲಿ ಹೊಸ ಉದ್ಯೋಗಾವಕಾಶ ಸೃಷ್ಟಿಸಲಾಗುವುದು. ರಾಜ್ಯದ ಪ್ರತಿಯೊಂದು ಹಳ್ಳಿಗೆ ಇಂತಹ ಕಾರ್ಯಕ್ರಮಗಳನ್ನು ಹಂಚಲಾಗುವುದು. ಈ ಕಾರ್ಯಗಳ ಉಸ್ತುವಾರಿಯ ಜವಾಬ್ದಾರಿಯನ್ನು ಪಂಚಾಯತು ಸಮಿತಿಗಳ ಸಭಾಪತಿಗಳಿಗೆ, ನಗರ ಸಭೆಗಳ ಮೇಯರುಗಳಿಗೆ ಒಪ್ಪಿಸಲಾಗುವುದು. ಜಿಲ್ಲಾ, ರಾಜ್ಯಮಟ್ಟದಲ್ಲೂ ಇಂತಹ ಉಸ್ತುವಾರಿ ಸಮಿತಿಗಳನ್ನು ರಚಿಸಲಾಗುವುದು ಎಂದು ಡಾ.ದಾಸ್ ಗುಪ್ತಾ ತಿಳಿಸಿದರು.

ಈ ವ್ಯಾಪಕ ಕಾರ್ಯಕ್ರಮಕ್ಕೆ ಹಣ ಸಂಗ್ರಹಿಸಲು ಬ್ಯಾಂಕರುಗಳ ರಾಜ್ಯಮಟ್ಟದ ಸಮಿತಿಯ ಸಭೆಯಲ್ಲಿ ಒಂದು ಸಣ್ಣ ಉಸ್ತುವಾರಿ ಸಮಿತಿ ರಚಿಸಲಾಗಿದೆ. ರಾಜ್ಯ ಸರ್ಕಾರದ ಅಧಿಕಾರಿಗಳು ಮತ್ತು ಬ್ಯಾಂಕ್ ಅಧಿಕಾರಿಗಳು ಒಟ್ಟು ಸೇರಿ ಇದರಲ್ಲಿ ದುಡಿಯುತ್ತಾರೆ. ಮೂರು ತಿಂಗಳೊಳಗೆ ಯೋಜನೆಗಳು ಆರಂಭವಾಗುತ್ತವೆ.

ಈ ಯೋಜನೆಗಳಿಗೆ 750 ಕೋಟಿ ರೂ.ಗಳ ನೆರವು ಸಾಕು.ಅಂದರೆ ಬ್ಯಾಂಕಿಂಗ್ ವ್ಯವಸ್ಥೆ ಕಳೆದ ವರ್ಷ ನೀಡಿದ ಸಾಲದಲ್ಲಿ 30% ಹೆಚ್ಚುವರಿ ಸಾಕಾಗುತ್ತದೆ. ರಾಜ್ಯದ ಪ್ರಸ್ತುತ ಪರಿಸ್ಥಿತಿಯಲ್ಲಿ ಇದು ಅಸಂಭವ ಗುರಿಯೇನಲ್ಲ ಎಂದು ಪಶ್ಚಿಮ ಬಂಗಾಳದ ಹಣಕಾಸು ಮಂತ್ರಿ ಹೇಳಿದರು. ಆದ್ದರಿಂದಲೇ ಆರ್ಥಿಕ ಚಟುವಟಿಕೆಗಳೊಂದಿಗೇ ಉದ್ಯೋಗಾವಕಾಶ ನಿರ್ಮಾಣ ಈಗ ಅಲ್ಲಿ ಕೇವಲ ಕಾಲ್ಪನಿಕ ಸಂಗತಿಯಲ್ಲ. ವಾಸ್ತವಗೊಳ್ಳುತ್ತಿರುವ ಸಂಗತಿ.

ಮಹಾರಾಷ್ಟ್ರದಲ್ಲಿ ಎಡಪಕ್ಷಗಳ ಬೃಹತ್ ರ್‍ಯಾಲಿ

ಸ್ವಾತಂತ್ರ್ಯ ಪೂರ್ವದಲ್ಲಿ ಕಾರ್ಮಿಕ ವರ್ಗದ ಚಳವಳಿಯ ಪ್ರಮುಖ ಕೇಂದ್ರಗಳಲ್ಲಿ ಒಂದಾಗಿದ್ದ ಮಹಾರಾಷ್ಟ್ರದಲ್ಲಿ ಎಡ ಶಕ್ತಿಗಳು ಈಗ ಮತ್ತೆ ತಮ್ಮ ಶಕ್ತಿಯನ್ನು ಕ್ರೋಢೀಕರಿಸುತ್ತಿದೆ. ಅದರಲ್ಲೂ ಪ್ರಮುಖವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ, ರಾಜ್ಯದ ಜನತೆಯನ್ನು ಕಾಡುವ ಸಮಸ್ಯೆಗಳಿಗೆ ತಕ್ಷಣವೇ ಸ್ಪಂದಿಸಿ, ಸಂತ್ರಸ್ತ ಜನರನ್ನು ಹೋರಾಟ ಕಣಕ್ಕಿಳಿಸಲು ಚಳುವಳಿಯನ್ನು ರೂಪಿಸುತ್ತಿದೆ.

ರಾಜ್ಯದ ಮೂರು ಎಡ ಪಕ್ಷಗಳಾದ ಸಿ.ಪಿ.ಐ(ಎಂ), ಸಿ.ಪಿ.ಐ. ಮತ್ತು ರೈತ ಕಾರ್ಮಿಕರ ಪಕ್ಷ (ಪಿಡಬ್ಲ್ಯುಪಿ) ವಿಧಾನ ಸಭೆ ಅಧಿವೇಶನದ ಆರಂಭದ ದಿನದಂದು ರಾಜಧಾನಿ ಮುಂಬಯಿಯಲ್ಲಿ ಸಂಯುಕ್ತವಾಗಿ ಬೃಹತ್ ರ್‍ಯಾಲಿಯನ್ನು ಏರ್ಪಡಿಸಿದ್ದವು. ಜನರನ್ನು ಕಾಡುತ್ತಿರುವ ಸಮಸ್ಯೆಗಳಿಗಿದಿರಾಗಿ ಫೆಬ್ರುವರಿ ಚುನಾವಣೆಗಳ ನಂತರ ಎಡ ಪಕ್ಷಗಳ ಮೊದಲ ಶಕ್ತಿ ಪ್ರದರ್ಶನ ಇದಾಗಿತ್ತು.

ಕೆಲವೇ ದಿನಗಳ ಹಿಂದಷ್ಟೆ 104 ವರ್ಷಗಳಲ್ಲಿಯೇ ಭೀಕರವಾದ ಮಳೆ ರಾಜ್ಯವನ್ನಪ್ಪಳಿಸಿ ಅಪಾರ ನಷ್ಟವಾಗಿ ಮತ್ತು ರೈಲ್ವೆ ರಸ್ತೆ ಸಂಪರ್ಕ ಹಾಳಾಗಿದ್ದರೂ 40 ಸಾವಿರಕ್ಕೂ ಹೆಚ್ಚು ಜನರು ಚಳುವಳಿಯಲ್ಲಿ ಭಾಗವಹಿಸಿದ್ದರು. ಸಾರ್ವಜನಿಕರು ಮತ್ತು ಪತ್ರಿಕೆಗಳು ಕೂಡ ತುಂಬಾ ಆಸಕ್ತಿ ತಳೆದಿದ್ದವು. ದಿ.ಇಂಡಿಪೆಂಡೆಂಟ್ ಮತ್ತು 'ದಿ ಡೈಲಿ' ಪತ್ರಿಕೆಗಳು ಕಾರ್ಯಕ್ರಮದಲ್ಲಿ 50 ರಿಂದ 60 ಸಾವಿರ ಜನರು ಭಾಗವಹಿಸಿದ್ದರು ಎಂದು ಬರೆದವು.

ರಾಜ್ಯದ 30 ಜಿಲ್ಲೆಗಳ ಪೈಕಿ 26 ರಿಂದ ಸಿ.ಪಿ.ಐ(ಎಂ) ಕಾರ್ಯಕರ್ತರು ದೊಡ್ಡ ಸಂಖ್ಯೆಯಲ್ಲಿ ಆಗಮಿಸಿದ್ದರು. ಸಿ.ಐ.ಟಿ.ಯು., ಎ.ಐ.ಎ.ಡಬ್ಲ್ಯು.ಯು. ಎಸ್.ಎಫ್.ಐ., ಡಿ.ವೈ.ಎಫ್.ಐ. ಮತ್ತು ಎ.ಐ.ಡಿ.ಡಬ್ಲ್ಯು.ಎ. ಚಳವಳಿ ಯಶಸ್ಸಿಗೆ ಸಕ್ರಿಯವಾಗಿ ದುಡಿದವು.

10 ಸಾವಿರ ರೂ.ವರೆಗಿನ ರೈತರ ಸಾಲ ಮನ್ನಾ, ಕೃಷಿ ಕಾರ್ಮಿಕರು, ಕುಶಲ ಕರ್ಮಿಗಳು, ಅಸಂಘಟಿತ ರಂಗದವರಿಗೆ ನಿವೃತ್ತಿ ವೇತನ; ನಿರುದ್ಯೋಗಿ ಯುವ ಜನರಿಗೆ ಉದ್ಯೋಗದ ಖಾತರಿ ಇಲ್ಲವೆ ನಿರುದ್ಯೋಗ ಭತ್ಯೆ; ಎಲ್ಲಾ ಹಳ್ಳಿ--ಪಟ್ಟಣಗಳಲ್ಲಿ ಕುಡಿಯುವ ನೀರಿನ ಸೌಲಭ್ಯ! ವಿದ್ಯುತ್ ಮತ್ತು ರಾಜ್ಯ ಸಾರಿಗೆ ಬಸ್ ಪ್ರಯಾಣದರ ಏರಿಕೆ ಹೆಚ್ಚಳದ ಹಿಂತೆಗೆತ; ಮುಚ್ಚಿದ ಮಿಲ್-ಕಾರ್ಖಾನೆಗಳನ್ನು ಪುನರಾರಂಭಿಸುವುದು ಮತ್ತು ಸರಕಾರವೇ ವಹಿಸಿಕೊಳ್ಳುವುದು; ಬೆಲೆಯೇರಿಕೆಗೆ ತಡೆ; ಕನಿಷ್ಟ ಕೂಲಿಯ ಜಾರಿ ಮೊದಲಾದವು ಮೂರು ಪಕ್ಷಗಳ ಬೇಡಿಕೆಗಳಾಗಿದ್ದವು. 600 ಸಿ.ಐ.ಟಿ.ಯು. ಕಾರ್ಮಿಕರ ವಿರುದ್ಧ ರಾಜ್ಯ ಸರ್ಕಾರ ಜಾರಿಗೊಳಿಸಿರುವ ಭಯೋತ್ಪಾದನೆ ಮತ್ತು ಛಿದ್ರಕಾರಿ ಚಟುವಟಿಕೆ ತಡೆ ಕಾನೂನನ್ನು (ಟಿ.ಎ.ಡಿ.ಎ.) ಹಿಂತೆಗೆದುಕೊಳ್ಳ ಬೇಕೆನ್ನುವುದೂ ಇನ್ನೊಂದು ಪ್ರಮುಖ ಕೇಳಿಕೆಯಾಗಿತ್ತು.

ಬ್ಯಾನರ್, ಬಾವುಟಗಳಿಂದ ಸೃಷ್ಟಿಯಾದ ಕೆಂಪು ಸಾಗರದ ಹರಿವು ಮುಂಬಯಿ ವಿಶ್ವವಿದ್ಯಾನಿಲಯದ ಬಳಿ ದೊಡ್ಡ ಸಾರ್ವಜನಿಕ ಸಭೆಯಾಗಿ ಮಾರ್ಪಟ್ಟಿತು. ಧಾರಕಾರ ಮಳೆಯಲ್ಲೂ ಜನರು ತಮ್ಮ ನಾಯಕರ ಭಾಷಣ ಆಲಿಸಿ ಹೋರಾಟವನ್ನು ತೀವ್ರಗೊಳಿಸುವ ದೃಢ ಪ್ರತಿಜ್ಞೆ ಕೈಗೊಂಡರು.

ಪ್ರಗತಿಪರ ಬರಹಗಾರರ ಸಂಘದ ಸಮ್ಮೇಳನ

'ಖಡ್ಗವಾಗಲಿ ಕಾವ್ಯ, ಜನರ ನೋವಿಗೆ ಮಿಡಿವ ಪ್ರಾಣ ಮಿತ್ರ' ಎಂಬ ಧೋರಣೆಯ ಆಧಾರದಲ್ಲಿ 1975 ರಲ್ಲಿ ತಮಿಳುನಾಡು ಪ್ರಗತಿಪರ ಬರಹಗಾರರ ಸಂಘ ಸ್ಥಾಪನೆಯಾಯಿತು. ಆಗ ಅದರ ಸದಸ್ಯತ್ವ ಕೇವಲ 30. ಈಗ ಅದು ಕಲಾವಿದರು, ನಾಟಕಕಾರರು ಮತ್ತು ಹಾಡುಗಾರರನ್ನೊಳಗೊಂಡಂತೆ 4000 ಕ್ಕೂ ಹೆಚ್ಚು ಜನರ ಸಂಘಟನೆಯಾಗಿ ಬೆಳೆದುನಿಂತಿದೆ.

ಸಂಘದ ಐದನೇ ರಾಜ್ಯ ಸಮ್ಮೇಳನ ತಿರುನಲ್ವೇಲಿಯಲ್ಲಿ ಇತ್ತೀಚೆಗೆ ನಾಲ್ಕು ದಿನ ಕಾಲ ನಡೆಯಿತು. ಲೇಖಕ, ನಾಟಕಕಾರ ಹಾಗೂ ಚಲನಚಿತ್ರ ನಿರ್ದೇಶಕ ಕೋಮಲ್‌ಸ್ವಾಮಿನಾಥನ್ ಸಮ್ಮೇಳನವನ್ನು ಉದ್ಘಾಟಿಸಿದರು. ಮದರಾಸಿನ ನೆಲ್ಸನ್ ಮಂಡೇಲಾ ತಂಡದವರು ಹಾಡುಗಳನ್ನು ಹಾಡಿದರು. ಅಧ್ಯಕ್ಷ ಕೆ. ಮುತ್ತಯ್ಯ ಮತ್ತು ಪ್ರಧಾನ ಕಾರ್ಯದರ್ಶಿ ಆರ್. ಕದಿರೇಶನ್ ಸಂಘಟನೆಯ ವಿಚಾರಗಳ ಬಗ್ಗೆ ವಿವರಣೆ - ವರದಿ ನೀಡಿದರು.

ಕರ್ನಾಟಕ, ದಿಲ್ಲಿ, ಕೇರಳ, ಪಶ್ಚಿಮ ಬಂಗಾಳ, ಆಂಧ್ರಪ್ರದೇಶದ ಸೌಹಾರ್ದ ಪ್ರತಿನಿಧಿಗಳು ಶುಭಕೋರಿ ಮಾತನಾಡಿದರು.

ಸಮ್ಮೇಳನದ ಅಂಗವಾಗಿ ಏರ್ಪಡಿಸಲಾಗಿದ್ದ ಕಾರ್ಯಕ್ರಮಗಳಿಗೆ ಪ್ರತಿದಿನ ಸುಮಾರು 10 ಸಾವಿರ ಜನರು ಬಂದು ಮುಗಿಬೀಳುತ್ತಿದ್ದರು. ಪ್ರತಿ ವರ್ಷವೂ ಇಂಥ ಕಾರ್ಯಕ್ರಮ ನಡೆಸಲು ಪ್ರಗತಿಪರ ಲೇಖಕರ ಸಂಘ ಸಿದ್ಧವಿದ್ದರೆ ನೆರವು ನೀಡಲು ತಾನು ತಯಾರು ಎಂದು ಸ್ಥಳೀಯ ಡಿ.ಎಂ.ಕೆ. ಶಾಸಕ ಎ.ಎಲ್. ಸುಬ್ರಹ್ಮಣ್ಯನ್ ಘೋಷಿಸಿದ್ದು ಕಾರ್ಯಕ್ರಮಗಳ ಯಶಸ್ಸಿಗೆ ಸಾಕ್ಷಿಯಾಗಿದೆ.

ದೇಶದೊಳಗೆ

ಹಿಮಾಚಲ ಪ್ರದೇಶ: "ಬಿ.ಜೆ.ಪಿ. ಬಣ್ಣವೆಲ್ಲಾ ಬಯಲಾಗುತ್ತಿದೆ"

ಸಂದರ್ಶನ

ಜಮ್ಮು ಕಾಶ್ಮೀರ, ಪಂಜಾಬ್, ಹರ್ಯಾಣ ಮತ್ತು ಉತ್ತರ ಪ್ರದೇಶಗಳಿಂದ ಸುತ್ತುವರಿಯಲ್ಪಟ್ಟ ಹಿಮಾಲಯ ಪರ್ವತದ ತಪ್ಪಲಲ್ಲಿರುವ ಸುಂದರನಾಡು ಹಿಮಾಚಲ ಪ್ರದೇಶ. ಎಡಪಂಥೀಯ ಚಳುವಳಿ ಹಿಂದಿವಲಯದ ಇತರ ಕಡೆಗಳಂತೆ ಈ ರಾಜ್ಯದಲ್ಲಿ ಕೂಡ ದುರ್ಬಲ. ಆದರೂ ಇತ್ತೀಚಿನ ದಿನಗಳಲ್ಲಿ ವಿಶೇಷವಾಗಿ ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಅದರ ಸಾಮೂಹಿಕ ಸಂಘಟನೆಗಳು ಜನರ ಮಧ್ಯೆ ಬಲಗೊಳ್ಳುತ್ತಿವೆ. ಎಸ್.ಎಫ್.ಐ. ರಾಜ್ಯದಲ್ಲಿ ಅದರ ಬೆಳವಣಿಗೆಯೇ ಒಂದು ರೋಚಕ ಅಧ್ಯಾಯ ರಾಜ್ಯದ ವಿದ್ಯಾರ್ಥಿಗಳಿಗೆ ಚಿರಪರಿಚಿತವಾಗಿದೆ. ಅದರ ಹಲವರು ಮುಖಂಡರು ಸುಳ್ಳು ಕೊಲೆ ಮೊಕದ್ದಮೆಗಳನ್ನು ಎದುರಿಸುತ್ತಿದ್ದಾರೆ....

ಹಿಂದೆಲ್ಲಾ ಕಾಂಗ್ರೆಸ್ (ಐ) ಆಡಳಿತ ಕಂಡಿದ್ದ ರಾಜ್ಯದಲ್ಲಿ ಈಗ ಭಾರತೀಯ ಜನತಾ ಪಕ್ಷದ ಆಳ್ವಿಕೆಯಿದೆ. ಹಿಂದಿನಂತೆ ಈಗಲೂ ರಾಜ್ಯದಲ್ಲಿ ಪಕ್ಷ, ಸಾಮೂಹಿಕ ಸಂಘಟನೆಗಳು ಕಷ್ಟಕರ ಪರಿಸ್ಥಿತಿಯನ್ನು ಎದುರಿಸುತ್ತಿವೆ.

ಸಂಕಷ್ಟಗಳ ನಡುವೆಯೂ ಸ್ಫೂರ್ತಿಯಿಂದ ಮುನ್ನಗ್ಗುತ್ತಿರುವ ಹಿಮಾಚಲಪ್ರದೇಶ ಸಿ.ಪಿ.ಐ. (ಎಂ) ರಾಜ್ಯ ಸಮಿತಿ ಸದಸ್ಯ ಹಾಗೂ ಹಮೀರ್‌ಪುರ ಜಿಲ್ಲಾ ಸಮಿತಿ ಕಾರ್ಯದರ್ಶಿ ಕಾಮ್ರೇಡ್ ಕಶ್ಮೀರ್ ಸಿಂಗ್ ಠಾಕೂರ್ ಅವರು ಖಾಸಗಿ ಕೆಲಸಕ್ಕಾಗಿ ಕರ್ನಾಟಕಕ್ಕೆ ಈ ವಾರ ಆಗಮಿಸಿದ್ದರು. "ಐಕ್ಯರಂಗ"ಕ್ಕಾಗಿ ಅವರ ಜತೆ ನಡೆಸಿದ ಸಂದರ್ಶನ ಇಲ್ಲಿದೆ.

ಹಿಮಾಚಲ ಪ್ರದೇಶದಲ್ಲಿ ಆಡಳಿತ ಪಕ್ಷ ಬದಲಾಗಿರುವುದರಿಂದಲೇ ಮಾತುಕತೆ ಆರಂಭಿಸಿದೆ.

ಕಾಂಗ್ರೆಸ್ (ಐ) ವಿರುದ್ಧ ಮೊದಲೇ ದೇಶಾದ್ಯಂತ ಅತೃಪ್ತಿಯ ಅಲೆಯಿತ್ತು. ಅದಲ್ಲದೆ ಬಿ.ಜೆ.ಪಿ.ರಾಜ್ಯದಲ್ಲಿ ಆಯಾಯ ವಿಭಾಗಗಳ ಜನರನ್ನು ಆಕರ್ಷಿಸುವಂಥ ಭರವಸೆಗಳನ್ನು ನೀಡಿತು. ಉದಾಹರಣೆ, ಕಾಂಗ್ರೆ ಸರಕಾರ ರಚಿಸಿದ್ದ ಆಡಳಿತ ನ್ಯಾಯಮಂಡಳಿ (ಟ್ರಿಬ್ಯುನಲ್) ಬಗ್ಗೆ ನೌಕರರಿಗೆ ಇದ್ದ ಅತೃಪ್ತಿಯನ್ನು ಬಳಸಿದ ಅದು ಮಂಡಳಿಯನ್ನು ರದ್ದುಪಡಿಸುವುದಾಗಿ ಸರಕಾರಿ ನೌಕರರಿಗೆ ಭರವಸೆ ನೀಡಿತು. ಅದುಗೆ ಕೋಣೆಗೇ ನೀರಿನ ನಲ್ಲಿಯನ್ನು ಹಾಕಿಸುವುದಾಗಿ ಮಹಿಳೆಯರಿಗೆ ಆಶ್ವಾಸನೆ ಕೊಟ್ಟಿತು. 50 ಪೈಸೆಗೆ ಕಿ.ಜಿ. ಅಕ್ಕಿ ನೀಡುವುದಾಗಿ ಘೋಷಿಸಿತು. ಉದ್ಯೋಗ ಒದಗಿಸುವುದಾಗಿ ಯುವ ಜನರನ್ನು ಮರಳು ಮಾಡಿತು....

ಪ್ರಶ್ನೆ: ಚುನಾವಣೆಗೆ ಮುನ್ನ ನೀಡಿದ ಭರವಸೆಗಳನ್ನು ಅಧಿಕಾರಕ್ಕೆ ಬಂದ ಬಿ.ಜೆ.ಪಿ ಸರಕಾರ ಈಡೇರಿಸುತ್ತಿದೆಯೇ?

ಕಶ್ಮೀರ್ ಸಿಂಗ್: ಇಲ್ಲ, ಇಲ್ಲ, ಬಿ.ಜೆ.ಪಿ.ಯ ಬಣ್ಣವೆಲ್ಲ ಈಗ ಬಯಲಾಗುತ್ತಿದೆ. ಅದು ಭರವಸೆಗಳಿಗೆ ವಿರುದ್ಧವಾಗಿ ನಡೆಯುತ್ತಿದೆ.

ಬಿ.ಜೆ.ಪಿ ಸರಕಾರದ ಪ್ರಥಮ ಸಚಿವ ಸಂಪುಟ ಸಭೆಯೇ ನೇಮಕಾತಿಗಳ ಮೇಲೆ ನಿಷೇಧ ಹೇರುವ ನಿರ್ಧಾರ ಕೈಗೊಂಡಿತು. ಇದು ಜನರಿಗೆ ಎಸಗಿದ ಸ್ಪಷ್ಟ ದ್ರೋಹ. ಸರಕಾರಿ ಇಲಾಖೆಗಳಲ್ಲಿ ಮೂರು ವರ್ಷಕಾಲ ದಿನಗೂಲಿಗಳಾಗಿ ದುಡಿದವರನ್ನು ಖಾಯಂ ಮಾಡುವುದಾಗಿ ಭರವಸೆ ನೀಡಿದ್ದರೂ ಆರೋಗ್ಯ, ನೀರಾವರಿ ಮೊದಲಾದ ಇಲಾಖೆಗಳಿಂದ ಅನೇಕ ದಿನಗೂಲಿ ನೌಕರರನ್ನು ವಜಾ ಮಾಡುತ್ತಿದೆ.

ಪಂಜಾಬ್‌ನಲ್ಲಿ ದಿನಗೂಲಿ ನೌಕರರಿಗೆ ಇರುವಂತೆ ಹಿಮಾಚಲ ಪ್ರದೇಶದಲ್ಲೂ ಅಷ್ಟೆ ಅಂದರೆ ತಿಂಗಳಿಗೆ 800 ರೂ ಸಂಬಳ ನೀಡುವ ವಾಗ್ದಾನ ಬಿ.ಜೆ.ಪಿ. ಕೊಟ್ಟಿತ್ತು. ದಿನಗೂಲಿಗಳನ್ನೇ ಬೀದಿ ಪಾಲು ಮಾಡುತ್ತಿರುವ ಅದು ಕೂಲಿ ಹೆಚ್ಚಿಸುವ ಪ್ರಶ್ನೆಯಂತೂ ದೂರವೇ ಉಳಿದಿದೆ. (ಹಿ. ಪ್ರದೇಶದಲ್ಲಿ ಫೆಬ್ರವರಿ ಚುನಾವಣೆ ಮುನ್ನ ಕಾಂಗ್ರೆ ದಿನಗೂಲಿಗಳ ತಿಂಗಳ ವೇತನವನ್ನು 254 ರೂನಿಂದ 560ಕ್ಕೆ ಏರಿಸಿತ್ತು).

ಆರಂಭದಿಂದಲೂ ಲಾಭದಲ್ಲೇ ನಡೆಯುತ್ತಿರುವ ಅರಣ್ಯ ನಿಗಮವೂ ಸೇರಿದಂತೆ 8 ನಿಗಮಗಳನ್ನು ಬರ್ಖಾಸ್ತಗೊಳಿಸಲು ಶಾಂತಕುಮಾರ ಸರಕಾರ ಯೋಜಿಸುತ್ತಿದೆ. ಅದು ಜ್ಯಾರಿಯಾದಲ್ಲಿ ಸುಮಾರು 30 ಸಾವಿರ ನೌಕರರುನಿರುದ್ಯೋಗಿಗಳಾಗುವರು. ಇಂಥ ಕ್ರಮದ ವಿರುದ್ಧ ತೀವ್ರ ಹೋರಾಟ ನಡೆಸುವುದಾಗಿ ನೌಕರರು ಎಚ್ಚರಿಸಿದ್ದಾರೆ.

ಸೇಬು ಬೆಳೆಗಾರರ ಭಾರಿ ಹೋರಾಟ

ತಾನೇ ಕೃಷಿಕರ ಹಿತರಕ್ಷಕ ಎಂದು ರಾಷ್ಟ್ರದಾದ್ಯಂತ ಬೊಬ್ಬಿಡುತ್ತಿರುವ ಬಿ.ಜೆ.ಪಿ. ನಿಮ್ಮ ರಾಜ್ಯದಲ್ಲಿ ರೈತರಿಗಾಗಿ ಏನು ಕೆಲಸ ಮಾಡಿದೆ ಎಂದು ಕೇಳಿದಾಗ ಆ ಪಕ್ಷದ ಬಣ್ಣ ಬಯಲು ಗೊಳಿಸುವ ಸ್ವಾರಸ್ಯಕರ ಸಂಗತಿಯೊಂದನ್ನು ಕಾ। ಕಶ್ಮೀರ್ ವಿವರಿಸಿದರು......

ರೈತರ ಬೆಳೆಗಳಿಗೆ ಬೆಂಬಲ ಬೆಲೆ ನೀಡಿದರೆ ಸರಕಾರಕ್ಕೆ ದುಡ್ಡು ನಷ್ಟವಾಗುತ್ತದೆ ಎಂಬುದು ಈ ಸರಕಾರದ ನಿಲುವಾಗಿದೆ. ಈ ಧೋರಣೆಗೆ ಅನುಗುಣವಾಗಿ ಎಂಬಂತೆ ಅದು ಸೇಬು ಹಣ್ಣಿನ ಬೆಂಬಲ ಬೆಲೆಯನ್ನು ಕೆ.ಜಿ. ಒಂದಕ್ಕೆ ರೂ 1.30 ಎಂದು ನಿಗದಿಪಡಿಸಿತು. ಮೊದಲು ಇದ್ದದ್ದು 2 ರೂ 75 ಪೈಸೆ. ಅಂದರೆ ಅರ್ಧಕ್ಕಿಂತಲೂ ಹೆಚ್ಚು ಬೆಲೆಯನ್ನು ಕಡಿತಮಾಡಿದಂತಾಯಿತು. ಸರಕಾರದ ಈ ಕ್ರಮದಿಂದಸೇಬು ಬೆಳೆಗಾರರ ಒಡಲಿಗೆ ಕಿಚ್ಚಿಟ್ಟಂತಾಗಿದ್ದು ಆಕ್ರೋಶದ ಜ್ವಾಲೆಭುಗಿಲೆದ್ದಿದೆ. ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷದ ನೇತೃತ್ವದಲ್ಲಿ ಏಳು ಜಿಲ್ಲೆಗಳಲ್ಲಿ ತೀವ್ರ ಹೋರಾಟ ನಡೆಯುತ್ತಿದೆ. ಸರಕಾರದ ಬೆಂಬಲ ಬೆಲೆ ಕಡಿತದ ನೀತಿಯ ವಿರೋಧದ ಅಲೆ ಎಷ್ಟು ಬಲವಾಗಿದೆಯೆಂದರೆ ಬಿ.ಜೆ.ಪಿ ಮತ್ತು ಕಾಂಗ್ರೆ ಹಿತೈಷಿಗಳೂ ಚಳುವಳಿಗೆ ಧುಮುಕಿದ್ದಾರೆ.

ಇದೇ ಜುಲೈ 13 ರಂದು ಗ್ರಾಮೀಣ ಶಿಮ್ಲಾ ಬಂದ್ ಮತ್ತು 20 ರಂದು ಶಿಮ್ಲಾ ನಗರ ಬಂದ್‌ನ್ನು ಯಶಸ್ವಿಯಾಗಿ ನಡೆಸಲಾಯಿತು. ಅದಕ್ಕೆ ಮುನ್ನ ದಿನಾಂಕ 4 ರಿಂದ 12 ರವರೆಗೆ ಪ್ರತಿದಿನ 200 ರಿಂದ 300 ಜನರು ಬಂಧನಕ್ಕೊಳಗಾದರು. ಸಿ.ಐ.ಟಿ.ಯು ಮತ್ತು ಎಸ್.ಎಫ್.ಐ. ಕಾರ್ಯಕರ್ತರು ಸೇಬು ಬೆಳೆಗಾರರ ಹೋರಾಟದ ಯಶಸ್ಸಿಗೆ ಸಕ್ರಿಯವಾಗಿ ಕೆಲಸ ಮಾಡುತ್ತಿದ್ದಾರೆ.

ಹಿಮಾಚಲ ಪ್ರದೇಶ ಸರಕಾರದ ಕಾರ್ಮಿಕ ವಿರೋಧಿ ನೀತಿಗಳ ವಿರುದ್ಧ ಪಕ್ಷ ದೃಢವಾದ ಹೋರಾಟ ನಡೆಸುತ್ತಿದೆ.

ದಾಳಿಯ ಗುರಿ.......

ಹಿಮಾಚಲ ಪ್ರದೇಶದಲ್ಲಿ ಪಕ್ಷ ದೊಡ್ಡದಾಗಿ ಬೆಳೆಯದಿದ್ದರೂ ಬಲಗೊಳ್ಳುವ ಲಕ್ಷಣ ಕಂಡ ಹಿಂದಿನ ಕಾಂಗ್ರೆಸ್ (ಐ) ಸರಕಾರ ಅನುಸರಿಸುತ್ತಿದ್ದ ದಬ್ಬಾಳಿಕೆ ನೀತಿ ಹೊಸ ಸರಕಾರದಡಿ ಬದಲಾಗಿದೆಯೇ?

ಹಿಂದೆ ಕಾಂಗ್ರೆಸ್ (ಐ) ಅಧಿಕಾರದಲ್ಲಿದ್ದಾಗ ಬಿ.ಜೆ.ಪಿ. ಅಥವಾ ಇನ್ನಾವುದೇ ಇತರ ಬಂಡವಾಳಶಾಹೀ ಪಕ್ಷಗಳ ಮೇಲೆ ದಬ್ಬಾಳಿಕೆ ಮಾಡುತ್ತಿರಲಿಲ್ಲ. ಸಿ.ಪಿ.ಐ. (ಎಂ) ಮೇಲೆ ದಾಳಿ ಕೇಂದ್ರೀಕೃತವಾಗಿತ್ತು. ಈಗ ಅಧಿಕಾರದಲ್ಲಿರುವ ಬಿ.ಜೆ.ಪಿ., ಕಾಂಗ್ರೆ ಅಥವಾ ಇತರ ಪಕ್ಷದ ಮೇಲೆ ಆಕ್ರಮಣ ಮಾಡುತ್ತಿಲ್ಲ ಅದರ ಗುರಿಯೂ ಸಿ.ಪಿ.ಐ.(ಎಂ) ಆಗಿದೆ ಎಂದು ಹಿಮಾಚಲದ ಸಂಗಾತಿ ಮಾರ್ಮಿಕವಾಗಿ ನುಡಿದರು. ಇದೊಂದು ಸ್ವಾರಸ್ಯಕರ ವಿಷಯ ಎಂದರು.

ಸುಳ್ಳು ಕೊಲೆ ಆರೋಪಗಳ ಮೇಲೆ ಸೆರೆಮನೆಯಲ್ಲಿದ್ದ ಎಸ್.ಎಫ್.ಐ. ನ ಎಂಟು ಮುಖಂಡರು ಈಗ ಬಿಡುಗಡೆ ಹೊಂದಿದ್ದಾರೆ. ಮೊಕದ್ದಮೆ ಅವರ ಪರವಾಗಿ ಇತ್ಯರ್ಥವಾಗಿದೆ ಎಂದು ಕಾ॥ ಕಶ್ಮೀರ್ ಸಿಂಗ್ ನುಡಿದರು.

ಸೇಬು ಬೆಳೆಗಾರರ ಹೋರಾಟವನ್ನು ಮುರಿಯಲಿಕ್ಕಾಗಿ ಬಿ.ಜೆ.ಪಿ. ಹಳೆ ಹಿಮಾಚಲ, ಹೊಸ ಹಿಮಾಚಲ ಇತ್ಯಾದಿಯಾಗಿ (ನಮ್ಮಲ್ಲಿ ಹಳೆ ಮೈಸೂರು, ಹೈದರಾಬಾದ್ ಕರ್ನಾಟಕ ಇದ್ದಂತೆ) ಪ್ರಾದೇಶಿಕವಾದವನ್ನು ಹರಡುತ್ತಿದೆ. ಹಳೆ ಹಿಮಾಚಲದವರೇ ಹೆಚ್ಚಿನ ಲಾಭ ಪಡೆಯುತ್ತಿರುವುದರಿಂದ ಅಲ್ಲಿನ ಕೃಷಿ ಕಾರ್ಮಿಕರಿಗೆ ನೀಡುವ ಬೆಂಬಲ ಬೆಲೆಯಲ್ಲಿ ಕಡಿತ ಮಾಡಲಾಯಿತು ಎಂದು ಅದು ಹೇಳುತ್ತಿದೆ. ಇಂಥ ಪ್ರಾದೇಶಿಕವಾದಕ್ಕೆ ಕಾಂಗ್ರೆ ಕೂಡ ಗಾಳಿ ಹಾಕುತ್ತಿದೆ. (ಹಿಂದಿನ ಕೇಂದ್ರಾಡಳಿತ ಪ್ರದೇಶ ಮತ್ತು ಪಂಜಾಬ್ ನ ಕೆಲವು ಭಾಗಗಳನ್ನು ಸೇರಿಸಿ ಹಿಮಾಚಲಪ್ರದೇಶ ರಾಜ್ಯ ರಚಿತವಾಗಿದೆ. ಕೇಂದ್ರಾಡಳಿತ ಪ್ರದೇಶವನ್ನು ಹಳೆಯದು ಮತ್ತು ಸೇರ್ಪಡೆಯಾಗಿದ್ದ ಪಂಜಾಬ್ ಭಾಗವನ್ನು ಹೊಸ ಪ್ರದೇಶ ಎನ್ನುತ್ತಾರೆ.)

★ ★ ★ ★ ★

ಕೊರಿಯಾ ಶಾಂತಿಯುತ 'ಐಕ್ಯತೆ'ಯತ್ತ?

ಎರಡು ಕೊರಿಯಾಗಳ ನಡುವಣ ಶೀತ ಸಮರದ ಕೊನೆಗೊಂಡು ಪುನರ್‌ಮಿಲನದ ಸಾಧ್ಯತೆ ಹೆಚ್ಚುತ್ತಿದೆ. ಈ ಮಧ್ಯೆ ದ. ಕೊರಿಯಾದಲ್ಲಿ ವಿರೋಧ ಪಕ್ಷಗಳ ಸದಸ್ಯರ ರಾಜೀನಾಮೆಯಿಂದ ರಾಜಕೀಯ ಬಿಕ್ಕಟ್ಟು ಉಂಟಾಗಿದೆ. ಅಫ್‌ಘಾನಿಸ್ತಾನ ಮತ್ತು ಕಂಬೋಡಿ ಯಾದಲ್ಲಿ ಅಮೇರಿಕನ್ ನೀತಿಯಲ್ಲಿ ಪ್ರಮುಖ ಬದಲಾವಣೆಗಳ ಲಕ್ಷಣಗಳು ಕಾಣುತ್ತಿವೆ. ಜರ್ಮನ್ ಐಕ್ಯತೆಯ ಬಗ್ಗೆ ಹೊರಗಣ ಅಡೆ ತಡೆಗಳ ಬಗ್ಗೆ ಒಪ್ಪಂದ ಮಾಡಲಾಗಿದೆ. ಪಾಕಿಸ್ತಾನದಲ್ಲಿ ಶರೀಯತ್ ಕಾನೂನು ಬಗ್ಗೆ ಸರ್ಕಾರದ ಸಮಸ್ಯೆಗಳು ಉಲ್ಬಣಗೊಂಡಿದೆ. ಬ್ರಿಟನ್ ತನ್ನ ಸೈನ್ಯದಲ್ಲಿ ಕಡಿತ, ರಕ್ಷಣಾ ನೀತಿಯಲ್ಲಿ ಪ್ರಮುಖ ಬದಲಾವಣೆಗಳನ್ನು ಘೋಷಿಸಿದೆ.ಅಮೇರಿಕ ಪಶ್ಚಿಮ ಏಶ್ಯಾದ ಕೊಲ್ಲಿಯಲ್ಲಿ ತನ್ನ 'ಗನ್‌ಬೋಟ್ ನೀತಿ' ಮುಂದುವರಿಸಿದೆ.

ಎರಡು ಜರ್ಮನಿಗಳು ಐಕ್ಯತೆಯತ್ತ ಮುಂದುವರಿಯುತ್ತಿದ್ದಂತೆ ಎರಡು ಕೊರಿ ಯಾಗಳು ಐಕ್ಯತೆಯತ್ತ ಮುಂದು ವರಿಯುವ ಲಕ್ಷಣಗಳು ಕಾಣಲಾರಂಭಿಸಿವೆ. ಇತ್ತೀಚೆಗೆ ಜುಲೈ 27-29 ರ ವರೆಗೆ 'ಮಾತುಕತೆಗಳು ಎಲ್ಲಿಹೇಗೆ ಮಾಡಬೇಕು' ಎನ್ನುವ ಬಗ್ಗೆ ಎರಡು ಪ್ರತಿನಿಧಿ ಮಂಡಲಗಳ ಬಗ್ಗೆ ಮಾತುಕತೆ ನಡೆದು ಸೆಪ್ಟೆಂಬರ್ ಮತ್ತು ಅಕ್ಟೋಬರ್‌ನಲ್ಲಿ ಎರಡೂ ದೇಶಗಳ ಪ್ರಧಾನ ಮಂತ್ರಿಗಳು ಪರಸ್ಪರ ಭೇಟಿ ನೀಡಬೇಕೆಂದು ನಿರ್ಧಾರವಾಗಿದೆ. 1950-53 ರ ಕೊರಿಯಾ ಯುದ್ಧ ನಂತರ ಉತ್ತರ ಕೊರಿಯಾ ಕಮ್ಯುನಿಸ್ಟ್ ನಾಯಕತ್ವಕ್ಕೆ ಬಂದರೆ, ದಕ್ಷಿಣ ಕೊರಿಯಾ ಅಮೇರಿಕನ್ ಬಾಲಬಡುಕ ಸರಕಾರ ಗಳಡಿಯಲ್ಲಿ ಸತತವಾಗಿ ಮುಂದುವರಿಯುತ್ತಿದೆ. ಈ ಪ್ರಧಾನ ಮಂತ್ರಿ ಮಟ್ಟದ ಮಾತುಕತೆಗಳಲ್ಲಿ ಎರಡು ಕೊರಿಯಾಗಳ ಸಂಬಂಧಗಳ ಬಗ್ಗೆ ನಾಜೂಕಾದ ವಿಷಯಗಳ ಬಗ್ಗೆ ಮಾತುಕತೆ ನಡೆಯುವುದು. ಶಸ್ತ್ರಾಸ್ತ್ರ ನಿಯಂತ್ರಣ, ವಿಶ್ವಸಂಸ್ಥೆಯ ಸದಸ್ಯತ್ವ ಎರಡು ದೇಶಗಳ ನಡುವೆ ಸಹಕಾರ ಮತ್ತು ವಿನಿಮಯ ಆರಂಭಿಸುವ ಬಗ್ಗೆ ಎರಡೂ ಪ್ರಧಾನ ಮಂತ್ರಿಗಳು ಐತಿಹಾಸಿಕ ನಿರ್ಣಯಗಳನ್ನು ಕೈಗೊಳ್ಳುವ ನಿರೀಕ್ಷೆ ಇದೆ--ಈ ಮಾತುಕತೆಗಳ ಪರಿಣಾಮವಾಗಿ ಜರ್ಮನಿಯಂತೆ ಕೊರಿಯಾಸಹ ಎರಡನೇ ಮಹಾಯುದ್ಧದನಂತರದ 'ಶೀತಸಮರ'ದ ನೀತಿಯಪರಿಣಾಮವಾಗಿ ಇಬ್ಭಾಗವಾಗಿತ್ತು. ಜರ್ಮನ್ ಐಕ್ಯತೆಯೇನೋ ಹೆಚ್ಚು ಕಡಿಮೆ ಅಮೇರಿಕನ್ ಸಾಮ್ರಾಜ್ಯಶಾಹಿಗಳಿಗೆ ಅನುಕೂಲಕರವಾದ ಪರಿಸ್ಥಿತಿಯಲ್ಲಿ ನಡೆದಿದೆ ಎನ್ನಬಹುದು.ಆದರೆ ಕೊರಿಯಾದ ಐಕ್ಯತೆಯತ್ತ ಹೆಜ್ಜೆ ಅಮೇರಿಕನ್ ಮತ್ತು ಅದರ ಮಿತ್ರರಿಗೆ ಅನುಕೂಲಕರವಾಗದೆ ಹೋಗುವ ಸಾಧ್ಯತೆ ಹೆಚ್ಚು.

ಸಧ್ಯಕ್ಕೆ ಈ ಹಾದಿಯಲ್ಲಿ ಇನ್ನೂ ಹಲವಾರು ಅಡೆತಡೆಗಳಿವೆ. ದ. ಕೊರಿಯಾದ ಸರ್ಕಾರ ನಾಟಕೀಯವಾಗಿ ಇದಕ್ಕಿದ್ದ ಹಾಗೆ ಎರಡು ದೇಶಗಳ ನಡುವಣ ಗಡಿ ತೆರೆಯುತ್ತೇವೆಂದು ಹೇಳಿಕೊಂಡಿತು. ಆದರೆ ದ. ಕೊರಿಯಾದ ವಿರೋಧಿ ರಾಜಕೀಯ ಗುಂಪು ಮತ್ತು ವಿದೇಶಗಳಲ್ಲಿರುವ ಕೊರಿಯನ್ನರ ಒಕ್ಕೂಟವೊಂದು ಮುಂಬರುವ ಕೊರಿಯಾದ ಸ್ವಾತಂತ್ರ್ಯ ದಿನದಂದು--ಅದೂ ಆಗಸ್ಟ್ 15 ರಂದು 'ಐಕ್ಯ ರ‍್ಯಾಲಿ'ಯನ್ನು ಯೋಜಿಸಲು ನಿರ್ಧರಿಸಿದ್ದನ್ನು ಅನುಮೋದಿಸಲು ಹಿಂದೇಟು ಹೊಡೆಯುತ್ತಿದೆ". ಎರಡು ದೇಶಗಳ ನಡುವಣ 5 ಕಿ.ಮೀ. ಮಿಲಿಟರಿ--ರಹಿತ ಪ್ರದೇಶದಲ್ಲಿ ಈ ರ‍್ಯಾಲಿ ಆಯೋಜಿಸಲು ಈ ಗುಂಪು ಉತ್ತರ ಕೊರಿಯಾಕೆ ಹೋಗಲು ಅನುಮತಿಯನ್ನು ದ. ಕೊರಿಯಾ ಸರ್ಕಾರ ನಿರಾಕರಿಸಿದೆ. ಈ ಬಗ್ಗೆ ಭಾರಿ ವಿವಾದ ಎದ್ದಿದೆ. ಈ ವಿವಾದದಲ್ಲಿ ದ. ಕೊರಿಯಾ ಸರ್ಕಾರ 'ಐಕ್ಯತೆ' ಬಗ್ಗೆ ಇಟ್ಟುಕೊಂಡಿರುವ ಕಾಳಜಿ ಬದ್ಧ ಬಯಲಾಗಿದೆ. ಇದಲ್ಲದೆ ಉತ್ತರ ಕೊರಿಯಾದ ಯಾರದೇ ಜತೆ ಸಂಪರ್ಕ ಹೊಂದುವುದು ಶಿಕ್ಷಾರ್ಹ ಅಪರಾಧ ಎಂಬ ದ. ಕೊರಿಯಾದ ಕಾನೂನು ರದ್ದುಪಡಿಸಬೇಕು ಎಂಬ ಉತ್ತರ ಕೊರಿಯಾ ಸರ್ಕಾರದ ಒತ್ತಾಯ ಅದನ್ನು ಇಕ್ಕಟ್ಟಿಗೆ ಸಿಲುಕಿಸಿದೆ.

ಈ ನಡುವೆ ದ. ಕೊರಿಯಾದಲ್ಲಿ ತೀವ್ರ ರಾಜಕೀಯ ಬಿಕ್ಕಟ್ಟು ಉಂಟಾಗಿದೆ. ಸರ್ಕಾರದ ಪ್ರಜಾಸತ್ತೆ ವಿರೋಧಿ ಉದ್ಧಟ ಕ್ರಮಗಳನ್ನು ಪ್ರತಿಭಟಿಸಿ ಮರು ಚುನಾವಣೆಗೆ ಒತ್ತಾಯಿಸಿದ್ದಾರೆ. ವಿದ್ಯಾರ್ಥಿಗಳು ಈ ಒತ್ತಾಯದಲ್ಲಿ ಸೇರಲಾರಂಭಿಸಿದ್ದಾರೆ.

ಕಾಂಬೋಡಿಯಾದ 'ಗೆರಿಲ್ಲಾ ಒಕ್ಕೂಟ'ಕ್ಕೆ ಅಮೆರಿಕನ್ ಷಾಕ್

ಕಾಂಬೋಡಿಯಾದಲ್ಲಿ ಅಧಿಕಾರದಲ್ಲಿರುವ

ಲೋಕ ಸಂಚಾರ

ಹನ್-ಸೆನ್ ಸರ್ಕಾರದ ವಿರುದ್ಧ ಸಶಸ್ತ್ರ ಗೆರಿಲ್ಲಾ ಹೋರಾಟದಲ್ಲಿ ತೊಡಗಿರುವ ಒಕ್ಕೂಟಕ್ಕೆ ತನ್ನ ಬೆಂಬಲ ಹಿಂತೆಗೆದುಕೊಳ್ಳಲು ಅಮೇರಿಕ ನಿರ್ಧರಿಸಿದೆ. ಇದು ಅನಿರೀಕ್ಷಿತ ಬದಲಾವಣೆ ಅಮೇರಿಕನ್ ವಿದೇಶ ನೀತಿಯಲ್ಲಿ. 1975ರ ನರಮೇಧಕ್ಕೆ ಕಾರಣರಾದ 'ಖಮೆರ್ ರೋಜ್' ಗೆರಿಲ್ಲಾಗಳನ್ನೊಳಗೊಂಡ ಮಾಜಿ ರಾಜ ಸಿಹಾನ್‌ಕ್‌ರ 'ನಾಯಕತ್ವ'ದಲ್ಲಿರುವ ಒಕ್ಕೂಟಕ್ಕೆ ಅಮೇರಿಕ ರಾಜಕೀಯ, ಆರ್ಥಿಕ, ಮಿಲಿಟರಿ ನೆರವು ನೀಡುತ್ತಾ ಬಂದಿದೆ. ಹನ್‌ಸೆನ್ ಸರ್ಕಾರ ಮತ್ತು ವಿಯೆಟ್ನಾಂ ಸರ್ಕಾರದ ಸಂಧಾನದ ಪ್ರಯತ್ನಗಳೆಲ್ಲಾ ಈ ನೆರವಿನಿಂದಾಗಿ ಈವರೆಗೆ ಸಫಲವಾಗಿಲ್ಲ. ಈ ಒಕ್ಕೂಟದ ಗೆರಿಲ್ಲಾ ಹೋರಾಟ ಕಾಂಬೋಡಿಯಾದಲ್ಲಿ ಶಾಂತಿ ನೆಲೆಗೊಳ್ಳಲು ಬಿಡುತ್ತಿಲ್ಲ. ಕಾಂಬೋಡಿಯಾದ ಜನತೆಯ ಕಷ್ಟಗಳನ್ನು ಇಮ್ಮಡಿಗೊಳಿಸಿದೆ. ವಿಯೆಟ್ನಾಂನ ಸೈನ್ಯ ಕಾಂಬೋಡಿಯಾದಿಂದ ಸಂಪೂರ್ಣವಾಗಿ ವಾಪಸು ತೆಗೆದುಕೊಂಡ ಕ್ರಮಕ್ಕೂ ಸರಿಯಾಗಿ ಪ್ರತಿಕ್ರಿಯಿಸಿಲ್ಲ. ಈ ಹಿನ್ನೆಲೆಯಲ್ಲಿ ಈ ನಿರ್ಧಾರ ಸ್ವಾಗತಾರ್ಹ ಎನ್ನಬೇಕು. ಸೋವಿಯತ್ ಒಕ್ಕೂಟ ಈ ಕ್ರಮವನ್ನು ಸ್ವಾಗತಿಸಿದೆ. ಇದರ ಫಲವಾಗಿ ಈ ಒಕ್ಕೂಟ ವಿಶ್ವ ಸಂಸ್ಥೆಯಲ್ಲಿ ಹೊಂದಿರುವ ಪ್ರತಿನಿಧಿತ್ವವನ್ನು ಕೊನೆಗೊಳಿಸಲು ಸಹ ಅಮೆರಿಕನ್ ಉಳಿದ ಐದು ಶಾಶ್ವತ ಸದಸ್ಯರ ಜತೆ ನಿರ್ಧರಿಸಿದೆ. ಅಲ್ಲದೆ ಕಾಂಬೋಡಿಯನ್ 'ಸಮಸ್ಯೆ' ಬಗ್ಗೆ ಹನ್‌ಸೆನ್ ಸರ್ಕಾರ ಮತ್ತು ವಿಯೆಟ್ನಾಂ ಜತೆ ಮಾತುಕತೆ ನಡೆಸಲು ಸಹ ಅಮೇರಿಕ ನಿರ್ಧರಿಸಿದೆ.

ಅಫಘಾನ್ ಸಮಸ್ಯೆ ಬಗ್ಗೆ ಸಹ ಇಂತಹುದೇ ಲಕ್ಷಣಗಳಿವೆ. ಅಫಘಾನ್ 'ಮೂಲಭೂತವಾದಿ ಗೆರಿಲ್ಲಾ'ಗಳಿಗೆ ಕೊಡುತ್ತಿದ್ದ ಶಸ್ತ್ರಾಸ್ತ್ರದಲ್ಲಿ ಕಡಿತಮಾಡಲುನಿರ್ಧರಿಸಿದೆ.

ಪಶ್ಚಿಮ ಏಶ್ಯಾದಲ್ಲಿ ಬಿಕ್ಕಟ್ಟು

ಹಾಗಾದರೆ ಅಮೆರಿಕ ತನ್ನ 'ಗನ್‌ಬೋಟ್' ವಿದೇಶ ನೀತಿಯನ್ನು ಬಿಟ್ಟುಕೊಟ್ಟಿದೆ ಎನ್ನಬಹುದೇ. ಇಲ್ಲಎಂದು ಅಮೇರಿಕನ್ ಕೊಲ್ಲಿಯಲ್ಲಿ ನಡೆಸಿದ 'ಗನ್‌ಬೋಟ್ ಸನ್ನಾಹ' ಸಾರಿದೆ. ಇರಾಕ್ ಇತ್ತೀಚೆಗೆ ಕುವೈಟ್ ಮತ್ತು UAE ತೈಲ ಉತ್ಪಾದಿಸುವ ಅರಬ್ ದೇಶಗಳ ಒಪ್ಪಂದ ಮುರಿದು ಹೆಚ್ಚಿನ ತೈಲ ಉತ್ಪಾದನೆ ಮತ್ತು ಕಡಿಮೆ ಬೆಲೆಗೆ ಮಾರಾಟ ಮಾಡುತ್ತಿದೆ ಎಂದು ಆಪಾದಿಸಿತು. ಇವು ಹೀಗೆ ಮಾಡುತ್ತಿರುವುದು ಅದರ ಮಿತ್ರರಾದ ಅಮೆರಿಕನ್ನರಿಗೆ ಲಾಭ ಮಾಡಲು. ಕೊಲ್ಲಿ ದೇಶಗಳಿಂದ ಅಮೇರಿಕದ ತೈಲ ಆಮದು ಇತ್ತೀಚೆಗೆ ತೀವ್ರವಾಗಿ ಏರಿದೆ. ಕಡಿಮೆ ಬೆಲೆ ಅಮೆರಿಕಕ್ಕೆ ಲಾಭಕಾರಿ. ಅಲ್ಲದೆ ಇರಾಕ್‌ನ ಆರ್ಥಿಕತೆ ತೈಲ ರಫ್ತಿನ ಮೇಲೆ ವಿಪರೀತ ಅವಲಂಬಿಸಿದ್ದು, ಬೆಲೆಯಲ್ಲಿ ಇಳಿತ ಅದಕ್ಕೆ ತೀವ್ರ ಹೊಡೆತ ಕೊಡುತ್ತದೆ. ಅಮೆರಿಕನ್ ಸಾಮ್ರಾಜ್ಯಶಾಹಿ ವಿರೋಧಿಅರಬ್ ಅಭಿಪ್ರಾಯದ ನಾಯಕನಾಗಿ ರೂಪುಗೊಳ್ಳುತ್ತಿರುವ ಇರಾಕ್‌ನ್ನು ಸದೆ ಬಡಿಯಲು, ಅಮೇರಿಕ ಕುವೈಟ್ ಮತ್ತು UAE ಗಳಿಗೆ ಹೀಗೆ ಮಾಡಲು ಕುಮ್ಮಕ್ಕು ಕೊಡುತ್ತಿತ್ತು. ಇರಾಕ್, ಈ ದೇಶಗಳು ಹೀಗೆ ಮುಂದುವರಿಸಿದರೆ ನೇರಕ್ರಮಗಳನ್ನು ಕೈಗೊಳ್ಳಬೇಕಾಗಬಹುದು ಎಂದು ಎಚ್ಚರಿಸಿತು. ಇದಕ್ಕೆ ಪ್ರತಿಕ್ರಿಯೆಯು ಅಮೆರಿಕನ್ 6ನೇ ನೌಕಾ ಸೈನ್ಯವನ್ನು ಯುದ್ಧಕ್ಕೆ ಸನ್ನದ್ಧಗೊಳಿಸಿತು. ಕೊಲ್ಲಿಯಲ್ಲಿ ಅದು ಕಾರ್ಯಾಚರಣೆಗೆ ಸಿದ್ಧವಾಯಿತು. ಆದರೆ ಆ ಮೇಲೆ ನಡೆದ ತೈಲ ಉತ್ಪಾದಿಸುವ ದೇಶಗಳ ಸಭೆಯಲ್ಲಿ ತೈಲ ಬೆಲೆಯನ್ನು ಏರಿಸುವ ಕುವೈತ್ UAE ಗಳು ತಮ್ಮ 'ಕೋಟಾ' ಉತ್ಪಾದನೆ ಮಿತಿಗೊಳಿಸುವ ಭರವಸೆಯಿಂದ ಇರಾಕ್ ರಾಜಕೀಯವಾಗಿ ಗೆದ್ದಂತಾಗಿದೆ. ಅಮೇರಿಕಕ್ಕೆ ರಾಜಕೀಯವಾಗಿ, ಮಿಲಿಟರಿ ಮುಖ ಭಂಗವಾಗಿದೆ.

ಶರೀಯತ್ ಬಗ್ಗೆ ಗೊಂದಲ

ಪಾಕಿಸ್ತಾನದಲ್ಲಿ ರಾಜಕೀಯ ಮತ್ತು ಧರ್ಮದ ಸ್ಫೋಟಕಕಾರಿ ಮಿಶ್ರಣ ಇನ್ನೂ ಹೆಚ್ಚಿನ ಬಿಕ್ಕಟ್ಟು ಸೃಷ್ಟಿಸುತ್ತಿದೆ. ಹೊಸ ಬಿಕ್ಕಟ್ಟು 'ಇಸ್ಲಾಮಿಕ್' ಕಾನೂನನ್ನು ಇನ್ನೂ ವ್ಯಾಪಕವಾಗಿ ಅನುಸರಿಸುವ ಬಗ್ಗೆ ಪಾಕಿಸ್ತಾನದ ಸೆನೆಟ್‌ನಲ್ಲಿ ಇಂತಹದೊಂದು ಕಾನೂನು ಆಗಲೇ ಮಂಜೂರಾಗಿದೆ. ಇದು ರಾಷ್ಟ್ರೀಯ ಅಸೆಂಬ್ಲಿಯಲ್ಲಿ ಮುಂದಿನ ಅಧಿವೇಶನದಲ್ಲಿ ಚರ್ಚೆಗೆ ಬರಲಿದೆ. ಇದರ ಪ್ರಕಾರ ದೇಶದ ಯಾವುದೇ ಕಾನೂನು 'ಶರೀಯತ್' (ಇಸ್ಲಾಮಿಕ್ ಕಾನೂನು)ನ ನಿಯಮಗಳಿಗೆ ಅನುಸಾರವಾಗಿ ಇದೆಯೇ ಇಲ್ಲವೋ ಎನ್ನುವುದನ್ನು ನಿರ್ಧರಿಸುವ ಅಧಿಕಾರವನ್ನು ಈ ಕಾನೂನು ಮುಲ್ಲಾಗಳಿಗೆ, ಕೋರ್ಟುಗಳಿಗೆ ನೀಡುತ್ತದೆ. ಇದಕ್ಕೆ ಸ್ವಾಭಾವಿಕವಾಗಿಯೇ ಪ್ರಗತಿಪರ, ಪ್ರಜಾಸತ್ತಾತ್ಮಕ, ಜಾತ್ಯತೀತ ಶಕ್ತಿಗಳು ತೀವ್ರ ವಿರೋಧ ವ್ಯಕ್ತಪಡಿಸಿವೆ. ಬೆನಜೀರ್‌ರ ಆಳುವ ಪಕ್ಷ ಸಹ ಅದನ್ನು ಬಲವಾಗಿ ವಿರೋಧಿಸಿದೆ. ಇದು ಪಾರ್ಲಿಮೆಂಟಿನ ಆ ಮೂಲಕ ಜನತೆಯ ಸಾರ್ವಭೌಮತೆಗೆ ಸವಾಲು ಎಂದಿದೆ. ಅದು 'ಕಾನೂನಿನಲ್ಲಿ ಅರಾಜಕತೆ'ಯತ್ತ ದೇಶವನ್ನು ಒಯ್ಯುತ್ತದೆ ಎಂದು ಹೇಳಿದೆ.

ಜರ್ಮನ್ - ಸೋವಿಯತ್ ಒಪ್ಪಂದ

ಎರಡು ಜರ್ಮನ್‌ಗಳ ಐಕ್ಯತೆಗೆ ಇದ್ದ ಬಾಹ್ಯ ಅಡೆತಡೆಗಳನ್ನು ನಿವಾರಿಸಲಾಗಿದೆ. ಇದು ಜುಲೈ 17 ರಂದು ಎರಡು ಜರ್ಮನಿಗಳು ಮತ್ತು ನಾಲ್ಕು ಎರಡನೇ ಮಹಾಯುದ್ಧದ ವಿಜೇತ ದೇಶಗಳಾದ ಅಮೇರಿಕ, ಬ್ರಿಟನ್, ಫ್ರಾನ್ಸ್, ಸೋವಿಯತ್ ಒಕ್ಕೂಟದ ವಿದೇಶ ಮಂತ್ರಿಗಳು ಮಾಡಿಕೊಂಡ ಒಪ್ಪಂದದಿಂದ ಸಾಧ್ಯವಾಗಿದೆ. ಇದು ಸಾಧ್ಯವಾದದ್ದು ಜುಲೈ 16ರಂದು ಗೊರ್ಬಚೆವ್-ಕೋಲ್ ಒಪ್ಪಂದದಿಂದ ಸಾಧ್ಯವಾಯಿತು. ಆ ಒಪ್ಪಂದದ ಮುಖ್ಯ ಅಂಶಗಳು.


-ಜರ್ಮನ್ ಸೈನ್ಯವನ್ನು ಮುಂದಿನ ಮೂರು-ನಾಲ್ಕು ವರ್ಷಗಳಲ್ಲಿ 3,70,000 ಕ್ಕೆ ಇಳಿಸಲಾಗುವುದು.

-ಪೂರ್ವ ಯುರೋಪಿನಲ್ಲಿ ಸೋವಿಯತ್ ಸೈನ್ಯಗಳ ವೆಚ್ಚ 125 ಕೋಟಿ ಜರ್ಮನ್ ಮಾರ್ಕುಗಳನ್ನು ಜರ್ಮನ್ ಸರ್ಕಾರ ಕೊಡಬೇಕು.

-ಸಂಕ್ರಮಣ ಕಾಲದಲ್ಲಿ ಪೂರ್ವಜರ್ಮನಿಯ ಪ್ರದೇಶದಲ್ಲಿ ನಾಟೋ ಸೈನ್ಯಗಳು ಹೋಗುವಂತಿಲ್ಲ. ಆದರೆ ಪೂರ್ವಜರ್ಮನಿಯ ಸೈನ್ಯ ನಾಟೋ ನಿಯಂತ್ರಣದಲ್ಲಿರುತ್ತದೆ.

-ಐಕ್ಯ ಜರ್ಮನಿ ಯಾವುದೇ ರೀತಿಯ ಅಣು, ರಾಸಾಯನಿಕ, ಜೈವಿಕ ಶಸ್ತ್ರಾಸ್ತ್ರಗಳನ್ನು ಉತ್ಪಾದಿಸುವ ಹೊಂದುವ ಹಕ್ಕನ್ನು ಶಾಶ್ವತವಾಗಿ ಬಿಟ್ಟುಕೊಡುತ್ತದೆ.

-ಜೂನ್‌ನಲ್ಲಿ ಕೋಲ್ -ಗೊರ್ಬಚೆವ್ ಮಾತುಕತೆಗಳ ಅಂತ ಮತ್ತಿತರ ಒಪ್ಪಂದಗಳ ಅಂಶಗಳನ್ನು ಒಳಗೊಂಡಂತೆ 1970 ರ ಜರ್ಮನ್ ಸೋವಿಯತ್ ಒಪ್ಪಂದದ ಬದಲಿಗೆ ಮುಂದಿನ ವರ್ಷ ಹೊಸ ಒಪ್ಪಂದಕ್ಕೆ ಸಹಿಹಾಕಲಾಗುವುದು.



ದಕ್ಷಿಣ ಆಫ್ರಿಕಾ ಕಮ್ಯುನಿಸ್ಟ್ ಪಕ್ಷ ನಲ್ವತ್ತು ವರ್ಷಗಳಲ್ಲಿ ಮೊದಲಬಾರಿಗೆ ನಡೆಸಿದ ಬೃಹತ್ ಸಾರ್ವಜನಿಕ ಸಭೆಯಲ್ಲಿ ಕಮ್ಯುನಿಸ್ಟ್ ಮುಖಂಡ ಜೋ ಸ್ಲೋವೋ ನೆಲ್ಸನ್ ಮಂಡೇಲಾರೊಂದಿಗೆ

ಮಂಗೋಲಿಯಾದಲ್ಲಿ ಕಮ್ಯುನಿಸ್ಟರ ಜಯ

ಮಂಗೋಲಿಯಾದಲ್ಲಿ ಇತ್ತೀಚೆಗೆ ನಡೆದ ಚುನಾವಣೆಗಳಲ್ಲಿ ಕಮ್ಯುನಿಸ್ಟ್ ಪಕ್ಷ ಪ್ರಚಂಡ ಬಹುಮತಗಳಿಸಿ ಚುನಾಯಿತವಾಗಿದೆ.ಇದು ಸಾಮ್ರಾಜ್ಯಶಾಹಿಗಳ ಪ್ರಚಾರದ ಸುಳ್ಳಿನ ಕಂತೆಯನ್ನು ಬಯಲು ಮಾಡಿದೆ. ಕಮ್ಯುನಿಸ್ಟ್ ಪಕ್ಷಗಳ ಚುನಾವಣೆ ಇಲ್ಲದಿದ್ದರೆ ಮಾತ್ರ ಅಧಿಕಾರದಲ್ಲಿ ಇರಬಲ್ಲವು ಎಂದು ಸಾಮ್ರಾಜ್ಯಶಾಹಿ ಪ್ರಚಾರ. ಕಮ್ಯುನಿಸ್ಟ್ ಪಕ್ಷ ಜನರ ಬೆಂಬಲ, ವಿಶ್ವಾಸ ಉಳಿಸಿಕೊಂಡಿದೆ ಎಂಬುದು ಇದರಿಂದ ಸ್ಪಷ್ಟ.

ಪಾಕಿಸ್ತಾನಿ ಫಿಲಂ ಮೇಲೆ ನಿಷೇಧ

ಬ್ರಿಟನ್‌ನ ಸೆನ್ಸಾರ್ ಬೋರ್ಡ್ 'ಅಂತರ್ರಾಷ್ಟ್ರೀಯ ಗೆರಿಲ್ಲಾಗಳು' ಎಂಬ ಪಾಕಿಸ್ತಾನಿ ವಿಡಿಯೋ ಫಿಲಂ ಮೇಲೆ ನಿಷೇಧ ಹೊರಿಸಿದೆ. ಈ ಫಿಲಂನಲ್ಲಿ ಸಲ್ಮಾನ್ ರಶ್ದಿಯನ್ನು ಮುಸ್ಲಿಮರಿಗೆ ಚಿತ್ರಹಿಂಸೆ ನೀಡುವ ಇಸ್ರೇಲ ಬೆಂಬಲದ ಖಳನಾಯಕನಂತೆ ಚಿತ್ರಿಸಲಾಗಿದೆ. ಈ ಫಿಲಂ ಪಾಕಿಸ್ತಾನದಲ್ಲಿ ಸಾಕಷ್ಟು ಜನಪ್ರಿಯವಾಗಿತ್ತಂತೆ. ಆದರೆ ಫಿಲಂ ನಿಷೇಧವನ್ನು ಸ್ವತಃ ರಶ್ದಿ ಖಂಡಿಸಿದ್ದಾರೆ ಎಂದು ವರದಿಯಾಗಿದೆ.

ನಿಶ್ಶಸ್ತ್ರೀಕರಣಕ್ಕೆ ಆಜ್ಞೆ


ಅಧ್ಯಕ್ಷ ಗೋರ್ಬಚೆವ್ ಜುಲೈ 25 ರಂದು ಸೋವಿಯತ್ ಕಾನೂನಿನ ಪ್ರಕಾರ ಶಸ್ತ್ರ ಹೊಂದಲು ಅನುಮತಿ ಇಲ್ಲದಿರುವ ಎಲ್ಲಾ ಗುಂಪುಗಳನ್ನು ನಿಶ್ಶಸ್ತ್ರೀಕರಿಸಲು ಆಜ್ಞೆ ಮಾಡಿದ್ದಾರೆ. ಇಂತಹ ಗುಂಪುಗಳಿಗೆ 15 ದಿನಗೊಳಗೆ ಶಸ್ತ್ರಾಸ್ತ್ರಗಳನ್ನು ಹಿಂದಿರುಗಿಸಬೇಕೆಂದು ಆಜ್ಞೆ ತಿಳಿಸಿದೆ. ಸೋವಿಯತ್ ಒಕ್ಕೂಟದ ಹಲವು ರಿಪಬ್ಲಿಕ್‌ಗಳಲ್ಲಿ ಹಲವಾರು ಗುಂಪುಗಳು ಜನಾಂಗೀಯ ಗಲಭೆಗಳ ಹಿನ್ನೆಲೆಯಲ್ಲಿ ಶಸ್ತ್ರಾಸ್ತ್ರಗಳನ್ನು ಹೊಂದಿವೆ. ಇವುಗಳಲ್ಲಿ ಹೆಚ್ಚಿನವು ಸೈನ್ಯದಿಂದ ಕಿತ್ತುಕೊಂಡವು. ನಿಶ್ಶಸ್ತ್ರೀಕರಣವನ್ನು ಜಾರಿಗೊಳಿಸಲು ಸೋವಿಯತ್ ಆಂತರಿಕ ಭದ್ರತಾ ಪಡೆಗಳು ಮತ್ತು ಅಗತ್ಯವಾದರೆ ಸೈನ್ಯಕ್ಕೆ ವ್ಯಾಪಕ ಅಧಿಕಾರವನ್ನು ನೀಡಲಾಗಿದೆ.

ಸಂಪರ್ಕ ಮಧ್ಯಮಗಳ ಸೆನ್ಸಾರ್ ಶಿಪ್ ರದ್ದು

ಪತ್ರಿಕೆಗಳು, ರೇಡಿಯೋ, ಟಿವಿ ಮುಂತಾದ ಸಂಚಾರ ಮಧ್ಯಮಗಳ ಮೇಲೆ ಸರ್ಕಾರಕ್ಕೆ ಸೆನ್ಸಾರ್‌ಶಿಪ್ ಹಾಕಲು ಇದ್ದ ಅಧಿಕಾರವನ್ನು ರದ್ದುಗೊಳಿಸಲಾಗಿದೆ. ಸೋವಿಯತ್ ಈಗಾಗಲೇ ಮಂಜೂರು ಮಾಡಿರುವ ಈ ಕಾನೂನು ಆಗಸ್ಟ್ 1 ರಿಂದ ಜಾರಿಗೆ ಬರಲಿದೆ. ಆದರೆ ಸೆನ್ಸಾರ್ ಏಜೆನ್ಸಿ ಮುಂದುವರಿಯುತ್ತಿದೆ. ಅದರ ಪಾತ್ರ ಈಗ ವಿದೇಶೀ ಮುದ್ರಣಗಳು ಚಿತ್ರ ಮತ್ತು ದೃಶ್ಯ ಕ್ಯಾಸೆಟ್ಟುಗಳನ್ನು ಪರಿಶೀಲಿಸುವಷ್ಟಕ್ಕೆ ಸೀಮಿತವಾಗಿರುತ್ತದೆ. ಈ ವಿದೇಶೀ ಮಾಧ್ಯಮಗಳಲ್ಲಿ ಸರ್ಕಾರವನ್ನು ಕಿತ್ತೊಗೆಯುವ ಕರೆ, ಅಪರಾಧ ಕಾರ್ಯಾಚರಣೆ, ಅಶ್ಲೀಲತೆ, ಯುದ್ಧ ಪ್ರಚಾರ, ಹಿಂಸಾಚಾರ, ಜನಾಂಗೀಯ ದ್ವೇಷಗಳ ಬಗ್ಗೆ ಸೆನ್ಸಾರ್ ಏಜೆನ್ಸಿ ಕಣ್ಣಿಡುತ್ತದೆ.

KRNM/BGS-312 MAG (2) PRB DECR 319-78/79

ಬಿ.ಜೆ.ಪಿ.ಯ "ಅಕಸ್ಮಿಕ ಯೋಜನೆ"ಯ ನಿಜ ರೂಪವೇನು



ಪುಟ 1 ರಿಂದ

ಆದ್ದರಿಂದ ನಮ್ಮೆರಡು ದೇಶಗಳ ಜನಗಳ ನಡುವಿನ ಸಂಬಂಧ. ಕೆಡಿಸುವ ಯಾವುದೇ ಕೆಲಸ ಮಾಡಲು ಅವರು ಸಿದ್ಧರಿಲ್ಲ. ಆದರೆ ಬಿ.ಜೆ.ಪಿ. ಮಟ್ಟಿಗೆ ಇದೂ ತಪ್ಪು. ಪಾಕಿಸ್ತಾನೀ ನೆಲದಲ್ಲಿ ತರಬೇತಿ ಕ್ಯಾಂಪುಗಳನ್ನು ನಿರ್ನಾಮ ಗೊಳಿಸುವ ಹೆಸರಿನಲ್ಲಿ ಪಾಕಿಸ್ತಾನದ ಪ್ರದೇಶದೊಳಗೆ ನುಗ್ಗುವ ಧೋರಣೆ ಅನುಸರಿಸಬೇಕೆಂದು ಮದ್ರಾಸಿನಲ್ಲಿ ಸಭೆ ನಡೆಸಬೇಕೆಂದು ಅದರ ರಾಷ್ಟ್ರೀಯ ಕಾರ್ಯಕಾರಿಣಿ ಕರೆ ನೀಡಿದೆ. ಇದರಿಂದ

ನಮ್ಮೆರಡು ದೇಶಗಳ ಜನಗಳ ನಡುವಿನ ಸಂಬಂಧ ಕೆಡುವುದು ಮಾತ್ರವಲ್ಲ, ಈ ಮೂಲಕ ಭಾರತ ಪಾಕಿಸ್ತಾನ ವ್ಯವಹಾರಗಳಲ್ಲಿ ಮೂಗು ತೂರಲು ಸಾಮ್ರಾಜ್ಯಶಾಹಿಗೆ ಅವಕಾಶ ಕಲ್ಪಿಸಿದಂತಾಗುತ್ತದೆ ಎಂಬುದರ ಪರಿವೆಯೇ ಬಿ.ಜೆ.ಪಿ.ಗಿಲ್ಲ.

ಹೀಗೆ ಈ ಪಟ್ಟಿಯನ್ನು ಬೆಳೆಸುತ್ತಲೇ ಹೋಗಬಹುದು. ಆದರೆ ರಾಮಜನ್ಮ ಭೂಮಿಯ ಮಹತ್ವದ ಪ್ರಶ್ನೆಯನ್ನು ಪ್ರಸ್ತಾಪಿಸದಿದ್ದರೆ ಈ ಪಟ್ಟಿ ಅಪೂರ್ಣ.

ಶ್ರೀರಾಮನಿಗೆ ದೇವಸ್ಥಾನ ಕಟ್ಟುವುದನ್ನು ಯಾವುದೇ ಧರ್ಮದ ಯಾವುದೇ ವ್ಯಕ್ತಿ ಆಕ್ಷೇಪಿಸಲಾರ. ಆದರೆ ಈಗಿರುವ ಮುಸ್ಲಿಂ ಮಸೀದಿಯನ್ನು ಕೆಡವಿ ಅದೇ ಭಾಗದಲ್ಲಿ ಒಂದು ಹಿಂದೂ ದೇವಸ್ಥಾನ ಕಟ್ಟಬೇಕು ಎನ್ನುವುದಕ್ಕೇ ಎಲ್ಲರ ಆಕ್ಷೇಪ. ಆದರೆ ಬಿ.ಜೆ.ಪಿ. ಮತ್ತದರ ಮಿತ್ರರು ಬೇರೆ ಯವುದಕ್ಕೂ ಎಷ್ಟು ಮಾತ್ರಕ್ಕೂ ಸಿದ್ಧರಿಲ್ಲ. ಬಾಬ್ರಿಮಸೀದಿಯನ್ನು ಕೆಡವಿ ಅದೇ ಸ್ಥಾನದಲ್ಲಿ ರಾಮಜನ್ಮಭೂಮಿ ದೇವಸ್ಥಾನ ಕಟ್ಟುವುದಲ್ಲದೆ ಬೇರೆ ಯಾವುದಕ್ಕೂ ಎಷ್ಟು ಮಾತ್ರಕ್ಕೂ ಅವರು ಸಿದ್ಧರಿಲ್ಲ.

ನ್ಯಾಯಾಂಗದ ತೀರ್ಪಿಗೆ ಬದ್ಧವಾಗಲೂ ಕೂಡಾ ಅವರು ನಿರಾಕರಿಸುತ್ತಾರೆ. ಇಷ್ಟಕ್ಕೇ ಅವರು ನಿಲ್ಲುವುದಿಲ್ಲ. ಬಾಬ್ರಿಮಸೀದೆಯನ್ನು ಕೆಡವುದಷ್ಟೇ ಅವರ ಆಗ್ರಹವಲ್ಲ. ಇದು ಮಸೀದೆಗಳನ್ನು ಕೆಡವಿ ದೇವಸ್ಥಾನಗಳನ್ನು ಕಟ್ಟುವ ಕೆಲಸದ ಆರಂಭವಷ್ಟೆ. ಉದಾಹರಣೆಗೆ, ಮುಂದಿನ ಯೋಜನೆ-ಮಥುರೆ ಮತ್ತು ವಾರಣಾಸಿ. ಆದರೂ ತಾನೊಂದು ಜಾತ್ಯತೀತ ಪಕ್ಷ ಎಂದು ಕೇಳಿಕೊಳ್ಳುತ್ತದೆ ಬಿ.ಜೆ.ಪಿ.

ಹೀಗೆ ಬಿ.ಜೆ.ಪಿ.ಯ "ಆಕಸ್ಮಿಕ ಯೋಜನೆ ಮಧ್ಯಾವಧಿ ಚುನಾವಣೆ ಎದುರಿಸುವ ಯೋಜನೆಯಲ್ಲ, ಅಲ್ಪಸಂಖ್ಯಾತರೊಡನೆ ಸಂಘರ್ಷದ ಒಂದು ಯೋಜನೆ. ಅಲ್ಪಸಂಖ್ಯಾತರ ವಿರುದ್ಧ, ಹೀಗೆ ಹಲ್ಲೆಗೊಳಗಾದ ಅಲ್ಪಸಂಖ್ಯಾತರ ರಕ್ಷಣೆಗೆ ಹೋರಾಡುತ್ತಿರುವುದರ ವಿರುದ್ಧ ಹಿಂದೂ ಕೋಮಿಗೆ ಸೇರಿದ ಲಕ್ಷಾಂತರ ಜನರನ್ನು ಎತ್ತಿ ಕಟ್ಟುವ ಯೋಜನೆ ಇದು.

ಹೀಗೆ ಬಿ.ಜೆ.ಪಿ.ಯ "ಆಕಸ್ಮಿಕ ಯೋಜನೆ ಮಧ್ಯಾವಧಿ ಚುನಾವಣೆ ಎದುರಿಸುವ ಯೋಜನೆಯಲ್ಲ. ಅಲ್ಪಸಂಖ್ಯಾತರೊಡನೆ ಸಂಘರ್ಷದ ಒಂದು ಯೋಜನೆ. ಅಲ್ಪಸಂಖ್ಯಾತರ ವಿರುದ್ಧ, ಹೀಗೆ ಹಲ್ಲೆಗೊಳಗಾದ ಅಲ್ಪಸಂಖ್ಯಾತರ ರಕ್ಷಣೆಗೆ ಹೋರಾಡುತ್ತಿರುವುದರ ವಿರುದ್ಧ ಹಿಂದೂ ಕೋಮಿಗೆ ಸೇರಿದ ಲಕ್ಷಾಂತರ ಜನರನ್ನು ಎತ್ತಿಕಟ್ಟುವ ಯೋಜನೆ ಇದು.

ಈ ಅಪಾಯಕಾರಿ ಸನ್ನಿವೇಶವನ್ನು ಎದುರಿಸುವುದು ಹೇಗೆ? ರಾಜೀವ ಸರಕಾರ ಅಧಿಕಾರಕ್ಕೆ ಹಿಂದಿರುಗದಂತೆ ತಡೆಯಲು ಎಡ ಮತ್ತು ಪ್ರಜಾಪ್ರಭುತ್ವದ ಶಕ್ತಿಗಳ ಐಕ್ಯತೆ ಕಾಪಾಡುವುದು ಹೇಗೆ?

ಕೋಮುಸೌಹಾರ್ದ ಮತ್ತು ರಾಷ್ಟ್ರೀಯ ಐಕ್ಯತೆಯ ರಕ್ಷಣೆಯ ಆಧಾರದ ಮೇಲೆ ಎಲ್ಲಾ ಧಾರ್ಮಿಕ ಕೋಮುಗಳಿಗೆ ಸೇರದ ಜನಸಾಮಾನ್ಯರ ಐಕ್ಯತೆಯನ್ನು ಕ್ರೋಡೀಕರಿಸುವುದು ಹೇಗೆ?—ಇವೆಲ್ಲಾ ಎಡಪಕ್ಷಗಳ ಮುಂದಿರುವ ಪ್ರಶ್ನೆಗಳಷ್ಟೇ ಅಲ್ಲ, ಜನತಾ ದಳ ಮತ್ತು ರಾಷ್ಟ್ರೀಯ ರಂಗ ಎದುರಿಸುವ ಪ್ರಶ್ನೆಗಳು ಕೂಡಾ.

ಪುಟ 1 ರಿಂದ

ಮರೆಯಬೇಡಿರೆಂದು ಹೇಳಿದರಂತೆ. 1965 ರಲ್ಲಿ ಅವರು ಸಿ.ಪಿ.ಐ. (ಎಂ) ಸೇರಿದರು. ಕರ್ನಾಟಕ ಪ್ರಾಂತ ರೈತ ಸಂಘದ ಉಪಾಧ್ಯಕ್ಷರಾಗಿ ಕೋಲಾರ ಜಿಲ್ಲಾ ರೈತ ಸಂಘದ ಅಧ್ಯಕ್ಷರಾಗಿ ರೈತ ಚಳುವಳಿಗೆ ಮಾರ್ಗದರ್ಶನ ನೀಡಿದರು.

ಕೋಲಾರ ಜಿಲ್ಲೆಯಲ್ಲಿ ನಡೆದ 1972 ರಲ್ಲಿ ಚರಿತ್ರಾಹ ಭೂಮಿ ಹೋರಾಟಕ್ಕೆ ಇವರೇ ಸೂತ್ರಧಾರರಾಗಿದ್ದರು.

ಈಗಲೇ ತಿಮ್ಮಸಂದ್ರದಲ್ಲಿ 2000ರೈತ ಸತ್ಯಾಗ್ರಹಿಗಳ ಭೂ ಆಕ್ರಮಣ ಹೋರಾಟದ ನೇತೃತ್ವವಹಿಸಿದ್ದರು. ಆ ಹೋರಾಟ ಇಡೀ ಜಿಲ್ಲೆ ಪ್ರವೇಶಿಸಿ 10,000 ಹೆಚ್ಚು ರೈತರು ಭೂ ಚಳುವಳಿಯಲ್ಲಿ ಪಾಲ್ಗೊಂಡು ಸೆರೆಹಿಡಿಯಲ್ಪಟ್ಟರು. ಈ ಚಳುವಳಿ ಎ.ಕೆ. ಗೋಪಾಲನ್ ಅವರನ್ನು ಆಕರ್ಷಿಸಿ ಅವರು ಕೋಲಾರ ಜಿಲ್ಲೆಯಲ್ಲಿ ಪಾದಯಾತ್ರೆ ಕೈಗೊಳ್ಳುವಂತೆ ಮಾಡಿತು. ಇವರು ಸೈಕಲಿನ ಮೂಲಕವೇ ಹಳ್ಳಿಗಳಿಗೆ ಹೋಗಿ ರೈತ ಸಂಘ ಕಟ್ಟಿದರು.

1979ರಲ್ಲಿ ಶಿಡ್ಲಘಟ್ಟದಲ್ಲಿ ಸತ್ಯಾಗ್ರಹ ನಡೆಸಿದಾಗ, ಪೋಲೀಸರ ಲಾಠಿಯೇಟಿನಿಂದಾಗಿ ಪಾಪಣ್ಣನವರ ಆರೋಗ್ಯಕ್ಕೆ ಧಕ್ಕೆ ಉಂಟಾಯಿತು. ನಂತರ ಪಾರ್ಶ್ವವಾಯು ರೋಗಕ್ಕೆ ಬಲಿಯಾಗಿ ಕಳೆದ ಎರಡು ವರ್ಷಗಳಿಂದ ಅವರ ಚಲನವಲನಕ್ಕೆ ಅಡ್ಡಿಉಂಟಾಗಿತ್ತು. ಜನರ ಸಮಸ್ಯೆಗಳಿಗೆ ನೇರವಾಗಿ ಸ್ಪಂದಿಸಿ ಅವುಗಳಿಗೆ ಪರಿಹಾರ ಒದಗಿಸುವ ಕರ್ತವ್ಯದಕ್ಷತೆ, ನೇರ ಜನಸಂಪರ್ಕ ಸರಳ ಜೀವನ ಎಲ್ಲಾ ವರ್ಗದ ಜನರತ್ತ ಆಕರ್ಷಿಸುತ್ತಿತ್ತು. ಇವರು ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೂ ಸಹಾಯ ನೀಡಿದ್ದರು.

1952 ರಲ್ಲಿ ಮೈಸೂರು ವಿಧಾನ ಸಭೆಗೆ ನಡದ ಪ್ರಥಮ ಚುನಾವಣೆಯಲ್ಲಿ ಶಾಸಕರಾಗಿ ಆರಿಸಿ ಬಂದಿದ್ದರು. ಮುಂದೆ ಕಮ್ಯುನಿಸ್ಟ ಪಕ್ಷದಿಂದ 2 ಸಲ ಸ್ಪರ್ಧಿಸಿದ್ದರು.

30 ರಂದು ನಡೆದ ಸ್ಮಶಾನ ಯಾತ್ರೆಯಲ್ಲಿ ನೂರಾರು ಮಹಿಳಿಯರನ್ನೊಳಗೊಂಡು ಸಾವಿರಾರು ಜನ ಪಾಲ್ಗೊಂಡಿದ್ದರು. ಪ್ರಾಥಮಿಕ ಶಾಲೆಯ ಹೆಣ್ಣು ಹುಡುಗಿಯರೂ ಹೈಸ್ಕೂಲ್ ವಿದ್ಯಾರ್ಥಿಗಳು ತಮ್ಮ ಬ್ಯಾಂಡ್ ಸೆಟ್ಟನೊಂದಿಗೆ ಅಂತಿಮ ಯಾತ್ರೆಯಲ್ಲಿ ಭಾಗವಹಿಸಿದ್ದರು. ಸಿ.ಪಿ.ಐ. (ಎಂ) ಪರವಾಗಿ ಸೆಕ್ರೆಟಾರಿಯೇಟ್ ಸದಸ್ಯರಾದ ಎನ್.ಕೆ. ಉಪಾಧ್ಯಾಯ, ಜಿ.ವಿ. ರಾಮರೆಡ್ಡಿ, ಕೆ.ಎಂ. ವೆಂಕಟೇಶ, ಪ್ರಾಂತ ರೈತ ಸಂಘದ ವತಿಯಿಂದ ಪ್ರಧಾನ ಕಾರ್ಯದರ್ಶಿ ಚಂದ್ರ ಶೇಖರ ಬಾಳಿಯವರಲ್ಲದೆ, ಕಾಂಗ್ರೆ ಶಾಸಕ ವಿ. ಮುನಿಯಪ್ಪ ಜನತಾದಳದ ಕೆ.ವಿ. ರೆಡ್ಡಿ, ಕೃಷ್ಣಾರೆಡ್ಡಿ, ಅಲ್ಲದೆ ಎಲ್ಲಾ ಪಕ್ಷಗಳ ಮುಖಂಡರು ಅಗಲಿದ ನಿಷ್ಠಾವಂತ ಮುಖಂಡನಿಗೆ ಶ್ರದ್ಧಾಂಜಲಿಯನ್ನರ್ಪಿಸಿದರು.

ಪಕ್ಷದ ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಕಾರ್ಯದರ್ಶಿಮಂಡಳಿ ಶ್ರದ್ಧಾಂಜಲಿಯನ್ನರ್ಪಿಸಿದೆ.

ಈ ವಾರ...

★ ಪ್ರಧಾನಮಂತ್ರಿ ವಿ.ಪಿ. ಸಿಂಗ್ ಹಾಗೂ ಅವರ ಮೂವರು ಮಂತ್ರಿಮಂಡಳೀಯ ಸಹೋದ್ಯೋಗಿಗಳ ಮಾಸ್ಕೋ ಭೇಟಿ ಭಾರತ-ಸೋವಿಯೆತ್ ಸಂಬಂಧಗಳು ಪಡೆದುಕೊಂಡಿರುವ ಹರಹು ಮತ್ತು ವಿಸ್ತಾರವನ್ನು ಎತ್ತಿ ತೋರಿದೆ....... ಸೋವಿಯೆತ್ ಒಕ್ಕೂಟವು ಭಾರತದೊಡನೆ ತನ್ನ ಸಂಬಂಧಗಳಿಗೆ ಬಹಳ ಮಹತ್ವ ನೀಡಿದೆ....... 1971 ರ ಭಾರತ-ಸೋವಿಯೆತ್ ಮೈತ್ರಿಕೌಲು, 1986 ರಲ್ಲಿ ಗೊರ್ಬಚೆವ್‌ರ ದೆಹಲಿ ಭೇಟಿ ಕಾಲದಲ್ಲಿ ನೀಡಿದ 'ದೆಹಲಿ ಘೋಷಣೆ ಹಾಗೂ ವಿ.ಪಿ.ಸಿಂಗರ ಭೇಟಿ ಕಾಲದಲ್ಲಿ ಹೊರಡಿಸಿದ 'ಜಂಟಿ ಹೇಳಿಕೆ' ಇದನ್ನು ತೋರಿಸಿ ಕೊಟ್ಟಿದೆ. ಬಹಳ ಭಿನ್ನವಾದ ಹಿತಾಸಕ್ತಿಗಳ ಒಂದು ವಿಶ್ವ ಶಕ್ತಿಯಾದ ಸೋವಿಯೆತ್ ಒಕ್ಕೂಟ ಈಗಲೂ ಕೂಡಾ ಅಭಿವೃದ್ಧಿ ಶೀಲ ದೇಶಗಳ ಸಮಸ್ಯೆಗಳಿಗೆ ಹೆಚ್ಚು ಗಮನ ನೀಡುವ ಒಂದು ಹೆಚ್ಚು ನ್ಯಾಯಯುತ ವಿಶ್ವದ ಬಗ್ಗೆ ಭಾರತದ ಒಲವಿನೊಂದಿಗೆ ವ್ಯಾಪಕ ಸಹಮತಿ ಹೊಂದಿದೆಯೆಂಬುದು ಮಹತ್ವದ ವಿಷಯ.

-ಹಿಂದೂ, ಜುಲೈ 27

★ ವಿ.ಪಿ.ಸಿಂಗ್ ಮತ್ತು ಅವರ ಸಹೋದ್ಯೋಗಿಗಳು ಮಾಸ್ಕೋದಲ್ಲಿ ಪಡೆದ ಉತ್ತರಗಳು ದ್ವಿಪಕ್ಷೀಯ ಸಂಬಂದಗಳ ಭವಿಷ್ಯದ ಬಗ್ಗೆ ಜನಿಸಿದ್ದ ಸಂಶಯಗಳನ್ನೆಲ್ಲಾ ನಿವಾರಿಸಿದೆ. ಮಿಖಾಯಿಲ್ ಗೊರ್ಬಚೆವ್ ಪ್ರಾಡ್ವಾಕ್ಕೆ ಹೇಳಿರುವಂತೆ ಅಂತರಾಷ್ಟ್ರೀಯ ವಾತಾವರಣದಲ್ಲಿ ಮತ್ತು ಸೋವಿಯೆತ್ ಒಕ್ಕೂಟದೊಳಗೆ ಮಹತ್ವದ ಬದಲಾವಣೆಗಳಾದರೂ ಎರಡು ದೇಶಗಳ ಹಿತಾಸಕ್ತಿಗಳ ಸಮಾನತೆ ಬದಲಾಗದೇ ಉಳಿದಿದೆ. ಇದಕ್ಕೆ ಸಂಕೇತವಾಗಿ ಮುಂದಿನ ವರ್ಷ ಮುಗಿಯಲಿರುವ 20 ವರ್ಷಗಳ ಮೈತ್ರಿ ಕೌಲನ್ನು ವಿಸ್ತರಿಸಲು ಒಪ್ಪಂದವಾಗಿದೆ. ಈ ನವೀಕರಣದ ಸಂದರ್ಭದಲ್ಲಿ ವಾಣಿಜ್ಯ, ವೈಜ್ಞಾನಿಕ, ತಾಂತ್ರಿಕ ವಿನಿಮಯವನ್ನು ಹೆಚ್ಚಿಸುವ ವ್ಯವಸ್ಥೆ ಮಾಡಲಾಗುವುದು.

- ಟೈಂಸ್ ಆಫ್ ಇಂಡಿಯಾ, ಜುಲೈ 27

★ ಕಾಶ್ಮೀರ ಸಮಸ್ಯೆಯನ್ನು ಅಂತರರಾಷ್ಟ್ರೀಯ ಗೊಳಿಸುವ ಪಾಕ್ ಪ್ರಯತ್ನಕ್ಕೆ ರಷ್ಯದ ಸಹಾನುಭೂತಿ ಇರಲಿಲ್ಲ. ಈ ನಿಲುವು ಇದೀಗ ಅತ್ಯಂತ ಸ್ಪಷ್ಟವಾಗಿ ಪ್ರಕಟ ಪಂಜಾಬ್ ಮತ್ತು ಕಾಶ್ಮೀರಗಳೇನಿದ್ದರೂ ಭಾರತದ ಆಂತರಿಕ ಸಮಸ್ಯೆ. ಭಾರತದ ಸಂವಿಧಾನ ಚೌಕಟ್ಟಿನಲ್ಲಿಯೇ ಅವುಗಳಿಗೆ ಪರಿಹಾರ. ಅನ್ಯರ ಮಧ್ಯಪ್ರವೇಶಕ್ಕೆ ಎಡೆಯಿಲ್ಲ. ಪಾಕಿಸ್ತಾನ ತನ್ನ ಇರಿಸು ಮುರಿಸನ್ನು ಮಾತುಕತೆಯಿಂದಲೇ ಬಗೆ ಹರಿಸಿಕೊಳ್ಳಬೇಕು.ಇದು ರಷ್ಯ ಸ್ಪಷ್ಟವಾಗಿ ಪ್ರಕಟಿಸಿದ ನಿಲುವು.

ಇನ್ನೊಂದು ಒಳಿತಾದ ಪರಿಣಾಮ. ಭಾರತ-ರಷ್ಯಾ ನಡುವಣ ದ್ವಿಪಕ್ಷೀಯ ವಾಣಿಜ್ಯ ಈಗಿನಂತೆಯೇ ಮುಂದವರೆಯುವುದು....... ಅಲ್ಲಿಗೆ ಇನ್ನು ಐದು ವರ್ಷಗಳ ಕಾಲ ನಿರಾತಂಕ. ತಾಷ್ಕೆಂಟ್ ಒಪ್ಪಂದ , ದಿಲ್ಲಿ ಘೋಷಣೆ ತರುವಾಯ ಬಂದ ಭಾರತ-ರಷ್ಯಾ ಸಂಯುಕ್ತ ಹೇಳಿಕೆಯಲ್ಲಿನ ಆಶಯಗಳು. ಸಹಿ ಹಾಕಿದ ಒಪ್ಪಂದಗಳು ಉಭಯ ರಾಷ್ಟ್ರಗಳ ನಡುವಿನ ಅಖಂಡ ಮೈತ್ರಿಗೆ ಸಾಕ್ಷಿ.

-ಕನ್ನಡ ಪ್ರಭ, ಜುಲೈ 27

★ ಅಂತರಾಷ್ಟ್ರೀಯ ಸನ್ನಿವೇಶ ಅತ್ಯಂತ ಭಿನ್ನವಾಗಿದ್ದಾಗ ರೂಪುಗೊಂಡ ಎರಡು ದೇಶಗಳ ಸಂಬಂಧಗಳು ಇನ್ನೂ ಸಮರ್ಪಕವೇ ಎಂಬ ಸಂಶಯಗಳೇನಾದರೂ ಇದ್ದರೆ ಅದೀಗ ನಿವಾರಣೆಯಾಗಿದೆ. ಈ ಸಂಬಂಧ ಅಖಂಡವಾಗಿರಲು ಕಾರಣ-ಇವೆರಡು ದೇಶಗಳನ್ನು ಹತ್ತಿರ ತಂದ ಪರಸ್ಪರ ಹಿತಾಸಕ್ತಿಗಳು, ಸಮಾನ ನೀತಿ ಆಧಾರಗಳು ಈಗಲೂ ಸಮರ್ಪಕ.

"ಆರ್ಥಿಕ ರಂಗದಲ್ಲಿ ಪರಸ್ಪರ ವಾಣಿಜ್ಯವನ್ನು ಈ ವರ್ಷದ ಯೋಜಿತ 8000 ಕೋಟಿ ರೂ.ಗಳಿಗಿಂತ 1922 ರಲ್ಲಿ 10 ಸಾವಿರ ಕೋಟಿ ರೂ.ಗಳಿಗೇರಿಸುವ ನಿರ್ಧಾರವನ್ನು ಭಾರತ ಮತ್ತು ಸೋವಿಯೆತ್ ಒಕ್ಕೂಟ ವ್ಯಕ್ತಪಡಿಸಿವೆ. ರಫ್ತು ಸರಕುಗಳನ್ನು ವ್ಯಾಪಕಗೊಳಿಸಿ ಜಂಟಿ ಉದ್ದಿಮೆಗಳಿಗೆ ಹೊಸ ಪ್ರೋತ್ಸಾಹ ನೀಡಲು ನಿರ್ಧರಿಸಲಾಗಿದೆ. ಒಳ್ಳೇ ಭಾವನೆಗಳೇನಿದ್ದರೂ ಈ ಎರಡು ದೇಶಗಳ ನಡುವಿನ ಆರ್ಥಿಕ ಸಂಬಂಧಗಳು ಸೋವಿಯೆತ್ ಒಕ್ಕೂಟ ಕೇಂದ್ರೀಕೃತ ಆದೇಶವನ್ನವಲಂಬಿಸಿದ್ದ ಆರ್ಥಿಕತೆಯಿಂದ ದೂರ ಸರಿದಾಗ ಒಂದು ಅಲ್ಲೋಲ ಕಲ್ಲೋಲದ ಅವಧಿಯನ್ನು ಪ್ರವೇಶಿಸುತ್ತದೆ ಎಂದೂ ಒಪ್ಪಿಕೊಳ್ಳಬೇಕಾಗುತ್ತದೆ.

-ಡೆಕ್ಕನ್ ಹೆರಾಲ್ಡ್, ಜುಲೈ 27

★ ವಿ.ಪಿ.ಸಿಂಗ್‌ರ ಭೇಟಿ ಕಾಲದಲ್ಲಿ ಭಾರತ-ಸೋವಿಯೆತ್ ಚರ್ಚೆಗಳು ಎರಡು ದೇಶಗಳ ನಡವಿನ ಆರ್ಥಿಕ ಸಂಬಂಧಗಳ ಮುಂದುವರಿಕೆ ಮತ್ತು ಅವನ್ನು ಬಲಗೊಳಿಸುವ ಬಗ್ಗೆ ಒತ್ತು ನೀಡಿವೆ.......

ಭಾರತದ ಬೆಳವಣಿಗೆಯಲ್ಲಿ ಸೋವಿಯೆತ್ ಒಕ್ಕೂಟ ಒಂದು ವಿಶೇಷ ಪಾತ್ರ ವಹಿಸಿದೆ-ಕಲ್ಲಿದ್ದಲು, ಉಕ್ಕು, ತೈಲ, ವಿದ್ಯುತ್ ಉತ್ಪಾದನೆ, ಅಲ್ಯುಮಿನಿಯಂ, ಭಾರೀ ಇಂಜಿನಿಯರಿಂಗ್ ಮುಂತಾದ ಆಧುನಿಕ ಕೈಗಾರಿಕಾ ಚಟುವಟಿಕೆಗಳ ಮಹತ್ವದ ಕ್ಷೇತ್ರಗಳಲ್ಲಿ ಅಮೂಲ್ಯ ನೆರವು ನೀಡಿ. ಇದು ನಡೆದದ್ದು ದೀರ್ಘ ಕಾಲದ ಕಡಿಮೆ ಬಡ್ಡಿದರದ ಸಾಲಗಳ ಆಧಾರದ ಮೇಲೆ-ಈ ವಾಣಿಜ್ಯ ವ್ಯವಹಾರಗಳು ಒಂದು ವಿಶೇಷ ರೂಪಾಯಿ-ರೂಬಲ್ ಒಪ್ಪಂದದ ಮೇರೆಗೆ ನಡೆದಿವೆ. ಇದು ಭಾರತದ ವಿದೇಶಿ ವಿನಿಮಯ ಕೊರತೆ ಹಾಗೂ ಸಮಸ್ಯೆಗಳ ದೃಷ್ಟಿಯಿಂದ ನೋಡಿದಾಗ ಅತ್ಯಂತ ಮಹತ್ವದ ಅಂಶವಾಗಿತ್ತು. ಏಕೆಂದರೆ ಇದರಿಂದ ನಮ್ಮ ನಿವ್ವಳ ವಿದೇಶೀ ವಿನಿಮಯ ಹೊರಗೆ ಹೋಗುತ್ತಿಲ್ಲ. ಭಾರತ-ಸೋವಿಯೆತ್ ಆರ್ಥಿಕ ಸಂಬಂಧಗಳು, ರಕ್ಷಣಾ ಕ್ಷೇತದಲ್ಲಿನ ಸಂಬಂಧಗಳೊಂದಿಗೆ ಒಂದು ವಿಶೇಷ ರಾಜಕೀಯ ಸಂಬಂಧದ ಭಾಗ. ಭಾರತ ಸರ್ಕಾರದಲ್ಲಿ ಬದಲಾವಣೆಗಳಾದರೂ ಇದು ಮುಂದುವರೆದಿದೆ.

-ಇಂಡಿಯನ್ ಎಕ್ಸ್‌ಪ್ರೆಸ್, ಜುಲೈ 27

★ ಸೋವಿಯೆತ್-ಭಾರತ ಅಂಶ ವಿಶ್ವ ರಾಜಕೀಯದ ಮೇಲೆ ಈಗಲೂ ಪ್ರಭಾವ ಬೀರುತ್ತಿದೆ. ಪ್ರಸ್ತುತ ಸೋವಿಯೆತ್ ಭಾರತ ಶೃಂಗ ಸಭೆ ವಿಶ್ವಾದ್ಯಂತ ನಡೆಯುತ್ತಿರುವ ಆಳವಾದ, ಅಭೂತಪೂರ್ವ ಬದಲಾವಣೆಗಳ ನಡುವೆ ಈ ಪ್ರಭಾವಕ್ಕೆ ಇನ್ನಷ್ಟು ಹರಹು ನೀಡುತ್ತದೆ ಎಂಬುದು ನನ್ನ ವಿಶ್ವಾಸ.

ರವೀಂದ್ರನಾಥ್ ಟಾಗೋರರು ಒಮ್ಮೆ ಹೇಳಿದ್ದರು-ಇತರ ದೇಶಗಳೂ ಪ್ರಗತಿಯಹಾದಿ ಹಿಡಿಯದೆ ಯಾವುದೇ ದೇಶ ಪ್ರಗತಿಯ ಹಾದಿ ಹಿಡಿಯಲಾರದು ಎಂದು. ನಮ್ಮ ಹೊಸ ಯೋಜನೆಯ ಜಾಗತಿಕವಾಗಿ ಸ್ವೀಕರಿಸಲ್ಪಟ್ಟ ವಿಚಾರಗಳಲ್ಲಿ ಇದೂ ಒಂದು ಎಂದು ತೃಪ್ತಿಯಿಂದ ನಾವು ಗಮನಿಸುತ್ತೇವೆ.

ದೇಶಗಳ ವಿಶ್ವ ಸಮುದಾಯಕ್ಕೂ, ಭಾರತ, ಸೋವಿಯೆತ್ ಒಕ್ಕೂಟದಂತಹ ಬಹು ರಾಷ್ಟ್ರೀಯ ಪ್ರಭುತ್ವಗಳಿಗೂ ಇದು ಅನ್ವಯವಾಗುತ್ತದೆ.

-ಭಾರತದ ಪ್ರಧಾನಿಯನ್ನು ಸ್ವಾಗತಿಸುತ್ತಾ ಗೊರ್ಬಚೆವ್.

ಬಾಲಂಗೋಚಿ

★ ದಿಲ್ಲಿಯಲ್ಲಿ ಇತ್ತೀಚೆಗೆ ನಡೆದ ಎ.ಐ.ಸಿ.ಸಿ.(ಐ) ಅಧಿವೇಶನದಲ್ಲಿ 'ಕಾಂಗ್ರೆಸ್ ಟೋಪಿ'ಗಳು ಕಂಡು ಬರುತ್ತಿರಲಿಲ್ಲವೆಂದು ಪತ್ರಿಕೆಗಳ ವರದಿ.

ಕಳೆದ ನಾಲ್ಕು ದಶಕಗಳಲ್ಲಿ ಜನಗಳ 'ಟೋಪಿ' ಹಾಕಿ

Printed and Published by P.Ramachandra Rao on behalf of Comminist Party of India(Marxist), Karnataka State Committee,
2nd cross, Muneswara Black, palace Guttahalli, Bangalore-560003, Editor P.RAMACHANDRA RAO : Phone Number [illegible]